
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


17 ಜೂನ್ 2015 ಪುಟ 20 ರೂ. 15/-



ಕಂಗನಾ ಎಂಬ ಬೆಂಕಿಚೆಂಡು




ಹೀರೋ ಸೊಕ್ಕು ಸಿನಿಮಾ ಸುಕ್ಕು!



ಮಳವಳ್ಳಿ ಅನ್ನದಾನಿಯ ದಲಿತ ಪುಂಡಾಟ!



ಕುಂದಾಪುರ ಹಾಲಾಡಿಗೆ ರವಿ ಪೂಜಾರಿ ಹೆದರಿಸಿದ್ದು ನಿಜವಾ?



ಡಯಾಬಿಟೀಸ್ ಎಂಬ ಮಿತ


ಕೆಲವು ವೈದ್ಯರುಗಳು ಹೀಗೆ ಹೇಳುತ್ತಾರೆ. ಒಂದು ವೇಳೆ ನೀವು ಒಂದು ರೋಗವನ್ನು ಆಯ್ಕೆ ಮಾಡಿಕೊಳ್ಳಲೇಬೇಕು ಎಂದಾದರೆ, ಥೈರಾಯ್ಡ್ (ಹೈಪೋಥೈರಾಯ್ಡ್ - ಥೈರಾಯ್ಡ್ ಗ್ರಂಥಿ ಕಡಿಮೆ ಕೆಲಸ ಮಾಡುವ ಸಮಸ್ಯೆ) ರೋಗವನ್ನು ಆಯ್ಕೆ ಮಾಡಿಕೊಳ್ಳಿ. ಇಂಥ ರೋಗ ನನಗೆ ಬೇಡವೇ ಬೇಡ ಎಂಬ ಆಯ್ಕೆ ಇರುವುದಾದಲ್ಲಿ, ಡಯಾಬಟಿಸ್ (ಸಕ್ಕರೆ ಕಾಯಿಲೆ) ಅನ್ನು ಬೇಡವೆಂದು ದೂರವಿಡಿ. ಹೀಗೆ ಹೇಳಲು ಕಾರಣವಿಲ್ಲದಿಲ್ಲ, ಎರಡೂ ಸಮಸ್ಯೆಗಳು ದೇಹದಲ್ಲಿ ಒಂದೊಂದು ಹಾರ್ಮೋನ್‌ನ ಉತ್ಪತ್ತಿಯಲ್ಲಿ ವ್ಯತ್ಯಯ ಉಂಟಾಗುವುದರಿಂದ ಬರುವಂಥವು. ಹೈಪೋಥೈರಾಯ್ಡಿಸಂ ಎಂಬುದು ಥೈರಾಯ್ಡ್ ಗ್ರಂಥಿಯಿಂದ (ಕತ್ತಿನ ಮುಂಭಾಗದಲ್ಲಿರುವ ಒಂದು ಗ್ರಂಥಿ) ಥೈರಾಕ್ಸಿನ್ ಎಂಬ ಹಾರ್ಮೋನ್ ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಸ್ರವಿಸುವುದರಿಂದ ಉಂಟಾಗುವ ಸಮಸ್ಯೆ. ಅದೇ ರೀತಿ ಡಯಾಬಿಟೀಸ್ ಕಾಯಿಲೆಯು ಹೊಟ್ಟೆಯಲ್ಲಿರುವ ಮೇದೋಜೀರಕಾಂಗದ ಒಂದು ಭಾಗದಿಂದ ಸ್ರವಿಸಬೇಕಾದ ಇನ್ಸುಲಿನ್ ಅಗತ್ಯಕ್ಕಿಂತ ಕಡಿಮೆಯಾಗುವುದರಿಂದ ಉಂಟಾಗುವ ಸಮಸ್ಯೆ. ಥೈರಾಕ್ಸಿನ್ ಮತ್ತು ಇನ್ಸುಲಿನ್ ಎರಡನ್ನೂ ಕೃತಕವಾಗಿ ಹೊರಗಡೆ ತಯಾರಿಸಿ ಆಯಾ ಸಮಸ್ಯೆ ಇದ್ದವರಿಗೆ ನೀಡಬಹುದು. ಹಾಗಿದ್ದ ಮೇಲೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು, ಒಂದನ್ನು ದೂರವಿಡಬೇಕು ಯಾಕೆ?

ಇದಕ್ಕೆ ಕಾರಣವಿದೆ. ಥೈರಾಕ್ಸಿನ್‌ಅನ್ನು ಮಾತ್ರೆಯ ರೂಪದಲ್ಲಿ ನುಂಗಿಬಿಟ್ಟರೆ ಸಾಕು. ಇನ್ಸುಲಿನ್‌ಅನ್ನು ಇಂಜೆಕ್ಷನ್ ಆಗಿಯೇ ತೆಗೆದುಕೊಳ್ಳಬೇಕು. ಡಯಾಬಟಿಸ್ ಇರುವವರಿಗೆ ಮಾತ್ರೆಗಳನ್ನು ಕೊಡಲಾಗುತ್ತದಾದರೂ, ಅವು ಇನ್ಸುಲಿನ್ ಮಾತ್ರೆಗಳಲ್ಲ, ಮೇದೋಜೀರಕ ಗ್ರಂಥಿಯಿಂದ ಹೆಚ್ಚೆಚ್ಚು ಇನ್ಸುಲಿನ್ ಸ್ರವಿಸುವಂತೆ ಮಾಡುವ ಮಾತ್ರೆಗಳು ಅಷ್ಟೇ. ಥೈರಾಕ್ಸಿನ್ ಮಾತ್ರೆಯನ್ನು ಸೂಕ್ತ ಪ್ರಮಾಣದಲ್ಲಿ ಬೆಳಗ್ಗೆ ಒಮ್ಮೆ ತೆಗೆದುಕೊಂಡರೆ, ಅದು ದೇಹದಲ್ಲಿ ಏನೆಲ್ಲಾ ಮಾಡಬೇಕೋ ಅದನ್ನು ದಿನವಿಡೀ ಮಾಡುತ್ತದೆ. ಆದರೆ, ಇನ್‌ಸುಲಿನ್ ಇಂಜೆಕ್ಷನ್ ಅಥವಾ ಇನ್‌ಸುಲಿನ್ ಹೆಚ್ಚಾಗಿ ಸ್ರವಿಸುವಂತೆ ಮಾಡುವ ಮಾತ್ರೆಗಳು ಹಾಗಲ್ಲ, ಅವನ್ನು ತೆಗೆದುಕೊಂಡ ಮೇಲೆ, ಅದಕ್ಕೆ ತಕ್ಕಂತೆ ಇಡೀ ದಿನ ಆಗಾಗ್ಗೆ ಆಹಾರ ಸೇವಿಸುವುದರ ಮುಖಾಂತರ ರಕ್ತದ ಸಕ್ಕರೆ ಪ್ರಮಾಣವನ್ನೂ ಒಂದೇ ಬಗೆಯಲ್ಲಿ ಇಟ್ಟುಕೊಂಡಿರಬೇಕು. ಹೀಗೆಲ್ಲಾ ಮಾಡಿದ ಮೇಲೂ, ಅಂದರೆ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಇರಬೇಕಾದ ಪ್ರಮಾಣದಲ್ಲಿ ನಿರಂತರವಾಗಿ ಇಟ್ಟುಕೊಂಡರೂ, ಸಕ್ಕರೆ ಕಾಯಿಲೆಯ ದೂರಗಾಮಿ ಪರಿಣಾಮಗಳನ್ನು (ಕಣ್ಣು, ಕಿಡ್ನಿ ಇತ್ಯಾದಿಗಳ ಮೇಲೆ) ತಡೆದೇ ತಡೆಯಬಹುದು ಎಂದು ಹೇಳಲಾಗದು. ಆದರೆ, ಥೈರಾಯ್ಡ್‌ನ ಕೊರತೆಯಿಂದುಂಟಾಗುವ ಬಹುತೇಕ ಎಲ್ಲಾ ಸಮಸ್ಯೆಗಳನ್ನು ಹೊರಗಿನಿಂದ ಥೈರಾಕ್ಸಿನ್ ತೆಗೆದುಕೊಳ್ಳುವುದರಿಂದ ನಿವಾರಿಸಿಕೊಳ್ಳಬಹುದು. ಹೀಗಾಗಿ, ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು, ಇನ್ನೊಂದನ್ನು ದೂರವಿಡಬೇಕು.

ವಿಷಯ ಮೇಲೆ ಹೇಳಿದಷ್ಟು ಸರಳವಾಗಿಲ್ಲವಾದರೂ, ಸತ್ಯವು ಸ್ಥೂಲವಾಗಿ ಆ ದಿಕ್ಕಿನಲ್ಲೇ ಇದೆ ಎಂಬುದಂತೂ ಖಚಿತ. ಆದರೆ, ಈ ಲೇಖನದಲ್ಲಿ ಹೇಳಹೊರಟಿರುವುದು ಇದನ್ನಲ್ಲ, ಡಯಾಬಿಟೀಸ್ ಕಾಯಿಲೆ ಸಹ ಒಂದು ವರವೇ ಆಗಿದೆ ಎಂಬುದನ್ನು, ಹೌದು, ಇದು ಡಯಾಬಿಟೀಸ್ ಕಾಯಿಲೆಯ ಇನ್ನೊಂದು ಮುಖವಾಗಿದೆ. ಇಂಥವರಿಗೆ ಡಯಾಬಿಟೀಸ್ ಬಂದೇ ಬರುತ್ತದೆ ಎಂದಾಗಲೀ, ಇಂಥವರಿಗೆ ಬರುವುದೇ ಇಲ್ಲ ಎಂದಾಗಲೀ ನೂರಕ್ಕೆ ನೂರು ಖಚಿತವಾಗಿ ಹೇಳಲು ಸಾಧ್ಯವಿಲ್ಲ, ಅತ್ಯಂತ ಶಿಸ್ತಿನ ಜೀವನ ಮಾಡುತ್ತಿರುವವರಿಗೂ ಬರಬಹುದು; ಅಶಿಸ್ತಿನ ಜೀವನ ಮಾಡುತ್ತಿರುವವರಿಗೂ ಬರಬಹುದು. ಹೀಗಿದ್ದರೂ, ಸಾಧ್ಯಾಸಾಧ್ಯತೆಗಳ ಅಂದಾಜನ್ನು ಮಾಡಬಹುದು. ಡಯಾಬಿಟೀಸ್ ಬರಲು ಆನುವಂಶೀಯತೆ, ಸ್ಥೂಲಕಾಯ, ಒತ್ತಡ, ಅಶಿಸ್ತಿನ ಜೀವನ ಇತ್ಯಾದಿ ಕಾರಣಗಳನ್ನು ಪಟ್ಟಿ ಮಾಡಲು ಸಾಧ್ಯ,

ವಂಶಪಾರಂಪರ್ಯವಾಗಿ ದಕ್ಕುವ ಆಸ್ತಿಯನ್ನು ಬೇಡವೆಂದು ಹೇಳಬಹುದಾದರೂ, ನಮ್ಮ ದೈಹಿಕ ಗುಣಾವಗುಣಗಳನ್ನು ಬೇಡವೆಂದು ಹೇಳಲಾಗದು. ಆ 'ಹಣೆಬರಹವನ್ನು ಬದಲಿಸುವ' ನಿಟ್ಟಿನಲ್ಲಿ ನಡೆಯುತ್ತಿರುವ ಸಂಶೋಧನೆಗಳು ಇನ್ನೂ ತಾರ್ಕಿಕ ಅಂತ್ಯವನ್ನು ಮುಟ್ಟಿಲ್ಲವಾದ್ದರಿಂದ ಸದ್ಯಕ್ಕೆ ಆ ಸಾಧ್ಯತೆಯನ್ನು ಪಕ್ಕಕ್ಕಿಡೋಣ. ಇನ್ನುಳಿದಂತೆ ಸ್ಥೂಲಕಾಯ, ಒತ್ತಡ ಮತ್ತು ಅಶಿಸ್ತಿನ ಜೀವನಗಳು ಒಂದಕ್ಕೊಂದು ಸಂಬಂಧ ಇರುವಂಥವಾಗಿವೆ. ನಿಮಗೆ ಡಯಾಬಿಟೀಸ್ ಇಲ್ಲ, ಅಸಿಡಿಟಿಯ ಸಮಸ್ಯೆ ಇಲ್ಲ ಎಂದಾಗ ನೀವು ಹೇಗೆ ಬೇಕಾದರೂ ಊಟ ಮಾಡುವುದು, ಯಾವಾಗ ಬೇಕಾದರೂ ಊಟ - ತಿಂಡಿ ಮಾಡುವುದನ್ನು ಮಾಡುತ್ತಿರುವುದು ಸಾಧ್ಯ ಮಾಡುತ್ತಿರುತ್ತೀರಿ. ಅದೇ ರೀತಿ, ಬೆಳಗ್ಗೆ ಎಷ್ಟು ಹೊತ್ತಿಗೆ ಏಳುವುದು, ಎಷ್ಟು ಹೊತ್ತಿಗೆ ಮಲಗುವುದು, ದೈಹಿಕ ವ್ಯಾಯಾಮ ಇತ್ಯಾದಿಗಳಿಗೂ ಯಾವ ಶಿಸ್ತು ಇರುವುದಿಲ್ಲ, ಅನಿವಾರ್ಯತೆಗಳು ಮತ್ತು ಕೆಲವರು ಮಾಡಿಕೊಂಡಿರುವ ಅಭ್ಯಾಸಗಳನ್ನು ಹೊರತುಪಡಿಸಿ ಹೆಚ್ಚಿನವರು ಈ ವಿಚಾರಗಳಲ್ಲಿ ಬಹಳ ಶಿಸ್ತನ್ನೇನೂ ಅಳವಡಿಸಿಕೊಂಡಿರುವುದಿಲ್ಲ.

ಶಿಸ್ತಿನಿಂದ ಬದುಕುವುದೂ ಸಹ ಒಂದು ಕಲೆ ಹಾಗೂ ವಿಜ್ಞಾನವಾಗಿದೆ. ಉದಾಹರಣೆಗೆ ಆಹಾರದ ವಿಚಾರವನ್ನೇ ತೆಗೆದುಕೊಳ್ಳಿ. ನಮ್ಮ ನಾಲಿಗೆಯ ರುಚಿಗೆ ತಕ್ಕಂತೆ, ಮನಸ್ಸಿನ ಬಯಕೆಗೆ ತಕ್ಕಂತೆ, ಹೊಟ್ಟೆ ತುಂಬಿದ ಭಾವನೆ ಇರಬೇಕೆಂಬ ಅಭ್ಯಾಸಕ್ಕೆ ತಕ್ಕಂತೆ ತಿನ್ನುತ್ತಿರುತ್ತೇವೆ. ಆದರಲ್ಲಿ ಲೆಕ್ಕಾಚಾರಕ್ಕೆ





ಆಸ್ಪದವಿರುವುದಿಲ್ಲ, ದೇಹದ ಸದ್ಯದ ಹಾಗೂ ದೂರದ ಅಗತ್ಯಗಳು ಮತ್ತು ಪರಿಣಾಮಗಳ ಕುರಿತ ಚಿಂತನೆ ಇರುವುದಿಲ್ಲ, 'ನನ್ನದು ಸರಳ ಜೀವನ; ದಿನಕ್ಕೆ ಒಂದೇ ಬಾರಿ ತಿನ್ನುತ್ತೇನಷ್ಟೇ', 'ನನ್ನ ದೇಹಕ್ಕೆ ಒಂದು ಸಾರಿ ತಿಂದರೆ ಸಾಕು' ಎಂದೆಲ್ಲಾ ಹೇಳುವವರು ಇದ್ದಾರೆ. ಹೌದು, ಮನುಷ್ಯರ ದೇಹಕ್ಕೆ ಅಗಾಧವಾದ ಶಕ್ತಿ ಇದೆ. ಹಾಗಾಗಿಯೇ ಬಂಡವಾಳಿಗರ ಲಾಭಕ್ಕೆ ತಕ್ಕಂತೆ ನಿಸರ್ಗವನ್ನು ಇಷ್ಟೆಲ್ಲಾ ಹಾಳುಗೆಡವಿದರೂ ಮನುಷ್ಯರು ಇನ್ನೂ ಖುಷಿಯಿಂದ ಬದುಕಿದ್ದಾರೆ ಮತ್ತು ವೈದ್ಯರುಗಳು ತಮ್ಮ ಮನಸೋ ಇಚ್ಛೆ ಹಲವು ಪ್ರಯೋಗಗಳನ್ನು ನಡೆಸಿದರೂ ರೋಗಿಗಳು ಹೇಗೋ ಚೇತರಿಸಿಕೊಳ್ಳುತ್ತಾರೆ. ಆದರರ್ಥ ಇದು ಎಲ್ಲರಿಗೂ ಸಾಧ್ಯ ಎಂದಲ್ಲ, ಪ್ರತಿಯೊಬ್ಬರ ದೇಹಕ್ಕೆ ಅಗತ್ಯಗಳು ಬೇರೆಬೇರೆಯಾಗಿರುತ್ತವೆ. ಆ ಅಗತ್ಯಗಳ ಕುರಿತು ನಿಜಕ್ಕೂ ದೇಹವನ್ನು ಕೇಳಿಕೊಳ್ಳುವ ಕೆಲಸ ನಾವ್ಯಾವತ್ತೂ ಮಾಡಿರುವುದಿಲ್ಲ,

ಡಯಾಬಿಟೀಸ್ ಇವ್ಯಾವನ್ನೂ ಒಪ್ಪುವುದಿಲ್ಲ, ನಿಜಕ್ಕೂ ನೀವು ಡಯಾಬಿಟೀಸ್‌ಅನ್ನು ಮೀರಬೇಕೆಂದಿದ್ದರೆ, ನಿಮ್ಮ ದೇಹದೊಂದಿಗೆ ಒಂದಾಗಬೇಕಿರುತ್ತದೆ. ವ್ಯಾಯಾಮ, ನಿಯಮಿತ ಕಾಲಕ್ಕೆ ನಿಯಮಿತ ಆಹಾರ, ಮನಸ್ಸಿನ ಒತ್ತಡಗಳನ್ನು ನಿವಾರಿಸಿಕೊಳ್ಳಲೇಬೇಕಾದ ಕ್ರಮಗಳನ್ನು ಅದು ಕೇಳುತ್ತದೆ. ಅಂದರೆ ಇದುವರೆಗಿನ ಅಶಿಸ್ತನ್ನು ನಿಗ್ರಹಿಸುವ ಒತ್ತಡವನ್ನು ನಿಮ್ಮ ಮೇಲೆ ಹಾಕುತ್ತದೆ. ನೀವು ದೇಹದ ಮಾತನ್ನು ಕೇಳುವುದಾದಲ್ಲಿ, ಅದು ನಿಮ್ಮ ಅಡಿಯಾಳಾಗಿರುತ್ತದೆ. ಇಲ್ಲದಿದ್ದರೆ, ಅದು ನಿಮ್ಮ ದೇಹವನ್ನು ಹಾಗೂ ಮನಸ್ಸನ್ನು ಇಂಚಿಂಚಾಗಿ ಕರಗಿಸುತ್ತಾ ಸಾಗುತ್ತದೆ.

ದೇಹದ ಮಾತನ್ನು ಕೇಳುವುದೆಂದರೇನು? ಇದು ಸ್ವಲ್ಪ ಕಷ್ಟವೇ. ಏಕೆಂದರೆ, ಹಳೇ ರೋಗಿಗಳು ನಿಮ್ಮ ದೇಹದ ಕುರಿತಂತೆ ಪುಕ್ಕಟೆಯಾಗಿ ಮೂಟೆಗಟ್ಟಲೆ ಸಲಹೆಗಳನ್ನು ಕೊಡುತ್ತಿರುತ್ತಾರೆ. ಮೆಂತ್ಯ ತಿನ್ನುವುದು, ಹಾಗಲಕಾಯಿ ತಿನ್ನುವುದು, ಮರದ ಲೋಟದಲ್ಲಿ ನೀರಿಟ್ಟು ಬೆಳಗ್ಗೆ ಕುಡಿಯುವುದು, ತಾಮ್ರದ ಚೊಂಬಿನಲ್ಲಿ ನೀರು ಕುಡಿಯುವುದರಿಂದ ಹಿಡಿದು, ಆ ಊರಿನ ಆ ವೈದ್ಯರ ಮಾತ್ರೆ ರಾಮಬಾಣವಾಗಿ ಕೆಲಸ ಮಾಡಿದ್ದು, ಇನ್ನಾವುದೋ ಬೇರು ಡಯಾಬಟೀಸ್‌ಅನ್ನು ಬೇರುಸಮೇತ ಕಿತ್ತು ಹಾಕಿದ್ದು, ಇನ್ನಾವುದೋ ಕಬ್ಬಿಣದ ರಾಡನ್ನು ನಿರ್ದಿಷ್ಟ ಬಗೆಯಲ್ಲಿ ಎತ್ತಿ ಇಳಿಸಿದರೆ ಅದು ನಿಮ್ಮ ಮೇದೋಜೀರಕವನ್ನು ಹಿಂಡಿ ಹೆಚ್ಚು ಇನ್ಸುಲಿನ್ ಉತ್ಪಾದನೆ ಮಾಡುವುದು ಹೀಗೆ ವಿಜ್ಞಾನಿಗಳು ದಂಗುಬಡಿದು ಹೋಗುವಂತಹ ವಿವರಣೆಗಳ ಮೂಲಕ ಪರಿಹಾರಗಳನ್ನು ಸೂಚಿಸುತ್ತಿರುತ್ತಾರೆ.

ಇಂತಹ ಮಿಥ್‌ಗಳು, ಅರ್ಧಸತ್ಯಗಳು, ಅರೆ ಪರಿಹಾರಗಳನ್ನು ಕೇವಲ 'ಸಾಮಾನ್ಯ' ಜನರು ಮಾತ್ರ ಸೃಷ್ಟಿಸುತ್ತಾರೆ ಎಂದಲ್ಲ, ವೈದ್ಯರುಗಳೂ ಇದಕ್ಕೆ ಸಾಕಷ್ಟು ಕೊಡುಗೆ ಕೊಟ್ಟಿದ್ದಾರೆ. ಅವನ್ನು ಕೇಳಿಯೇ ನಮ್ಮ ಕೆಲವು ಸಕ್ಕರೆ ರೋಗಿಗಳು ವಿಚಿತ್ರವಾದ ಅಭ್ಯಾಸವನ್ನು ಮಾಡಿಕೊಂಡಿರುತ್ತಾರೆ. ಅವರು ಕಾಫಿಯನ್ನು ಮಾತ್ರ ಸಕ್ಕರೆರಹಿತ ಕುಡಿಯುತ್ತಾರೆ. ಉಳಿದಂತೆ ಸಂಪೂರ್ಣ ದೇಹ ಹಾಳು ಮಾಡುವಂತಹ ಆಹಾರಾಭ್ಯಾಸವನ್ನು ರೂಢಿಸಿಕೊಂಡಿರುತ್ತಾರೆ, ಗೋಧಿ ಮತ್ತು ರಾಗಿ ತಿಂದರೆ ಡಯಾಬಟೀಸ್‌ನ ಕಥೆ ಮುಗಿದಂತೆಯೇ ಎಂದು ಕೆಲವರು ಹೇಳಿದ್ದರೆ, ರಾಗಿ ತಿನ್ನಬೇಡಿ ಅದರಿಂದ ತೊಂದರೆಯಾಗುತ್ತದೆ ಎಂದು ಇನ್ನು ಕೆಲವರು ಹೇಳುತ್ತಾರೆ. ಇವೆಲ್ಲದರ ನಡುವೆ ಈ ಹಳೇ ವೈದ್ಯ ಮತ್ತು ಹೊಸರೋಗಿ ಹೇಳುತ್ತಿರುವ 'ದೇಹದ ಮಾತನ್ನು ಕೇಳಿ' ಎಂಬುದನ್ನು ಬೇರೆ ಕೇಳಬೇಕು. ರಾಮರಾಮಾ! ಡಯಾಬಟೀಸ್ ರೋಗಿಗಳ ಅತಿ ದೊಡ್ಡ ಸಮಸ್ಯೆ ಈ ನೂರೆಂಟು ಬಗೆಯ ಪುಕ್ಕಟೆ ಸಲಹೆಗಳದ್ದೇ ಆಗಿದೆ.

ನಿಮಗೆ ನೀವೇ ವೈದ್ಯರಾಗಬೇಕು. ನಿಮ್ಮ ದೇಹದ ಮಾತನ್ನು ಕೇಳಬೇಕು ಎಂದರೆ, ದೇಹ ಯಾವ ರೀತಿಯಲ್ಲಿ ತನ್ನ ಗುಟ್ಟನ್ನು ಬಿಟ್ಟುಕೊಡುತ್ತದೆ ಎಂಬುದನ್ನು ಅರಿಯಬೇಕು. ಅದರಲ್ಲಿ ಬಹುಮುಖ್ಯವಾದದ್ದು, ಕಾಲಾನುಕಾಲದಿಂದ ಪ್ರಯೋಗಕ್ಕೊಳಪಟ್ಟು ಸರಿಯೆಂದು ಸಾಬೀತಾಗಿರುವ ರಕ್ತದಲ್ಲಿನ ಗ್ಲುಕೋಸ್ ಪರೀಕ್ಷೆಯೇ ಆಗಿದೆ. ರಕ್ತ ಪರೀಕ್ಷಿಸಿಕೊಳ್ಳಿ, ಅದು ಜಾಸ್ತಿಯಿದೆಯೆಂದು ಹೇಳಿದರೆ, ಜಾಸ್ತಿ ಇದೆ ಎಂದರ್ಥ. ಅದು ಕಡಿಮೆ ಇದೆ ಎಂದರೆ ಕಡಿಮೆ ಇದೆ ಎಂದರ್ಥ. ನನಗೆ ಈಗೀಗ ಹೆಚ್ಚು ಬಾಯಾರಿಕೆಯಾಗ್ತಿಲ್ಲ, ಹಾಗಾಗಿ ಸಕ್ಕರೆ ನಾರ್ಮಲ್ ಇರಬೇಕು ಎಂದು ಅಂದುಕೊಳ್ಳಬಾರದು. ಸುಸ್ತಾಗ್ತಿದೆ ಹಾಗಾಗಿ ಸಕ್ಕರೆ ಜಾಸ್ತಿ ಇರಬಹುದು ಎಂಬುದೂ ಸರಿಯಲ್ಲ,

ದಿನದ ಬೇರೆ ಬೇರೆ ಸಂದರ್ಭಗಳಲ್ಲಿ, ಮಧ್ಯ ರಾತ್ರಿಯೂ ಸೇರಿದಂತೆ, ಪರೀಕ್ಷೆ ಮಾಡಿಕೊಳ್ಳುವುದೂ ಅಗತ್ಯ, ಏಕೆಂದರೆ, ಬೆಳಗ್ಗೆ ಖಾಲಿ ಹೊಟ್ಟೆಯಲ್ಲಿ ಮತ್ತು ತಿಂಡಿ ತಿಂದ ನಂತರದ ಎರಡು ಗಂಟೆಯಲ್ಲಿ ಮಾಡಿಕೊಳ್ಳುವ ಪರೀಕ್ಷೆ ಒಂದೇ ಲಿಟ್ಮಸ್ ಟೆಸ್ಟ್ ಅಲ್ಲ, ಅದು ಬೆಳಗ್ಗೆ ತಿನ್ನುವ ಮುಂಚೆ ಮತ್ತು ತಿಂಡಿ ತಿಂದ ನಂತರ ರಕ್ತದಲ್ಲಿ ಎಷ್ಟು ಸಕ್ಕರೆ ಇದೆ ಎಂಬುದನ್ನು ಮಾತ್ರ ಹೇಳುತ್ತದೆ. ಮಧ್ಯಾಹ್ನ ಊಟಕ್ಕೆ ಮುಂಚೆ, ಊಟವಾದ ನಂತರ, ಸಂಜೆ, ರಾತ್ರಿ ಹೀಗೆ ವಿವಿಧ ಸಂದರ್ಭಗಳಲ್ಲಿ ಸಕ್ಕರೆ ಹೆಚ್ಚಿದ್ದರೆ? ನಾನು ಮಾತ್ರೆ ತೆಗೆದುಕೊಳ್ಳಲು ಆರಂಭಿಸಿದ ಮೇಲೆ ಸತತವಾಗಿ ಒಂದು ವರ್ಷದ ಕಾಲ ಪ್ರತೀ ತಿಂಗಳೂ ಟೆಸ್ಟ್ ಮಾಡಿಸಿದ್ದೀನಿ. ಎಲ್ಲಾ ಸಾರಿಯೂ ನಾರ್ಮಲ್ ಇತ್ತು, ಹಾಗಾಗಿ ಈಗ ಅದೇ ಮಾತ್ರೆ ಮುಂದುವರೆಸಿದ್ದೇನೆ, ಕಳೆದೊಂದು ವರ್ಷದಿಂದ ಮತ್ತೆ ಟೆಸ್ಟ್ ಮಾಡಿಸಲು ಹೋಗಿಲ್ಲ ಎಂಬುದು ಅವೈಜ್ಞಾನಿಕ. ನಿಮ್ಮ ದೇಹದ ಮಾತನ್ನು ಆಗಾಗ ಕೇಳಿ.

ಎರಡನೆಯದ್ದು ಆಹಾರದ್ದು, ನಿಮ್ಮ ದೇಹದ ಆಹಾರದ ಅಗತ್ಯ ಎಷ್ಟಿದೆಯೋ ಅಷ್ಟನ್ನೇ ತಿನ್ನಿ. ಅಂದರೆ ಸರಿಸು... ನಿಮಗೆ ಸಕ್ಕರೆ ಕಾಯಿಲೆ ಬರುವ ಸಾಕಷ್ಟು ... ನೀವು ಒಂದಿಡೀ ದಿನದಲ್ಲಿ ಎಷ್ಟು ತಿನ್ನುತ್ತಿದ್ದಿರೋ ಅ... ಸ್ವಲ್ಪ ಕಡಿಮೆ ಅಷ್ಟೇ. ಅದನ್ನು ಈಗ ಆರು ... ಮಾಡಿಕೊಳ್ಳಿ, ಆರು ಸಾರಿ ತಿನ್ನಿ, ರಾಗಿ, ಗೋಧಿ, ... ಅರ್ಕ ಇತ್ಯಾದಿಗಳಲ್ಲೂ ಸಕ್ಕರೆ ಪ್ರಮಾಣವಿದೆ. ... ಅವುಗಳಲ್ಲಿ ನಾರಿನ ಅಂಶ ಹೆಚ್ಚಿರುತ್ತದೆ ಮತ್ತು ಅಕ್ಕಿಯ ರೀತಿಯ ಸರಳ ಸಕ್ಕರೆಗಳಲ್ಲ ಅಷ್ಟೇ. ... ಆ ರೀತಿಯ ಲೆಕ್ಕಾಚಾರದೊಂದಿಗೆ ತಿನ್ನಿ, ಯಾವಾ... ಒಮ್ಮೆ ಸ್ವಲ್ಪ ಹಣ್ಣು ತಿಂದರೆ, ಸ್ವಲ್ಪ ಸಿಹಿ ತಿಂಡಿ ... ಸ್ವಲ್ಪ ಸಕ್ಕರೆ ಸಹಿತ ಕಾಫಿ ಕುಡಿದರೆ ಏನೂ ಸಮಸ್ಯೆ... ಆದರೆ ಸ್ವಲ್ಪ ಹಣ್ಣು, ಸ್ವಲ್ಪ ಸಿಹಿ ತಿಂಡಿ, ಸ್ವಲ್ಪ ಸಕ್ಕರೆ ಕಾಫಿಯನ್ನು ಒಂದೇ ಬಾರಿಗೆ ತಿನ್ನಬೇಡಿ.

ಮೂರನೆಯದ್ದು ವ್ಯಾಯಾಮದ್ದು. ವ್ಯಾಯಾಮ ... ಸರಿ. ಯಾವಾಗ ಮಾಡಬೇಕು. ದಿನವಿಡೀ ಮಾಡ... ಕೆಲವು ದಿನಗಳಲ್ಲಿ ಅದು ಸಾಧ್ಯವಾಗುವುದಿಲ್ಲ, ದಿ... ಮಾಡಲಾಗದ್ದಾಗ ಬೆಳಗ್ಗೆ ಅಥವಾ ಸಂಜೆ ಮಾಡು... ಒಳ್ಳೆಯದೇ. ಆದರೆ ದಿನವಿಡೀ ಮಾಡಲಾಗುವುದಿಲ್ಲ ... ಮಾತ್ರ ಹೇಳಬೇಡಿ. ನಾನು ಕಚೇರಿಗೆ ಹೋಗಿ... ಇಡೀ ದಿನ ಟೇಬಲ್ ಮೇಲಿನ ಕಂಪ್ಯೂಟರ್ ... ಕೂತಿರುವುದೇ ಕೆಲಸ ಏನು ಮಾಡುವುದು? ಎನ್ನ... ದಿನಕ್ಕೆ ನಾಲ್ಕು ಸಾರಿ ಟಾಯ್ಲೆಟ್‌ಗೆ ಹೋಗುತ್ತೀರ... ದೂರದಲ್ಲಿರುವ ಟಾಯ್ಲೆಟ್‌ಗೆ ಹೋಗಿ. ಅದಕ್ಕೂ ನೇ... ಹೋಗಬೇಡಿ, ಸುತ್ತಾಕಿಕೊಂಡು ಹೋಗಿ. ನಿಮಗೆ ಬೇ... ಫೈಲನ್ನು ತರಲು ಇನ್ನೊಬ್ಬರಿಗೆ ಹೇಳಬೇಡಿ. ... ನಡೆದುಕೊಂಡು ಹೋಗಿ ತನ್ನಿ. ನಿಮ್ಮಿಂದ ... ಕ್ಯಾಬಿನ್ನಿನಲ್ಲಿ ಕುಳಿತಿರುವ ಸಹೋದ್ಯೋಗಿಯೊ... ಮಾತನಾಡಲು ಇಂಟರ್‌ಕಾಂ ಬಳಸಬೇಡಿ. ಎದ್ದು ಹೋ... ನೇರವಾಗಿ ಮಾತನಾಡಿ. ಮನುಷ್ಯರ ಜೀವಂತ ... ನೋಡಿ ಮಾತನಾಡುವುದರಿಂದ ಬಹಳ ಒಳ್ಳೆಯದಾಗ... ನಿಮ್ಮದು ಈ ರೀತಿಯ ಕೆಲಸವಲ್ಲವಾ? ಅಲ್ಲೂ ... ದಾರಿ ಇದೆ ನೋಡಿ.

ದಾರಿ ಇದ್ದೇ ಇದೆ. ಒತ್ತಡ ನಿವಾರಣೆಗೂ ... ಇದೆ. ಬದುಕಿನಲ್ಲಿ ಸ್ವಲ್ಪ ತತ್ವಜ್ಞಾನವೂ ಅಗತ್ಯವಿದೆ. ... ಸಹನೆ, ಸಹಿಷ್ಣುತೆ ಇತ್ಯಾದಿ ಇತ್ಯಾದಿಗಳು. ಯೋಗ, ... ಇವೆಲ್ಲಾ ನಮಗೋಸ್ಕರವೇ ಇವೆ.

ಅಂದರೆ, ಒಟ್ಟಾರೆ ಇದುವರೆಗೆ ನಾವು ಯಾವುದ... ಮಾಡಬೇಕಿತ್ತೋ, ಆದರೆ ಮಾಡುತ್ತಿರಲಿಲ್ಲವೋ ಅ... ಈಗ ಮಾಡಬೇಕಿದೆ. ಇದು ನಿತ್ಯದ ಎಲ್ಲಾ ಕೆಲಸಗ... ಶಿಸ್ತು ತರುತ್ತದೆ; ಮನುಷ್ಯ ಸಂಬಂಧಗಳಲ್ಲೂ ಬದಲ... ಕೇಳುತ್ತದೆ; ಸರಳ ಜೀವನಶೈಲಿಯನ್ನು ಬಯಸು... ಆಧುನಿಕತೆ ತಂದೊಡ್ಡಿರುವ ಅನಪೇಕ್ಷಿತ ಸಂಗತಿ... ತೊರೆಯಲು ಒತ್ತಾಯಿಸುತ್ತದೆ. ನಮ್ಮನ್ನು ಹೊಸ ರೀ... ಮನುಷ್ಯರನ್ನಾಗಿಸುತ್ತದೆ. ಹಾಗಾಗಿಯೇ ಇದೊಂದು ... ಎಂದಿದ್ದು.

ಹಾಗೆಂದು ನಮಗೂ ಡಯಾಬಿಟೀಸ್ ಬರಲಿ ಎ... ಎಲ್ಲರೂ ಬಯಸಬೇಕು ಎಂದೇನಲ್ಲ, ಆದರೆ, ಡಯಾಬ... ಬಂದನಂತರ ಅದನ್ನು ಸೂಕ್ತವಾಗಿ ನಿರ್ವಹಿಸುವ ... ವಿಜ್ಞಾನ ಮತ್ತು ಶಿಸ್ತನ್ನು ರೂಢಿಸಿಕೊಂಡರೆ ಅದು ... ಒಟ್ಟಾರೆ ಬದುಕಿನ ಶೈಲಿಯಲ್ಲೇ ಒಂದು ಸಕಾರ... ಬದಲಾವಣೆ ತರಲು ಸಾಧ್ಯ,

ನೀರು, ನೆರಳಿಲ್ಲದ ಅಚ್ಛೆ ದಿನ್

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಇತ್ತೀಚೆಗೆ ಪಕ್ಕದ ಆಂಧ್ರ ಪ್ರದೇಶದಿಂದ ದೂರದ ಪಂಜಾಬ್ ರಾಜ್ಯದ ತನಕ ಬೀಸಿದ 'ಹೀಟ್ ವೇವ್' ಎರಡೂವರೆ ಸಾವಿರಕ್ಕಿಂತ ಹೆಚ್ಚು ಜನರ ಪ್ರಾಣವನ್ನೇ ತೆಗೆದುಕೊಂಡಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಾಕೃತಿಕ ವಿಕೋಪಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವ ಎಮ್-ಡ್ಯಾಟ್ ಸಂಸ್ಥೆಯ ಪ್ರಕಾರ ಈ ಹೀಟ್ ವೇವ್ ಜಾಗತಿಕ ಇತಿಹಾಸದಲ್ಲೇ ತೀವ್ರತೆಯಲ್ಲಿ ಐದನೆಯದ್ದು ಮತ್ತು ಭಾರತದ ಇತಿಹಾಸದಲ್ಲಿ ಎರಡನೆಯದ್ದು.

ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸತ್ತಿದ್ದು ಆಂಧ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿ. ಆ ಎರಡೂ ರಾಜ್ಯಗಳಲ್ಲಿ ತಾಪಮಾನ 46 ಡಿಗ್ರಿಗಿಂತಲೂ ಏರಿತ್ತು. ರಾಜಧಾನಿ ದೆಹಲಿಯಲ್ಲಿ ಉಷ್ಣಾಂಶ 46 ಡಿಗ್ರಿಗಿಂತಲೂ ಹೆಚ್ಚಾದಾಗ ಬಹಳಷ್ಟು ಕಡೆ ರಸ್ತೆಯ ಮೇಲಿನ ಟಾರ್ ಕೂಡ ಕರಗಲಾರಂಭಿಸಿತು. ಇಂತಹ ಉಷ್ಣಾಂಶದಲ್ಲಿ ಇನ್ನು ಮಾನವರಾದರೂ ಪ್ರಾಣವನ್ನು ರಕ್ಷಿಸಿಕೊಳ್ಳುವುದು ಹೇಗೆ?

ಒಂದು ವರದಿಯು ದೆಹಲಿಯಲ್ಲಿ ಕಟ್ಟಡ ಕಾರ್ಮಿಕಳಾಗಿರುವ ರತ್ನಾದೇವಿ ಎಂಬಾಕೆಯ ಸ್ಥಿತಿಗತಿಯನ್ನು ವಿವರಿಸಿತ್ತು. ತನ್ನ ಮತ್ತು ತನ್ನ ಮಗಳ ಹೊಟ್ಟೆಪಾಡಿಗೆ ದುಡಿಯಲೇಬೇಕಾದ ಕರ್ಮ ದೇವಿಯದ್ದು. ಆ ಕಾರಣಕ್ಕೇ ಹೀಟ್‌ವೇವ್ ಮಧ್ಯೆಯೂ ಆಕೆ ತನ್ನ ಚಿಕ್ಕ ಮಗಳನ್ನು ಕಟ್ಟಿಕೊಂಡು ಕೆಲಸಕ್ಕೆ ಹೋಗಿದ್ದಳು. ಆಕೆ ಕೆಲಸ ಮಾಡುತ್ತಿದ್ದಾಗ ಆವಳ ಮಗಳು ತಾಪಮಾನವನ್ನು ಸಹಿಸದೆ ಮೂರ್ಛೆ ಹೋದಳು. ಮಗುವಿಗೆ ಒಂದಿಷ್ಟು ನೀರನ್ನು ಕೊಟ್ಟು, ನೆರಳಲ್ಲಿ ಕೂರಿಸಿಕೊಂಡು ದೇವಿ ತನ್ನ ಏಕೈಕ ಕುಡಿಯನ್ನು ರಕ್ಷಿಸಿಕೊಂಡಳು. ಆದರೆ ಮಾರನೆದಿನ ಯಥಾಪ್ರಕಾರ ಮಗಳೊಂದಿಗೆ ಕೆಲಸಕ್ಕೆ ಹಾಜರಾದಳು.





ಕೇಳಿದರೆ "ನನ್ನ ಮಗುವಿಗೆ ಬೇರೆ ಯಾರೂ ದಿಕ್ಕಿಲ್ಲ, ನನಗೆ ಈ ಕೆಲಸ ಬಿಟ್ಟರೆ ಮತ್ತೊಂದಿಲ್ಲ. ಏನು ಮಾಡುವುದು" ಎಂದು ದೇವಿ ತನ್ನ ಅಸಹಾಯಕತೆಯನ್ನು ತೋಡಿಕೊಂಡಿದ್ದಳು.

ಹಲವಾರು ರಾಜ್ಯ ಸರ್ಕಾರಗಳು ಜನರಿಗೆ 'ತಂಪು ಪಾನೀಯಗಳನ್ನು ಕುಡಿಯಿರಿ', 'ಮಧ್ಯಾಹ್ನ ತಾಪಮಾನ ಹೆಚ್ಚಾಗುವುದರಿಂದ ಹೊರಗೆ ಹೋಗಬೇಡಿ' ಎಂದೆಲ್ಲ ಸಲಹೆಗಳನ್ನು ಕೊಟ್ಟವು. ಆದರೂ ಜನ ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು ತಂಪು ಪಾನೀಯಗಳನ್ನು ಕುಡಿಯದಿದ್ದದ್ದು ಯಾಕೆ, ಹೊರಗೆ ಹೋಗಿದ್ದು ಯಾಕೆ ಎಂದು ನೋಡಿದರೆ ಹಲವು ಕಟುಸತ್ಯಾಂಶಗಳು ಗೊತ್ತಾಗುತ್ತವೆ. ಯಾಕೆಂದರೆ ಹೀಟ್‌ವೇವ್‌ನಲ್ಲಿ ಸತ್ತವರು ಯಾರೂ ಶ್ರೀಮಂತರೂ ಅಲ್ಲ, ಮಧ್ಯಮವರ್ಗದವರೂ ಅಲ್ಲ, ಅವರೆಲ್ಲರೂ ಎಲ್ಲ ವಯಸ್ಸಿನ ಬಡವರು.

ಸರ್ಕಾರದ ಅಂಕಿಅಂಶಗಳೇ ಹೇಳುವ ಪ್ರಕಾರ ನಮ್ಮ ದೇಶದಲ್ಲಿ ಶೇ 29ಕ್ಕಿಂತಲೂ ಹೆಚ್ಚಿನ ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಹಾಗೆಯೇ ಇವತ್ತಿಗೂ ನಮ್ಮ ದೇಶದಲ್ಲಿ ಹೆಚ್ಚಿನ ಉದ್ಯೋಗ ಕಲ್ಪಿಸಿರುವುದು ಕೃಷಿ ವಲಯ. ಒಂದು ಅಂದಾಜಿನ ಪ್ರಕಾರ ಸುಮಾರು 25 ಕೋಟಿ ಜನ ತಮ್ಮ ಹೊಟ್ಟೆ ಪಾಡಿಗೆ ಕೃಷಿಯನ್ನೇ ಅವಲಂಬಿಸಿದ್ದಾರೆ. ಅಂದರೆ ಇವರೆಲ್ಲರೂ ಅವತ್ತಿನ ಹಿಟ್ಟಿಗೆ ದುಡಿಯಲೇ ಬೇಕು. ಅದು ಹೊಲಗಳಲ್ಲಿರಲಿ, ಕಟ್ಟಡ ಕಟ್ಟುವ ಕೆಲಸವಿರಲಿ, ಇನ್ನಿತರ ಶ್ರಮಿಕ ಕಾರ್ಯಗಳಿರಲಿ ತಾಪಮಾನವನ್ನು ಲೆಕ್ಕಿಸದೆ ಮೈಬಗ್ಗಿಸಿದರೆ ಮಾತ್ರ ಅವತ್ತಿನ ಕೂಲಿ ಎಂಬ ಪರಿಸ್ಥಿತಿಯಲ್ಲಿರುವವರು. ಬೆರಳೆಣಿಕೆಯಷ್ಟು ಜನರನ್ನು ಹೊರತುಪಡಿಸಿದರೆ ಈ ಬಾರಿಯ ಹೀಟ್‌ವೇವ್‌ಗೆ ಸತ್ತವರೆಲ್ಲ ಬಡವರೇ. ಅವರೆಲ್ಲರ ಸಾವಿಗೆ ತತ್‌ಕ್ಷಣದ ಕಾರಣ ಸಹಿಸಲಸಾಧ್ಯವಾದ ತಾಪಮಾನವೇ ಆಗಿದ್ದರೂ ಅದರ ಮೂಲಕಾರಣ ಅವರ ಆರ್ಥಿಕ ಪರಿಸ್ಥಿತಿ ಮತ್ತು ಪೌಷ್ಟಿಕಾಂಶವಿಲ್ಲದೆ ಸೊರಗಿದ್ದ ಅವರ ದುರ್ಬಲ ದೇಹಗಳು.

ಹೀಟ್‌ವೇವ್ ತರಹದ ಪ್ರಾಕೃತಿಕ ವಿಕೋಪಗಳಿಂದ ರಕ್ಷಣೆಯನ್ನು ಕೊಡಬಹುದಾದ ಮೂಲ ಸೌಕರ್ಯಗಳನ್ನೂ ಸರ್ಕಾರ ಜನರಿಗೆ ಕೊಟ್ಟಿಲ್ಲ. ಕನಿಷ್ಠ ಫ್ಯಾನ್ ವ್ಯವಸ್ಥೆಯೂ ಇಲ್ಲದ ಜಿಂಕ್‌ಶೀಟ್ ಮನೆಯಲ್ಲಿ ವಾಸಿಸುವವರಿಗೆ 'ಮನೆಯಿಂದ ಹೊರಗೆ ಬರಬೇಡಿ' ಎಂದು ಸರ್ಕಾರ ಹೇಳುವುದು ಅವರ ಬಡತನವನ್ನೇ ಅಣುಕಿಸಿದಂತೆ. ಯಾಕೆಂದರೆ ಜಿಂಕ್‌ಶೀಟ್ ಮನೆಯಲ್ಲಿ ಬೇಸಿಗೆಯ ಮಧ್ಯಾಹ್ನ ಇರುವುದೇ ನರಕ. ಇನ್ನು ಹೀಟ್‌ವೇವ್ ಸಂಭವಿಸಿದಾಗ ಜಿಂಕ್ ಶೀಟ್ ಮನೆ ಎಂಬುದು ಬೆಂಕಿಯ ಕುಲುಮೆಯಲ್ಲಿ ಬೇಯುವುದಕ್ಕೆ ಸಮ. ಅದರಿಂದ ತಪ್ಪಿಸಿಕೊಳ್ಳಲು ಹೊರಗೆ ಬಂದರೆ ನೇರವಾಗಿ ಬೆಂಕಿಯಲ್ಲಿ ಬಿದ್ದಂತೆಯೇ.

ಹಾಗೆಯೇ 'ತಂಪು ಪಾನೀಯಗಳನ್ನು ಕುಡಿಯಿರಿ' ಎಂದು ಸರ್ಕಾರ ಪ್ರಚಾರ ಮಾಡುವುದೂ ಅಸಹ್ಯಕರವೇ. ಕುಡಿಯಲು ಸ್ವಚ್ಛವಾದ ನೀರೂ ಇಲ್ಲದಿರುವಾಗ ಬಡವರು ತಂಪು ಪಾನೀಯಗಳನ್ನು ಕುಡಿಯುವುದಾದರೂ ಹೇಗೆ. ಹಲವು ರಾಜ್ಯಗಳಲ್ಲಿ ಅಸಂಖ್ಯಾತ ಜನರು ಸತ್ತನಂತರವೇ ಸರ್ಕಾರಗಳು ಕುಡಿಯುವ ನೀರಿನ ಸರಬರಾಜಿಗೆ ಮುಂದಾದದ್ದು. ಇಂತಹ ನಿರ್ಲಕ್ಷ್ಯಕ್ಕೆ ಏನನ್ನಬೇಕು? ಇದು ಬಡವರ ಬಗೆಗಿನ ಅಸಹನೆ ಅಲ್ಲವೆ?

ಮನುಷ್ಯನ ದೇಹಕ್ಕೆ ಹಲವಾರು ಸಾಮರ್ಥ್ಯಗಳಿದ್ದರೂ ತಾಪಮಾನದಲ್ಲಿ ತುಂಬಾ ಏರುಪೇರುಗಳಾದರೆ ಅದನ್ನು ಸಹಿಸಿಕೊಳ್ಳಲು ನಮ್ಮ ದೇಹಗಳಿಗೆ ಆಗುವುದಿಲ್ಲ. ನಮ್ಮ ಚರ್ಮ ಸೇರಿದಂತೆ ನಮ್ಮ ದೇಹದ ಎಲ್ಲಾ ಅಂಗಾಂಗಗಳು ರಕ್ತದಲ್ಲಿನ ಅಂಶಗಳಿಂದ ಹಿಡಿದು ದೇಹಶಾಖವನ್ನು ಕಾಪಾಡುತ್ತಿರುತ್ತವೆ. ಯಾವುದೇ ಒಂದು ಅಂಗಾಂಗದಲ್ಲಿ ಏರುಪೇರಾದರೂ ಪ್ರಾಣಕ್ಕೆ ಹಾನಿಯಾಗುತ್ತದೆ. ಹೀಟ್‌ವೇವ್ ತರಹದ ಸಂದರ್ಭದಲ್ಲಿ ಮೊದಲು ಸುಸ್ತು, ತೀವ್ರವಾಗಿ ಬೆವರು ಹರಿಸುವಿಕೆ ಶುರುವಾಗುತ್ತದೆ. ಅವೆರಡೂ ಏದುಸಿರಿಗೆ ಕಾರಣವಾಗುತ್ತದೆ. ತಕ್ಷಣವೇ ನೀರು ಕುಡಿಯದಿದ್ದರೆ ಮತ್ತು ನೆರಳನ್ನು ಆಶ್ರಯಿಸದಿದ್ದರೆ ದೇಹಕ್ಕೆ ಬೆವರು ಹರಿಸುವುದೂ ಕಷ್ಟವಾಗಿ ದೇಹಶಾಖ ಏರುತ್ತದೆ. ಆಗ ಒಂದಾದನಂತರ ಇನ್ನೊಂದು ಎಂಬಂತೆ ದೇಹದ ಅಂಗಗಳು ವಿಫಲಗೊಳ್ಳುತ್ತಾ ಸಾವು ಸಂಭವಿಸುತ್ತದೆ. ಅದರಲ್ಲೂ ಮಕ್ಕಳು ಮತ್ತು ವೃದ್ಧರ ದೇಹಗಳಲ್ಲಿ ದೇಹಶಾಖವನ್ನು ನಿಯಂತ್ರಿಸುವ ಶಕ್ತಿ ಕಡಿಮೆ ಇರುವುದರಿಂದ ಅವರೇ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುತ್ತಾರೆ.

ನಾವು ಯಾವ ಪ್ರದೇಶದಲ್ಲಿ ವಾಸಿಸುತ್ತಿದ್ದೇವೆ ಮತ್ತು ಅಲ್ಲಿನ ಹವಾಮಾನ ಎಂತಹದ್ದು ಎಂಬುದೂ ತಾಪಮಾನ ಏರುವಿಕೆಯನ್ನು ಸಹಿಸುವ ನಮ್ಮ ದೇಹದ ಸಾಮರ್ಥ್ಯವನ್ನೂ ನಿರ್ಧರಿಸುತ್ತದೆ. ಉದಾಹರಣೆಗೆ 2003ರಲ್ಲಿ ಯೂರೋಪ್ ದೇಶಗಳಲ್ಲಿ ಸಂಭವಿಸಿದ ಹೀಟ್‌ವೇವ್‌ಗೆ ಸುಮಾರು ನಲವತ್ತು ಸಾವಿರ ಜನ ಸಾವನ್ನಪ್ಪಿದರು. ವಿಚಿತ್ರವೆಂದರೆ ಆಗ ಅಲ್ಲಿ ದಾಖಲಾದ ಉಷ್ಣಾಂಶ 40 ಡಿಗ್ರಿ ಸೆಂಟಿಗ್ರೇಡ್ ಮಾತ್ರ. ಅದು ಭಾರತದ ಹಲವಾರು ಕಡೆ ಬೇಸಿಗೆಯಲ್ಲಿ ಇರುವಷ್ಟು ಉಷ್ಣಾಂಶ. ಆದರೆ ಅಷ್ಟನ್ನೂ ಯೂರೋಪಿನ ಜನರ ದೇಹಗಳಿಗೆ ಸಹಿಸಲು ಅಸಾಧ್ಯವಾಯಿತು. ಅಂದಹಾಗೆ ಅಲ್ಲೂ ಹೀಟ್‌ವೇವ್‌ಗೆ ಬಲಿಯಾದವರಲ್ಲಿ ಹೆಚ್ಚಿನ ಜನ ಬಡವರು ಮತ್ತು ವೃದ್ಧರು.

ಭಾರತದಂತಹ-ಬಡ ದೇಶಗಳಲ್ಲಿ ಹೀಟ್‌ವೇವ್ ಸೇರಿದಂತೆ ಎಲ್ಲಾ ತರಹದ ಪ್ರಾಕೃತಿಕ ವಿಕೋಪಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುವವರು ಬಡವರೇ. ಮೊನ್ನೆ ನೇಪಾಳದಲ್ಲಿ ಭೂಕಂಪನ ಆದಾಗ ಹೆಚ್ಚು ಸಾವು ಮತ್ತು ನಷ್ಟಗಳನ್ನು ಕಂಡಿದ್ದು ಬಡವರು. ಬೇಕೆಂದರೆ ಆ ಭೂಕಂಪನದ ಫೋಟೋಗಳನ್ನು ಸೂಕ್ಷ್ಮವಾಗಿ ಗಮನಿಸಿ. ಕಾಠ್ಮಂಡುವಿನಲ್ಲಿ ಸಿಮೆಂಟು ಮತ್ತು ಕಬ್ಬಿಣ ಹಾಕಿ ಕಟ್ಟಿದ್ದ ಸಾಹುಕಾರರ ಮನೆಗಳು ಭೂಕಂಪನದ ನಂತರ ಹಾಗೆ ನಿಂತಿದ್ದರೂ, ಮಣ್ಣು ಮತ್ತು ಮರದಿಂದ ನಿರ್ಮಿಸಲಾಗಿದ್ದ ಬಡವರ ಮನೆಗಳು ಮಾತ್ರ ನೆಲಕ್ಕುರುಳಿರುವುದು ಕಾಣಿಸುತ್ತದೆ. ಅದೇ ಪರಿಸ್ಥಿತಿ ನೇಪಾಳದ ಗ್ರಾಮೀಣ ಪ್ರದೇಶಗಳಲ್ಲೂ ಪುನರಾವರ್ತನೆಯಾಗಿತ್ತು, ಹಳ್ಳಿಗಳಲ್ಲಿನ ಬಡವರ ಮನೆಗಳು ಬಿದ್ದು ಪ್ರಾಣ ಮತ್ತು ಆಸ್ತಿಗೆ ಕಂಟಕವಾಗಿದ್ದವು.


ಹಾಗೆಯೇ ಸುನಾಮಿ ಅಪ್ಪಳಿಸಿದಾಗ ಅಥವಾ ಚಂಡಮಾರುತ ಬೀಸಿದಾಗ ಬಡದೇಶಗಳಲ್ಲೇ ಹೆಚ್ಚು ಸಾವುಗಳು ಸಂಭವಿಸುತ್ತವೆ. ಬಡದೇಶವಾದ ಹೈತಿಯಲ್ಲಿ 2010-11 ರಲ್ಲಿ ಚಂಡಮಾರುತ ಬೀಸಿದಾಗ ಹತ್ತು ಸಾವಿರಕ್ಕೂ ಹೆಚ್ಚು ಜನ ಸತ್ತಿದ್ದರು. ಆದರೆ ಅದಾದ ಎರಡು ವರ್ಷಗಳ ನಂತರ ಚಂಡಮಾರುತವೊಂದು ಅಮೆರಿಕವನ್ನು ಅಪ್ಪಳಿಸಿದಾಗ ಸತ್ತವರು ಒಂದೆರಡು ನೂರು ಜನ ಮಾತ್ರ. ಅಂದಹಾಗೆ, ಚಂಡಮಾರುತಕ್ಕೆ ಅಮೆರಿಕದಲ್ಲಿ ಬಲಿಯಾದವರೂ ಬಡವರೇ.

ಏರುತ್ತಿರುವ ಜಾಗತಿಕ ತಾಪಮಾನದಿಂದಾಗಿ ಹೀಟ್‌ವೇವ್ ಮತ್ತು ಇತರೆ ಪ್ರಾಕೃತಿಕ ವಿಕೋಪಗಳೂ ಹೆಚ್ಚಾಗುತ್ತಿವೆ. ವಿಶ್ವಸಂಸ್ಥೆಯ ಅಂತರರಾಷ್ಟ್ರೀಯ ಸಮಿತಿಯೊಂದು ಸಲ್ಲಿಸಿರುವ ವರದಿಯಲ್ಲಿ "1950ರ ನಂತರ ವಿಶ್ವಾದ ದೇಶಗಳಲ್ಲಿ ತಂಪಾದ ಹಗಲು ಮತ್ತು ರಾತ್ರಿಗಳು ಕಡಿಮೆಯಾಗುತ್ತಿದ್ದು ಉಷ್ಣಾಂಶ ಇರುವ ಹಗಲು ಮತ್ತು ರಾತ್ರಿಗಳ ಸಂಖ್ಯೆ ಹೆಚ್ಚಾಗುತ್ತಿವೆ" ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ಅಭಿವೃದ್ಧಿ ಹೊಂದಿರುವ ದೇಶಗಳಲ್ಲಿ ಇಂತಹ ಏರುಪೇರುಗಳನ್ನು ನಿಭಾಯಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಉದಾಹರಣೆಗೆ ಚಳಿ ಅಥವಾ ಉಷ್ಣಾಂಶ ಹೆಚ್ಚಾಗುತ್ತಿದ್ದಂತೆ ಸರ್ಕಾರವೇ ರಜೆ ಘೋಷಿಸುವ ಮೂಲಕ ಜನ ಮನೆಯಲ್ಲೇ ಇರುವಂತೆ ನೋಡಿಕೊಳ್ಳುತ್ತದೆ. ಆದರೆ ಭಾರತದಂತಹ ಬಡ ದೇಶದಲ್ಲಿ ಇಂತಹ ಕ್ರಮ ಸಾಧ್ಯವಿಲ್ಲವಾದ್ದರಿಂದ ಜನ ಸಾಯುತ್ತಲೇ ಇರುತ್ತಾರೆ.

ಭಾರತ ಮಾತ್ರವಲ್ಲ, ಜಗತ್ತಿನಾದ್ಯಂತ ನೈಸರ್ಗಿಕ ವಿಕೋಪಗಳಿಗೆ ಬಡ ಜನರೇ ಬಲಿಯಾಗುತ್ತಿದ್ದರೂ ಯಾವ ಸರ್ಕಾರವೂ ಅದನ್ನು ಸರಿಯಾಗಿ ನಿಯಂತ್ರಿಸಲು ಮುಂದಾಗುತ್ತಿಲ್ಲ, ಯಾಕೆಂದರೆ ಇವತ್ತು ಜಗತ್ತಿನ ಹೆಚ್ಚಿನ ದೇಶಗಳನ್ನು ಆಳುತ್ತಿರುವವರು ಉಳ್ಳವರ ಪರವಿರುವ ಬಂಡವಾಳಶಾಹಿಗಳು. ಈ ಬಂಡವಾಳಶಾಹಿಗಳ ಪ್ರಕಾರ ಬಡತನ ನಿರ್ಮೂಲನೆಗೆ ಇರುವ ಒಂದೇ ಸೂತ್ರ ಬಡವರನ್ನೇ ಇಲ್ಲದಂತಾಗಿಸುವುದು. ಅಂತಹ ಅಮಾನವೀಯ ಧೋರಣೆ ಇವತ್ತು ನಮ್ಮ ದೇಶದಲ್ಲೂ ತಾಂಡವವಾಡುತ್ತಿರುವಾಗ ನೀರಿಲ್ಲದೆ, ನೆರಳಿಲ್ಲದೆ ಸಾವಿರಾರು ಜನರು ಸಾಯದೇ ಇನ್ನೇನು ಮಾಡಲು ಸಾಧ್ಯ? ಇದು 'ಅಚ್ಛೆ ದಿನ್'ಗಳ ಕಾಲ! ■


ಭಯವೇ ಧರ್ಮದ ಮೂಲವೇ?



ನರಕದ ಬಗ್ಗೆ ಭಯ
ಹುಟ್ಟಿಸುವ
ಧರ್ಮಗಳಿಗೇನು ಗೊತ್ತು?
ಈ ನೆಲದಲ್ಲೇ ಸಾಕ್ಷಾತ್ ನರಕಕ್ಕಿಂತ ಹೆಚ್ಚಾಗಿ
ಕಾಣುವ ಪ್ರಪಂಚವೊಂದಿದೆಯೆಂದು
ಕುಷ್ಠ ಹಿಡಿದ ಅಬ್ಬೇಪಾರಿ ಭಿಕ್ಷುಕರು
ಅನಿಷ್ಟಕ್ಕೆ ಹುಟ್ಟಿ ಹಾದಿಗೆಸೆಯಲ್ಪಟ್ಟ
ಅನಾಥ ಮಕ್ಕಳು
ಮೂರು ಕಾಸಿಗಾಗಿ ಪಿಕ್‌ಪಾಕೆಟ್ ಮಾಡಿ
ಬಂದ ದುಡ್ಡನ್ನೆಲ್ಲ
ಮುದಿಸೂಳೆಯರ ಮಡಿಲಿಗೆಸೆದ ಪೋಲಿ ಯುಃ
ತರಹೇವಾರಿ ಗಂಡಸರ ಸಹವಾಸದಿಂದ
ರೋಗ ಅಂಟಿಸಿಕೊಂಡು
ಡಾಕ್ಟರ್ ಹಿಂದೆ ನಿತ್ಯ ಅಲೆಯುವ
ಬತ್ತಿ ಹೋದ ಹೆಂಗಸರು
ಜೂಜಿನಲ್ಲಿ
ಕಳೆದುಕೊಂಡಿದ್ದನ್ನೆಲ್ಲ ಅದರಲ್ಲೇ ಪಡೆಯಲು
ಹಟತೊಟ್ಟು ಹುಟ್ಟಿಸಿದ ಮಕ್ಕಳ ಒತ್ತೆಯಿಟ್ಟು
ಮತ್ತೆ ಸೋತು
ಕುಡಿಯಲು ಕಾಸಿಗಾಗಿ ಕಂಡವರ ಮುಂದೆ ಕೈಚಾಚಿ
ಗೋಗರೆಯುವ ಮಧ್ಯವಯಸ್ಕ ಗಂಡಸರು
ಇವರನ್ನೆಲ್ಲ ಹೆದರಿಸಿಕೊಂಡು
ತಮ್ಮ ಹೊಟ್ಟೆ ಹೊರೆದುಕೊಳ್ಳುವ
ಷಂಡರ ದಂಡು
ಅವರಿಂದಲೂ ರೋಲ್‌ಕಾಲ್ ಮಾಡುವ ಖಾಕಿಗಳು
ಅಡ್ಡಾಡುವ ಇಂತಹ ರಸ್ತೆಗಳಲ್ಲಿ ದೊಡ್ಡ ದೊಡ್ಡ
ಕಾರುಗಳಲ್ಲಿ ತಿರುಗಾಡುವ
ಹಣವಂತರ ಕಾರಿನ ಚಕ್ರಕೆ ಸಿಕ್ಕಿ ಸಾಯುವ
ಸಾವಂತ್ರಿಯ ಮೂರುವರ್ಷದ ಮಗಳು
ಆವಳ ಹೆಣ ಎತ್ತಲು
ಚಂದಾ ವಸೂಲಿಗಿಳಿಯುವ ವೀರರು
ತುಂಬಿರುವ
ಪಾಪಿಗಳ ಈ ಜಗತ್ತನ್ನು ಇದುವರೆಗೂ
ಯಾವ ಧರ್ಮವೂ
ಕಂಡಂತಿಲ್ಲ,
ಕಾಣುವ ಇರಾದೆಯೂ ಅದಕಿದ್ದಂತಿಲ್ಲ!

■ ಕು.ಸ. ಮಧುಸೂದನ್

ಹಾಲಾಡಿಗೆ ಡಾನ್ ರವಿ ಪೂಜಾರಿ ಹೆದರಿಸಿದ್ದು ಹೌದಾ?!


ಹಾಲಾಡಿ ಶ್ರೀನಿವಾಸ ಶೆಟ್ಟಿ

ಕರಾವಳಿಯ ಭೂಗತ ಮತ್ತು ರಾಜಕೀಯ ಲೋಕಗಳೆರಡೂ ಆಶ್ಚರ್ಯಾಘಾತದಿಂದ ಬೆಚ್ಚಿಬಿದ್ದಿವೆ! ಪಾತಕೀಕರಣಗೊಂಡಿರುವ ಸ್ಥಳೀಯ ರಾಜಕೀಯ ರಂಗದಲ್ಲಿ 'ಬೆದರಿಕೆ-ಹಿಂಜರಿಕೆ'ಯ ಅಭೂತಪೂರ್ವ ಪ್ರಹಸನವೊಂದು ನಡೆದುಹೋಗಿರುವುದೇ ಈ ದಿಗಿಲಿಗೆ ಕಾರಣ. ಆಸ್ಟ್ರೇಲಿಯಾದಲ್ಲಿರುವ ಭೂಗತ ಪಾತಕಿ ರವಿ ಪೂಜಾರಿ ಕಳೆದ ವಾರ 'ಸಂತ' ಮುಖವಾಡದ ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿಗೆ ಬೆದರಿಕೆ ಹಾಕಿ ಹತ್ತು ಕೋಟಿಗೆ ಬೇಡಿಕೆ ಇಟ್ಟಿದ್ದನಂತೆ. ಥ್ರೆಟ್‌ಕಾಲ್ ಮಾಡಿದ ಮೂರನೇ ದಿನವೇ ಮನಃಪರಿವರ್ತನೆಯಾಗಿ "ನಿಮ್ಮ ತಂಟೆಗೆ ಬರುವುದಿಲ್ಲ" ಎಂದು ಶರಣಾದನಂತೆ....

ಹಾಗಂತ ಸಾಕ್ಷಾತ್ ಶಾಸಕ ಹಾಲಾಡಿ ಶೆಟ್ಟರೇ ಬೊಂಬಡಾ ಬಜಾಯಿಸಿಕೊಂಡಿದ್ದಾರೆ. ಆದರೆ ಭೂಗತ-ರಾಜಕೀಯ ಮತ್ತು ಸಾರ್ವಜನಿಕ ವಲಯದಲ್ಲಿ ಇದೊಂಥರಾ ಅಡಗೋಲಜ್ಜಿ ಕತೆ ಎಂಬ ರೋಚಕ ಚರ್ಚೆಗೆ ಸಂಗತಿಯಾಗಿ ಹೋಗಿದೆ! ಈ ಕ್ರೈಮ್ ಪಾಲಿಟಿಕ್ಸ್ ಸುದ್ದಿ ಸದ್ದಿನ ಜಾಡು ಹಿಡಿದು ಹೊರಟರೆ ಶಾಸಕ ಶೆಟ್ಟರ ಪೂರ್ವಾಶ್ರಮದ ಅಂಡರ್‌ವರ್ಲ್ಡ್ ನಂಟಿನ ದಾದಾಗಿರಿ ದಿನಗಳ ದಾಂಧಲೆ, ಈಗಾತ ಬಿರುಸಾಗಿ ನಡೆಸಿರುವ ರಿಯಲ್ ಎಸ್ಟೇಟ್ ದಂಧೆ ಕತೆಗಳು ಮತ್ತು ಆತನ ದಾನ-ಧರ್ಮದ ನಯವಂಚನೆಯ ರಾಜಕೀಯ ಗಿಮಿಕ್‌ಗಳು ಒಂದೊಂದಾಗಿ ಬಿಚ್ಚಿಕೊಳ್ಳುತ್ತ ಎದುರಾಗುತ್ತವೆ....

ಹಾಲಾಡಿ ಪೂರ್ವಾಶ್ರಮ


ನಾಲ್ಕನೇ ಬಾರಿ ಶಾಸಕನಾಗಿ ಕುಂದಾಪುರವನ್ನು ಆಳುತ್ತಿರುವ ಹಾಲಾಡಿ ಶ್ರೀನಿವಾಸ ಶೆಟ್ಟರ ಈಗಿನ ರಾಜಕೀಯ ಸಂತತನ, ಮನೆ ಹಂಚನ್ನೇ ಕಿತ್ತು ಅಸಹಾಯಕರಿಗೆ ಕೊಡುವ ಹುಸಿ ಕಳಕಳಿಯ ದಂತಕತೆಗಳ ಇಮೇಜಿಗೂ ಆತನ ಪೂರ್ವಾಶ್ರಮದ ಪೆಟ್ಟಿಸ್ಟ್ ಪುಂಡ ಗುಣ-ಧರ್ಮಕ್ಕೂ ಅಜಗಜಾಂತರ. ಹೊರನೋಟಕ್ಕೆ ತಣ್ಣಗೆ ಕಾಣುವ, ನಗು-ನಗುತ್ತ ಮಾತಾಡುವ ಶೆಟ್ಟಿ ಒಳಗೆ ಬಿಸಿ ಹಗೆಯ ಅಪಾಯಕಾರಿ. ಯಾರಿಗೆ ಹೇಗೆ ಹಣಿಯಬೇಕು, ಯಾರನ್ನು ಹೇಗೆ ಪಳಗಿಸಬೇಕೆಂಬ ಲೆಕ್ಕಾಚಾರದಲ್ಲಾತ ನಿಪುಣ; ಕಾಲೇಜು ದಿನಗಳಿಂದಲೇ ಆತ ಸ್ಕೆಚ್ ಹಾಕುವುದರಲ್ಲಿ ನಿಸ್ಸೀಮ. 1970ರ ದಶಕದ ಅಂತ್ಯದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೊಡ್ಡ ಸದ್ದು ಮಾಡಿದ್ದ ಆಲ್ ಕಾಲೇಜ್ ಯೂನಿಯನ್‌ನ ಆಯಕಟ್ಟಿನ ಜಾಗದಲ್ಲಿ ಶೆಟ್ಟಿ ಇದ್ದರು.

ಆಗಾತ ಅಡ್ಡೆ ಹಾಕುತ್ತಿದ್ದುದು ಉಡುಪಿಯ ಉಷಾ ಹೋಟೇಲ್‌ನಲ್ಲಾಗಿತ್ತು. ಅದು ಹೆಂಡದ ದೊರೆ ಪುರುಷಶೆಟ್ಟಿಯ ಹೋಟೇಲು. ಅಲ್ಲಿಂದಲೇ ಶೆಟ್ಟಿಗೆ ಭೂಗತ ಲೋಕದ ಸಂಪರ್ಕವೂ ಸಾಧ್ಯವಾಗಿತ್ತು! ಈಗ ದೇಶ-ವಿದೇಶದಲ್ಲಿ ಡಾನ್-ಮಿನಿ ಡಾನ್‌ಗಳೆಂದು ಹೇಳಿಕೊಂಡು ಗುಟುರು ಹಾಕುತ್ತಿರುವ ಕರಾವಳಿಯ ಪಾತಕಿಗಳಲ್ಲಿ ಬಹುತೇಕರ ದೋಸ್ತಿ ಶಾಸಕ ಶೆಟ್ಟಿಗೆ ಅಂದಿತ್ತು; ಇಂದೂ ಆ ಗೆಳೆತನದ ಸಖ್ಯ ಹಾಗೇ ಮುಂದುವರಿದಿದೆ. ತುಂಬ ರಹಸ್ಯವಾಗಿ ಎಂಬ ಅಭಿಪ್ರಾಯವೂ ಜಿಲ್ಲೆಯಲ್ಲಿದೆ. ಆಗೆಲ್ಲ ಪುರುಷನೇ ಹಾಲಾಡಿ ಪಡೆಗೆ ಸಾಕುತ್ತಿದ್ದರು.

ಈ ಮೆರಿಟ್ ಆತನ ರಾಜಕೀಯ ಪುಢಾರಿಗಳ ಸಂಪರ್ಕಕ್ಕೆ ಅನುಕೂಲವಾಯಿತು. 1980ರ ದಶಕದಾರಂಭದಲ್ಲಿ ಕುಂದಾಪುರದ ಶಾಸಕನಾಗಿ ಅವತರಿಸಿದ್ದ ಪಾಳೇಗಾರಿ ಖಾನ್‌ದಾನ್‌ನ ಪ್ರತಾಪಚಂದ್ರ ಶೆಟ್ಟರ ಬಲಗೈ ಬಂಟನಾಗಿ ಪರಿಚಿತನಾಗಲು ಹಾಲಾಡಿ ಶೆಟ್ಟಿಗೆ ಹೆಚ್ಚು ಸಮಯವೇನೂ ಹಿಡಿಯಲಿಲ್ಲ. ರಾಜಕೀಯ ಫಿಟ್ಟಿಂಗ್‌ನ ಜತೆಜತೆಗೆ ಮರದ ವ್ಯವಹಾರ ಶುರು ಹಚ್ಚಿಕೊಂಡಿದ್ದ ಶೆಟ್ಟಿ ಹಣವೂ ಮಾಡಿಕೊಂಡರು. ಮರದ ಕಸುಬು ಕರತಲಾಮಲಕ ಮಾಡಿಕೊಂಡಿದ್ದ ಶೆಟ್ಟಿ ಹಾರಾಟ ಶಾಸಕ ಪ್ರತಾಪಚಂದ್ರರಿಗೆ ಇರಿಸುಮುರುಸು ತರತೊಡಗಿತು. ಗುರು-ಶಿಷ್ಯರ ನಡುವೆ ಹೊತ್ತಿಕೊಂಡ ಅಸಮಾಧಾನದ ಕಿಡಿ ದೊಡ್ಡ ವೈಷಮ್ಯವಾಗಿ ಹೋಯ್ತು. ಒಮ್ಮೆಯಂತೂ ಪೊಲೀಸರು ಶಾಸಕರ ಮಾತುಕೇಳಿ ಹಾಲಾಡಿ ಶೆಟ್ಟಿಯ ಕೈಗೆ ಕೋಳ ತೊಡಿಸಿ ಶಾಸ್ತ್ರಿ ಪಾರ್ಕಿನಿಂದ ಠಾಣೆಯ ತನಕ ಮೆರವಣಿಗೆಯಲ್ಲಿ ತಂದರೆಂದು ಹಳಬರು ನೆನಪಿಸಿಕೊಳ್ಳುತ್ತಾರೆ!

ಶಕುನಿ ಮಾಮನ ಸಖ್ಯ!

ಮೂರು ಬಾರಿ ಶಾಸಕನಾಗಿದ್ದ ಪ್ರತಾಪ್ ಮತ್ತು ಆತನ ಪುಂಡಾಟದ ಶಿಷ್ಯ ಹಾಲಾಡಿ ಶೆಟ್ಟಿ ಮಧ್ಯದ ದ್ವೇಷ-ಭಿನ್ನಾಭಿಪ್ರಾಯ ಎ.ಜಿ. ಕೊಡ್ಗಿ ಎಂಬ ಹಳೆ ತಲೆ ತುಂಬ ನಾಜೂಕಾಗಿ ಬಳಸಿಕೊಂಡಿತ್ತು. ಹೇಗೆ ಹಾಲಾಡಿ ಪ್ರತಾಪ್ ಶಿಷ್ಯನೋ ಹಾಗೇ ಪ್ರತಾಪ್ ಮಾಜಿ ಶಾಸಕ ಗೋಪಾಲಕೃಷ್ಣ ಕೊಡ್ಗಿ ಪಟ್ಟದ ಶಿಷ್ಯನಾಗಿದ್ದರು. ಥೇಟ್ ಪ್ರತಾಪ್-ಹಾಲಾಡಿ ನಡುವೆ ಉಂಟಾದ ಅಸಮಾಧಾನ ಅಸಹನೆಯಂತೆಯೇ ಕೊಡ್ಗಿ-ಪ್ರತಾಪ್ ನಡುವೆ ಉದ್ಭವಿಸಿತ್ತು, ಪ್ರತಾಪ್ ಎದುರು ಒಮ್ಮೆ ಅಸೆಂಬ್ಲಿ ಎಲೆಕ್ಷನ್‌ಗೂ ನಿಂತು ಕೊಡ್ಗಿ ಸೋತರು. ಪ್ರತಾಪ್‌ನನ್ನು ಸೋಲಿಸಿ ಮಾಜಿ ಮಾಡುವ ಹಠ ಮಾತ್ರ ಈ ಮುದಿ ಶಕುನಿ ಮಾಮನಿಗೆ ಕಡಿಮೆ ಆಗಲಿಲ್ಲ.


ಎ.ಜಿ. ಕೊಡ್ಗಿ

ಕುಂದಾಪುರದಲ್ಲಿ ಆಳವಾಗಿ ಬೇರುಬಿಟ್ಟಿದ್ದ ಪ್ರತಾಪ್‌ನ ಮಣಿಸಿದರೆ ಹಾಲಾಡಿಯೇ ಮಣಿಸಬೇಕೆಂಬುದು ಕೊಡ್ಗಿಗೆ ಖಾತ್ರಿಯಾಗಿತ್ತು. ಉಪಾಯವಾಗಿ ಹಾಲಾಡಿಯನ್ನು ಸೆಳೆದುಕೊಂಡ ಕೊಡ್ಗಿ ಬಿಜೆಪಿ ಕ್ಯಾಂಡಿಡೇಟಾಗಿ ಆತನನ್ನು ಮಾಡಲು ಸಫಲರಾದರು. ಪ್ರತಾಪನ ಜಮೀನ್ದಾರಿ ಜಂಬ, ಆತನ ಕಂಟ್ರಾಕ್ಟರ್ ಗ್ಯಾಂಗಿನ ಗಾಂಚಾಲಿಗಳಿಂದ ಕುಂದಾಪುರದ ಜನ ಬೇಸತ್ತುಹೋಗಿದ್ದರು. ಬಹುಸಂಖ್ಯಾತ ಭಂಟರ ಓಟೇ ಒಡೆದುಹೋಯಿತು. ಪ್ರತಾಪ್ ಮಕಾಡೆ ಮಲಗಿ ಹಾಲಾಡಿ ಶಾಸಕನಾಗಿಬಿಟ್ಟ. ಪ್ರತಾಪನ ಪಾಳೆಯದ ಪ್ರಮುಖ ಸೇನಾನಿಯಾಗಿದ್ದ ಹಾಲಾಡಿಗೆ ಗುರುವಿನ ಸಕಲ ತಂತ್ರ-ಮಂತ್ರ-ಷಡ್ಯಂತ್ರ ಎಲ್ಲವೂ ಗೊತ್ತಿತ್ತು. ಹೀಗಾಗಿ ಮುಂದಿನ ಮೂರು ಚುನಾವಣೆಯಲ್ಲಿ ಆತನ ಸೋಲಿಸುವವರೇ ಇಲ್ಲದಂತಾಯ್ತು-ಮುಂಬಾಗಿಲ ರಾಜಕಾರಣದಿಂದ ಪ್ರತಾಪ್ ದೂರವಾಗಿ ಎಮ್ಮೆಲ್ಸಿಗಿರಿಗೆ ಜೋತುಬೀಳುವಂತಾಯ್ತು.

ಒನ್‌ಮ್ಯಾನ್ ಆರ್ಮಿ

ಡಾನ್ ಶೈಲಿಯ ರಾಜಕಾರಣದ ಹಾಲಾಡಿ ಶಾಸಕನಾದರೂ ಪ್ರಜಾತಂತ್ರದ ಮೂಲಭೂತ ತತ್ವ-ನಿಯಮ ಅಳವಡಿಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಮನೆ ಬಾಗಿಲಿಗೆ ಬರುವ ಮಂದಿ ಕೈಗೆ ಹಣ ಹಿಡಿಸುವ, ಮದುವೆ-ಮುಂಜಿ, ಕ್ರೀಡಾ ಚಟುವಟಿಕೆ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮ ಎಂದು ಹೇಳಿಕೊಂಡು ಬರುವವರಿಗೆ ಕಾಸು ಹಂಚುವ 'ರಾಬಿನ್‌ಹುಡ್ ರಾಜಕಾರಣ' ಶುರು ಹಚ್ಚಿಕೊಂಡರು. ಬಿಜೆಪಿಯಲ್ಲಿದ್ದರೂ ಕಲ್ಲಡ್ಕ, ಕೊಡ್ಗಿಗಳಿಗೆ ಡೊಗ್ಗುಸಲಾಮು ಹಾಕಲಿಲ್ಲ. ಆಡ್ವಾಣಿ, ಆಚಾರ್ಯರಂಥವರಿಗೂ ಆತ ಕೊಟ್ಟ ಮರ್ಯಾದೆ ಅಷ್ಟಕ್ಕಷ್ಟೇ. ಆನೆ ನಡೆದದ್ದೇ ದಾರಿ ಎಂಬಂತೆ ಹಾಲಾಡಿ ಶೆಟ್ರು ನಡೆದಾಡುತ್ತ ಬಿಜೆಪಿಯ ಸಂಘ ಪರಿವಾರದ ಪ್ರಭೃತಿಗಳಿಗೆ ತಲೆನೋವಾಗಿ ಹೋದರು.

ಹಾಲಾಡಿ 'ಉದ್ಧಟತನ' ಹೈಕಮಾಂಡ್ ಕಲ್ಲಡ್ಕನ ಕೆರಳಿಸಿಬಿಟ್ಟಿತು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಹಾಲಾಡಿ ಬಾಲ ಕಟ್ ಮಾಡ ಹತ್ತಿದರು. ಮೂರು ಬಾರಿ ಬಿಜೆಪಿ ಶಾಸಕನಾಗಿದ್ದ ಹಾಲಾಡಿಗೆ ಮಂತ್ರಿ ಮಾಡದಂತೆ ನೋಡಿಕೊಂಡರು; ಅಷ್ಟೇ ಅಲ್ಲ ಹಾಲಾಡಿ ಎದುರು ಕೈಕಟ್ಟಿಕೊಂಡು ನಿಲ್ಲುತ್ತಿದ್ದ ಕೋಟ ಶ್ರೀನಿವಾಸ್ ಪೂಜಾರಿ ಎಂಬ ಮೊದ್ದಣಿ ಎಮ್ಮೆಲ್ಸಿಯನ್ನು ಕ್ಯಾಬಿನೆಟ್ ಮಂತ್ರಿ ಮಾಡಿಸಿ ಹಾಲಾಡಿಗೆ ಕಿಚಾಯಿಸಿದರು. ಪಿತ್ಥ ನೆತ್ತಿಗೇರಿದ ಹಾಲಾಡಿ ಬಿಜೆಪಿಯಿಂದ ದುರ್ದಾನ ಪಡೆದಂತೆ ಹೊರಬಿದ್ದರು. ಪಕ್ಷೇತರನಾಗಿ ನಿಂತು ದೊಡ್ಡ ಅಂತರದಲ್ಲೇ ಗೆದ್ದು ತಾಕತ್ತು ತೋರಿಸಿದರು!!


ರಾಜಕೀಯ ಗಿಮಿಕ್

ಶಾಸಕ ಹಾಲಾಡಿ ಶೆಟ್ಟಿ ಫಿಟ್ಟಿಂಗ್ ಮಾಸ್ಟರನಷ್ಟೇ ಅಲ್ಲ, ಸ್ಟಂಟ್‌ನಲ್ಲೂ ಮಾಸ್ಟರ್ ಎಂಬುದು ಕುಂದಾಪುರ ಕ್ಷೇತ್ರದ ಉದ್ದಗಲಕ್ಕಿರುವ ಸಾಮಾನ್ಯ ಅಭಿಪ್ರಾಯ. ಈತ ಸರ್ಕಾರಿ ಗುತ್ತಿಗೆದಾರರಿಂದ, ಅಧಿಕಾರಿಗಳಿಂದ ಪರ್ಸೆಂಟೇಜು, ಮಾಮೂಲಿ, ಲಂಚ ತೆಗೆದುಕೊಳ್ಳುವುದಿಲ್ಲ. ಸರ್ಕಾರಿ ಕಾಮಗಾರಿಗಳ ಶಂಕು ಸ್ಥಾಪನೆ, ಉದ್ಘಾಟನೆಗೆ ಹೋಗುವುದಿಲ್ಲ. ಸರ್ಕಾರಿ ಕಚೇರಿಗಳು ಭ್ರಷ್ಟಾಚಾರದ ಅಡ್ಡೆಯಾಗಿದ್ದರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಕ್ಷೇತ್ರಕ್ಕೆ ಬೇಕಾದ ಯೋಜನೆ-ಕಾಮಗಾರಿ, ಜನಸಾಮಾನ್ಯರಿಗೆ ಬೇಕಾದ ಮೂಲಭೂತ ಸೌಕರ್ಯ ಇದ್ಯಾವುದೂ ಆತನಿಗೆ ಗೊತ್ತೇ ಇಲ್ಲ. ಸರ್ಕಾರಿ ಅನುದಾನ ಹಠದಿಂದ ತರಬೇಕು-ಕಣ್ಣಿಗೆ ಕಾಣುವ ಕೆಲಸ ಮಾಡಿ ಸಮಷ್ಟಿಯ ಹಿತ ಸಾಧಿಸಬೇಕೆಂಬ ಶಾಸಕತ್ವದ ಕರ್ತವ್ಯ ಪ್ರಜ್ಞೆಯೂ ಆತನಿಗಿಲ್ಲ.

ಎತ್ತಿಂದೆತ್ತ ತಾಳೆ ಹಾಕಿ ನೋಡಿದರೂ, ಯಾವ ಆ್ಯಂಗಲ್‌ನಿಂದ ಪರಿಗಣಿಸಿದರೂ ನಾಲ್ಕು ಬಾರಿ ಶಾಸಕನಾದ ಹಾಲಾಡಿಯಿಂದ ಕ್ಷೇತ್ರದಲ್ಲಿ ನಾಲ್ಕು ಬಿಲ್ಲಿ ಕೆಲಸ ಆಗಿಲ್ಲ. ಕ್ಷೇತ್ರದ ಯಾವ ಆಗು-ಹೋಗುಗಳಲ್ಲೂ ಆತ ಧೈರ್ಯದಿಂದ, ಹೊಣೆಗಾರಿಕೆಯಿಂದ ಭಾಗವಹಿಸಿದ್ದೇ ಇಲ್ಲ. ಬಿಜೆಪಿಯಲ್ಲಿದ್ದರೂ ಕೋಮುವಾದಿಯಲ್ಲ ಎಂಬ ಪ್ರತೀತಿ ಹಾಲಾಡಿ ಶೆಟ್ಟರದು. ನಿಜ, ಆತ ಕೋಮು ಕಿತಾಪತಿಯಲ್ಲಿ ಖುದ್ದಾಗಿ ಭಾಗವಹಿಸಿದ್ದು ಕಾಣೆಸದು. ಆದರೆ ಕುಂದಾಪುರ ಕ್ಷೇತ್ರದಲ್ಲಿ ಕೋಮುಗಲಭೆ ಆಗುತ್ತಲೇ ಇದೆ. ಕೋಮು ಕಿತಾಪತಿಗಾರರೆಲ್ಲ ಹಾಲಾಡಿಯ ಆತ್ಮೀಯರೇ. ಅಂಥವರಿಗೆ ಬುದ್ಧಿ ಹೇಳುವ 'ಪುಣ್ಯ'ದ ಕೆಲಸ ಹಾಲಾಡಿ ಮಾಡಿದ ನಿದರ್ಶನವೇ ಇಲ್ಲ. ಹಾಗಂತ ಈ ಕ್ರಿಮಿನಲ್ ಹಿಂದೂ ಹಿಂಬಾಲಕರ ರಕ್ಷಣೆಗೆ ಬೇಕಾದ ಸಕಲ ಸಹಾಯ; ಹಣದ ನೆರವು ಆತ ಕಾಲಕಾಲಕ್ಕೆ ಒದಗಿಸುತ್ತ ಬಂದಿದ್ದಾರೆ. ಆದರೂ ಈತ 'ಸೆಕ್ಯುಲರ್ ಬಿಜೆಪಿ' ಎಂಬ ಅಭಿದಾನ ಪಡೆದಿದ್ದಾರೆ.

ಹಣ ಹಂಚುವ ರಾಜಕಾರಣ ಗಿಮಿಕ್‌ನಿಂದ ಜನಪ್ರಿಯನಾಗಿರುವ ಹಾಲಾಡಿ ಅದೆಂಥ ಶಾಸಕನೆಂದರೆ ತಾಲ್ಲೂಕಿನ ಜನಪೀಡಕ ಅಧಿಕಾರಿಗಳಿಗೆ ಆತ ಅಂಕುಶ ಇಟ್ಟಿದ್ದೇ ಇಲ್ಲ. ಲಂಚಬಾಕ ಅಧಿಕಾರಿಗಳು ಜನರ ಸುಲಿದರೂ ಆತ ಕಂಡೂಕಾಣದಂತೆ ಸುಮ್ಮನಿರುತ್ತಾನೆ. ಅಷ್ಟೇ ಅಲ್ಲ, ಲಂಚದ ದರ್ಬಾರು ಅಬಾಧಿತವಾಗಿ ಸಾಗಲು ತನ್ನಿಂದಾದ ಸಹಾಯ ಮಾಡುತ್ತಾರೆ. ಅಧಿಕಾರಿಗಳು-ಸರ್ಕಾರಿ ನೌಕರರು ಲಂಚ ಕೇಳುತ್ತಾರೆಂದು ಯಾರಾದರೂ ಶಾಸಕ ಸಾಹೇಬರಲ್ಲಿ ಅಲವತ್ತುಕೊಂಡರೆ ಬರುವ ತತ್ವಜ್ಞಾನದ ಆಣಿಮುತ್ತುಗಳೇನು ಗೊತ್ತಾ? "ಸಮಾಜ ಬದಲಾಯಿಸಲು ಸಾಧ್ಯವಾ... ಸಾಯ್ಲಿ ಮಾರಾಯಾ... ನಾನೊಂದು ಎರಡು ಸಾವಿರ ಕೊಡ್ತಿ... ನಿಂದೊಂದು ಸಾವಿರ ಹಾಕಿ ಲಂಚ ಕೊಡು... ಕೆಲ್ಸ ಆತ್ತ... ಹೋಗು ಅಕಾ...." ಎಂದು ಹಾಲಾಡಿ ವೇದಾಂತ ಹೇಳ್ತಾರೆ.

ಇಂಥ ಹಾಲಾಡಿ ನಿರಂತರ-ನಿರಾತಂಕವಾಗಿ ಗೆದ್ದು ಶಾಸಕನಾಗುತ್ತಲೇ ಇದ್ದಾರೆ. ಎಲೆಕ್ಷನ್‌ನಿಂದ ಎಲೆಕ್ಷನ್‌ಗೆ ಆತನ ಮತಗಳಿಕೆ ಹೆಚ್ಚಾಗುತ್ತಿದೆ. ಪಕ್ಷೇತರನಾಗಿ ಸ್ಪರ್ಧಿಸಿದರೂ ಗೆಲ್ಲುತ್ತಾರೆ. ಏನಿದರ ಗುಟ್ಟು? ಹಾಲಾಡಿಯ ವಿಜಯಗಳ ಮರ್ಮವೇನು? ಜನಪ್ರಿಯತೆಯ ಅಸಲಿಯತ್ತೇನು? ಇದಕ್ಕೆಲ್ಲ ಒಂದೇ ಉತ್ತರ-ಹಣ ಹಂಚುವ, ತನ್ನ ಮನೆ ಹಂಚನ್ನೇ ತೆಗೆಸಿ ಬಡವನ ಮನೆಗೆ ಹೊದಿಸುವ ಗಿಮಿಕ್. ಅಸಹಾಯಕ-ಅಮಾಯಕ ಜನರ ಯಾಮಾರಿಸುವ ಕುಕಲಾ ಪಾರಂಗತ ಈ ಹಾಲಾಡಿ ಶೆಟ್ಟಿ ಮಾಮ. ಆತನ ನಯವಂಚನೆಗೆ ಇಲ್ಲೊಂದು ತಾಜಾ-ತಾಜಾ ಉದಾಹರಣೆಯಿದೆ ನೋಡಿ.


ಪ್ರತಾಪಚಂದ್ರ ಶೆಟ್ಟಿ


ರವಿ ಪೂಜಾರಿ

ಒಮ್ಮೆ ಒಬ್ಬ ಬಡವ ಶಾಸಕ ಶೆಟ್ಟರ ಹಾಲಾಡಿ ಮನೆಗೆ ಹೋಗಿದ್ದ. ಮಳೆ ಜೋರಾಗಿ ಬರುತ್ತಿತ್ತು. ತನ್ನ ಮನೆಗೆ ಹೆಂಚುಗಳೇ ಇಲ್ಲ... ಏನಾದರೂ ಕಾಸಿನ ಸಹಾಯ ಮಾಡಿ ಎಂದು ಬಡವ ಕಣ್ಣೀರಿಟ್ಟಿದ್ದಾನೆ. ಆಗ ಶಾಸಕರ ಮನೆಯಲ್ಲಿ ಕಮ್ಮಿ ಎಂದರೂ 200-300 ಜನರಿದ್ದರು. (ಇದು ಮಾಮೂಲಿ ಜನಜಂಗುಳಿ ಶಾಸಕರ ಮನೆ ಮುಂದೆ) ಹಾಲಾಡಿ ಶೆಟ್ಟರು ಸರಿಬುದ್ಧಿ ಪ್ರದರ್ಶಿಸಿದ್ದಾರೆ. ಜನರ ಮರುಳು ಮಾಡಲು ಈ ಸಂದರ್ಭ ಬಳಸಿಕೊಂಡಿದ್ದಾರೆ. "ನೋಡು ಮಾರಾಯಾ... ನನ್ನತ್ರ ದುಡ್ ಇಲ್ಲ... ಏನ್ ಮಾಡೋದೋ ಅರ್ಥ ಆತಿಲ್ಲೆ... ಒಂದ್ ಕೆಲ್ಸ ಮಾಡ್... ನನ್ ಮನೆ ಹಂಚೇ ತೆಗ್ದು ಕೊಡ್ತೆ....", ಎಂದಿದ್ದಾರೆ. ಅಷ್ಟೇ ಅಲ್ಲ, ಹಂಚು ತೆಗೆದು ವಾಹನದಲ್ಲಿ ಹಾಕಿಸಿ ಬಡವನ ಮನೆಗೆ ಕಳಿಸಿದ್ದಾರೆ.

ಹಂಚಿನ ಗಾಡಿ ಅತ್ತ ಹೋಗುತ್ತಿದ್ದಂತೆಯೇ ಈ ಹಣವಂತ ಶಾಸಕನ ಮನೆ ಹಿಂಬದಿಯಲ್ಲಿದ್ದ ಹೊಸ-ಹೊಸ ಹಂಚುಗಳನ್ನು ಆತನ ಮನೆ ಮಾಡಿಗೆ ಹೊದೆಸಲಾಗುತ್ತದೆ. ಊರೆಲ್ಲ "ಹಾಲಾಡಿ ಕರುಣಾಮಯಿ,.. ಬಡವರ ಭಾಗ್ಯದ ದೇವತೆ...." ಎಂದೆಲ್ಲ ಗುಲ್ಲೇಳುತ್ತದೆ. ತಂತ್ರಗಾರಿಕಾ ಪ್ರವೀಣ ಹಾಲಾಡಿಯ ಸ್ಟಂಟ್ ಸಕ್ಸಸ್! ಹಾಲಾಡಿಯ ಇಂಥ ಗಿಮಿಕ್‌ಗಳೆಲ್ಲ ಈಗ ಕುಂದಾಪುರದಲ್ಲಿ ಮಿಲಿಯನ್ ಡಾಲರ್ ಜೋಕ್‌ನಂಥಾಗಿದೆ. ಈ ಹಂಚಿನ ಕತೆಯಂತೂ ಕುಂದಾಪುರದಲ್ಲಿ ಜನಜನಿತ. ಆದರೆ ಅದರ ಮರ್ಮ ಮಾತ್ರ ಬಲ್ಲವನೇ ಬಲ್ಲ!! ಹಾಲಾಡಿಯ ಇಂಥ ಹಲವು ಬಡವರೋದ್ಧಾರದ ಜೋಕ್ ಕುಂದಾಪುರದಲ್ಲಿ ಚಾಲ್ತಿಯಲ್ಲಿದೆ.

ಹಣದ ಮೂಲ ಯಾವುದು?

ಶಾಸಕ ಹಾಲಾಡಿ ಶೆಟ್ಟಿಗೆ ಅಜಾತಶತ್ರು, ಕೊಡುಗೈ ದಾನಿ ಎಂಬಂತೆಲ್ಲ ಬಿರುದುಬಾವಲಿಗಳಿವೆ. ಆತನ ಮನೆಯ ಎದುರು ಪ್ರತಿದಿನ ನೂರಾರು ಜನರಿರುತ್ತಾರೆ. ಮದುವೆ, ದೇವರ ಕಾರ್ಯ, ಕ್ರೀಡೋತ್ಸವ, ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಹ್ವಾನಿಸಲೆಂದು ಬಂದವರು, ವೈಯಕ್ತಿಕ ಬಡತನ, ರೋಗ-ಆಪರೇಷನ್ ಎಂದು ಸಹಾಯ ಕೇಳಲು ಹೋದವರು ದೊಡ್ಡ ಸಂಖ್ಯೆಯಲ್ಲಿರುತ್ತಾರೆ. ಇವರೆಲ್ಲರಿಗೆ ಹಾಲಾಡಿ ಶೆಟ್ರು ಖಾಲಿ ಕೈಲಿ ಕಳಿಸುವುದಿಲ್ಲ. ಹಾಗೆ ಆತ ಮಾಡುವ ಪ್ರತಿದಿನದ ದಾನ-ಧರ್ಮವೇ ಲಕ್ಷ ದಾಟುತ್ತದೆಂಬುದು ಒಂದು ನಿಖರವಾದ ಅಂದಾಜು. ಈ ಎಸ್ಟಿಮೇಟ್ ಮಾಡಿದ್ದು ಆತನದೇ ಅಭಿಮಾನಿ ಬಳಗ.


ಕಳೆದ ಅಸೆಂಬ್ಲಿ ಇಲೆಕ್ಷನ್‌ಗೆ ಪಕ್ಷೇತರನಾಗಿ ನಿಂತಿದ್ದ ಹಾಲಾಡಿ ಶೆಟ್ಟಿ ಹಣ ಕೋಟಿಗಳ ಲೆಕ್ಕದಲ್ಲಿ ಖರ್ಚು ಮಾಡಿದ್ದಾರೆ. ಮನೆ-ಮನೆಗೆ ಹಣದ ಕಂತೆ-ಕಂತೆ ಹಂಚಿದ್ದಾರೆ. ಬಿಜೆಪಿ-ಕಾಂಗ್ರೆಸ್‌ನ ಕ್ಯಾಂಡಿಡೇಟ್‌ಗಳು ಮತ್ತು ಆ ಪಕ್ಷದ ದೊಡ್ಡವರೇ ಹಾಲಾಡಿಯ ಕುರುಡು ಕಾಂಚಾಣದ ಕುಣಿದಾಟಕ್ಕೆ ದಂಗುಬಡಿದುಹೋಗಿದ್ದರು. "ಸುಬಗ"ನೆಂದು ಹಾಲಾಡಿ ಶೆಟ್ಟರ ನಂಬಿದ್ದ ಮತದಾರರು ಆತನ ಅಸಲೀ ಅವತಾರ ಕಣ್ಣಾರೆ ಕಂಡಿದ್ದರು. ಮಾತುಮಾತಿಗೆ ತಾನು ಅಕ್ರಮವಾಗಿ ಹಣ ಸಂಪಾದಿಸಿಲ್ಲ, ಚುನಾವಣೆ ಹೊತ್ತಲ್ಲಿ ಯಾರಿಂದಲೂ ದೇಣಿಗೆ ಪಡೆದಿಲ್ಲವೆಂದು ಹೇಳುವ ಹಾಲಾಡಿ ಶೆಟ್ಟಿಗೆ ಇಷ್ಟೊಂದು ಕಾಸು ಎಲ್ಲಿಂದ ಬಂತು ಎಂಬುದೇ ಇವತ್ತಿಗೂ ಕರಾವಳಿ ಮಂದಿಗೆ ನಿಗೂಢ ಪ್ರಶ್ನೆಯಾಗಿ ಕಾಡುತ್ತಿದೆ.

ರಿಯಲ್ ಎಸ್ಟೇಟ್ ದಂಧೆ

ಹಣದ ಮೂಲ ಕೇಳಿದರೆ ಹಾಲಾಡಿ ಶೆಟ್ರು ಒಂದಕ್ಕೊಂದು ತಾಳೆಯಾಗದ ರೊಕ್ಕದ ಲೆಕ್ಕಾಚಾರ ಹೇಳ್ತಾರೆ.

...ನನಗೆ ಅಡಿಕೆ-ತೆಂಗಿನ ದೊಡ್ಡ ತೋಟವಿದೆ, ಬಡ್ಡಿಯಿಲ್ಲದೆ ಕೋಟಿಗಟ್ಟಲೆ ಕಾಸು ಕೊಡುವ ಮುಂಬೈ-ದುಬೈನ-ಹಿತೈಷಿ ಉದ್ಯಮಿ ಮಿತ್ರರಿದ್ದಾರೆ. ಭೂಮಿ ಮಾರಿ ಹಣ ಸಂಪಾದಿಸಿದ್ದೇನೆ.... ಆರೇಳು ಕೋಟಿ ಸಾಲವೂ ಇದೆ. ಇದೆಲ್ಲ ಬಡವರಿಗೆ ಹಂಚುತ್ತಿದ್ದೇನೆ. ನಂಗೆ ಹೆಂಡತಿ-ಮಕ್ಕಳಿಲ್ಲ-ಸಂಸಾರದ ಗೊಡವೆ ಇಲ್ಲ.... ನನ್ನ ಹಣವೆಲ್ಲ ಕ್ಷೇತ್ರದ ಬಡವರಿಗೆ...." ಎಂದೆಲ್ಲ ಬಂಡಲ್ ಫಿಲಾಸಫಿ ಬಿಗಿಯುತ್ತಾರೆ. ವಾಸ್ತವ ಲೆಕ್ಕಾಚಾರ ಹಾಕಿದರೆ ಅಕ್ರಮ-ಕಾನೂನುಬಾಹಿರ ಹಣದ ಮೂಲ ಕಂಡೇ ಕಾಣುತ್ತದೆ.

ಶಾಸಕ ಹಾಲಾಡಿ ಶೆಟ್ಟಿಗೆ ಆತನ ಊರಿನ ಗಡಿಯಲ್ಲಿರುವ ಕಾರ್ಕಳದ ಸೀತಾನದಿ, ನಾಡ್ಪಾಲ್‌ನಲ್ಲಿ ಬರೋಬ್ಬರಿ 130 ಎಕರೆ ತೆಂಗು, ಕಂಗಿನ ತೋಟವಿದೆ. ಇದರಲ್ಲಿ 80 ಎಕರೆ ಪರಕಾಸ್ತು ಭೂಮಿ ಅಂದರೆ ಸರ್ಕಾರಿ ಭೂಮಿ. ಮರದ



ದಂಧೆಯಿಂದ ಹಿಂದಾತ ಹಣ ಮಾಡಿದ್ದಾರೆಂದು ಹೇಳುವವರೂ ಇದ್ದಾರೆ. ಈಗಾತನದು ಪಕ್ಕಾ ರಿಯಲ್ ಎಸ್ಟೇಟ್ ದಂಧೆ. ಬೆಂಗಳೂರು-ಉಡುಪಿ-ಕಾಳಾವಾರ ಕೋಟೇಶ್ವರದ ತನಕ ಹಾಲಾಡಿ ಶೆಟ್ರ ಭೂ ದಂಧೆ ಜಾಲ ವ್ಯಾಪಿಸಿದೆ. ಮಾಜಿ ಶಾಸಕ ವಿನ್ನಿಫ್ರೆಡ್ ಫರ್ನಾಂಡಿಸರ ತೋಟದಿಂದ ಕಾರಂತರ ಫ್ಯಾಮಿಲಿಯ ಭೂಮಿಯ ಡೀಲಿಂಗ್ ಮಾಡಿದ್ದು ಶಾಸಕ ಶೆಟ್ಟರ ಭೂ ಬಿಸ್ನೇಸ್ ಗ್ಯಾಂಗೇ.

ಒಂದು ಸುದ್ದಿಯ ಪ್ರಕಾರ ಹಾಲಾಡಿ ಶೆಟ್ಟರಿಗೆ ಭೂಬಿಸ್ನೇಸ್ ಕೈಹಿಡಿದಿದೆ. ಇದರಲ್ಲಾತ ಕೋಟಿ-ಕೋಟಿ ಸಂಪಾದಿಸುತ್ತಿದ್ದಾರೆ. ತುಂಬ ಜಾಣ್ಮೆಯಿಂದ ತಂಟೆ-ತಕರಾರಿನ ಭೂಮಿ ಡೀಲಿಂಗ್‌ಗೆ ಆತನ ತಂಡ ಕೈಹಾಕುತ್ತದೆ. ಮಿನಿ ಡಾನ್ ಕೊರಗ ವಿಶ್ವನಾಥ್ ಶೆಟ್ಟಿಯಂಥ ಭೂಗತ ಜೀವಿಗಳೂ ಇದರಲ್ಲಿ ಕೈಯ್ಯಾಡಿಸುತ್ತಾರೆ. ಹೀಗಾಗಿ ಅಗ್ಗದಲ್ಲಿ ಬೆಲೆಬಾಳುವ ಭೂಮಿ ಹಾಲಾಡಿ ಶೆಟ್ರು ಕಬಳಿಸಿ ಮಾರಾಟ ಮಾಡಿ ಭರ್ಜರಿ ಕಮಾಯಿ ಮಾಡುತ್ತಿದ್ದಾರೆ. ಕುಂದಾಪುರದಲ್ಲಿರುವ ಸುದ್ದಿಯಂತೆ ಹಾಲಾಡಿಯ ಹಲವು ಭೂ ವಹಿವಾಟು ಕೊರಗ ವಿಶ್ವನಾಥ್ ಶೆಟ್ಟಿಯ ಕೇರ್ ಆಫ್‌ನಲ್ಲೇ ಆಗುತ್ತಿವೆಯಂತೆ.

ಡಾನ್ ಪೂಜಾರಿ ಪ್ರವೇಶಂ

ಹೊರನೋಟಕ್ಕೆ ಸರಳ-ಸಜ್ಜನ-ಶುದ್ಧಹಸ್ತದ ಶಾಸಕನಂತೆ ಕಾಣಿಸುವ ಈ ಆಜನ್ಮ ಬ್ರಹ್ಮಚಾರಿಯ ಒಂದೊಂದು ನಗು-ನಡೆ-ನುಡಿಯೂ ನಿಗೂಢ. ಭೂಗತ ರೌಡಿ ಕೊರಗ ವಿಶ್ವನಾಥ್ ಶೆಟ್ಟಿ ಮತ್ತು ಶಾಸಕ ಹಾಲಾಡಿ ಶೆಟ್ಟರ ಸಂಬಂಧದ ಅನುಮಾನ-ಊಹಾಪೋಹಗಳೇನೇ ಇರಲಿ, ಡಾನ್ ರವಿ ಪೂಜಾರಿಗೆ ಈ ಕೊರಗನ ಕಂಡರಾಗದೆಂಬುದು ಖರೆ. ಪೂಜಾರಿಯ ಸ್ವಜಾತಿ ಬಂಧು ಬಿಲ್ಲವರೊಬ್ಬರ ಲ್ಯಾಂಡ್ ವಹಿವಾಟಿಗೆ ಕೊರಗ ಕರಾಮತ್ತು ನಡೆಸಿದ್ದನಂತೆ! ಇದು ರವಿಯ ಕೆರಳಿಸಿತ್ತು. ಶಾಸಕ ಹಾಲಾಡಿ ಕೊರಗನಿಗೆ ನೆರವಾಗುತ್ತಿದ್ದಾನೆಂಬ ಗುಮಾನಿಯೂ ರವಿಗೆ ಬಂದಿತ್ತು. ಈ ಭೂ ಭಾನಗಡಿ ಭೂಗತ ರೌಡಿಗಳ ಮೇಲಾಟಕ್ಕೆ ಕಾರಣವಾಗಿತ್ತು, ಇದು ಕುಂದಾಪುರ ಅಥವಾ ಕರಾವಳಿಯಲ್ಲಿ ಸುದ್ದಿಯಾಗಿರುವ ಸಂಗತಿ.

ಆದರೆ ಇದ್ದಕ್ಕಿದ್ದಂತೆ ಶಾಸಕ ಹಾಲಾಡಿ ಸಾಹೇಬರಿಗೆ ಡಾನ್ ರವಿ ಪೂಜಾರಿಯಿಂದ ಬೆದರಿಕೆ-ಬೇಡಿಕೆ ಫೋನ್ ಕರೆ ಬಂದಿದೆ ಎಂಬ ಸ್ಫೋಟಕ ಸಮಾಚಾರ ಹಬ್ಬಿದಾಗ ಹಲವು ಅನುಮಾನಗಳು ಎದ್ದಿವೆ. ಶಾಸಕ ಶೆಟ್ಟರ ಸಾಚಾತನದ ಬಗ್ಗೆ ಸಹಜವಾಗೇ ಸಂಶಯ ಶುರುವಾಗಿದೆ. ಶಾಸಕ ಶೆಟ್ಟಿ ದೂರುವ ಪ್ರಕಾರ ಅಂದು ಮೇ 25 ರ ಮಧ್ಯಾಹ್ನ ಆತ ಮನೆ (ಹಾಲಾಡಿ)ಯಿಂದ ಕುಂದಾಪುರದ ಕೋಟೇಶ್ವರದತ್ತ ಬರುವಾಗ ರವಿ ಪೂಜಾರಿಯ ಫೋನ್ ಬಂದಿದೆ. "ನೀನು ಶಾಸಕನಾಗಿ ಹಣ ಮಾಡಿದ್ದೀಯಾ.... ನಂಗೆ 10 ಕೋಟಿ ಕೊಡು.... ಇಲ್ಲದಿದ್ರೆ ಫಿನಿಷ್ ಮಾಡೋ ವ್ಯವಸ್ಥೆ ಮಾಡ್ತೇನೆ...." ಎಂದಬ್ಬರಿಸಿದನಂತೆ. ಅದಕ್ಕುತ್ತರವಾಗಿ "ನಾನು ಕಾನೂನುಬಾಹಿರವಾಗಿ ಹಣ ಮಾಡಿಲ್ಲ... ಶ್ರಮದಿಂದ ಹಣ ಗಳಿಸಿ ಬಡವರಿಗೆ ಹಂಚುತ್ತಿದ್ದೇನೆ...." ಎಂದರಂತೆ ಶಾಸಕ ಶೆಟ್ರು. ಅದಕ್ಕೆ ಪ್ರತಿಯಾಗಿ ಡಾನ್ ಪೂಜಾರಿ "ನಾಳೆಯೊಳಗೆ ಹಣ ವ್ಯವಸ್ಥೆಯಾಗಲಿ... ನನ್ನ ಈ ನಂಬರ್ ಬರೆದುಕೋ.. ಇದಕ್ಕೆ ಫೋನ್ ಮಾಡಿ ಹೇಳು...." ಅಂದನಂತೆ. "ನಂಗೆ ನಿನ್ನ ನಂಬರ್ ಬೇಡ.... ನನ್ನ ಹತ್ರ ಹಣವೇ ಇಲ್ಲ... ನಂಬರ್ ಏಕೆ.....?" ಎಂದು ಶಾಸಕ ಶೆಟ್ರು ಕೇಳಿದರಂತೆ.

ಶಾಸಕ ಶೆಟ್ರು ಪೊಲೀಸರಿಗೆ ದೂರು ನೀಡಿದ್ದಾರೆ. ಬೇಡ, ಬೇಡ ಎಂದಾತ ಹೇಳಿದರೂ ರಕ್ಷಕರ ನೇಮಿಸಿದ್ದಾರೆ.



ಎಸ್ಪಿ ಅಣ್ಣಾಮಲೈ! ಆದರೆ ಮೇ 27 ರಂದು ಡಾನ್ ರವಿ ಪೂಜಾರಿ ಆಸ್ಟ್ರೇಲಿಯಾದಿಂದ ಮತ್ತೆ ಫೋನಾಯಿಸಿದನಂತೆ. "ನೀವು ಬಡವರಿಗೆ ಸಹಾಯ ಮಾಡುವವರಂತೆ... ನಂಗೆ ಬೇರೆ-ಬೇರೆ ದೇಶದಿಂದ ಫೋನ್ ಕಾಲ್‌ಗಳು ಬಂದಿವೆ... ನಿಮ್ಮ ತಂಟೆಗೆ ಹೋಗಬಾರದೆಂದು ಹೇಳಿದ್ದಾರೆ... ನೀವು ನನಗಾಗದ ಕೊರಗ ವಿಶ್ವನಾಥ್ ಶೆಟ್ಟಿಗೆ ಹೆಲ್ಪ್ ಮಾಡ್ತೀರೆಂಬ ಸಿಟ್ಟಲ್ಲಿ ಕಾಲ್ ಮಾಡಿದ್ದೆ... ಇನ್ನು ನಿಮಗೆ ಕಾಲ್ ಮಾಡೋದಿಲ್ಲ...." ಎಂದು ತುಳುವಿನಲ್ಲಿ ಹೇಳಿದ್ದನಂತೆ.

ಸುಳ್ಳೆಂಬ ಸಂಶಯ

ಭೂದಂಧೆಕೋರ ಶಾಸಕ ಹಾಲಾಡಿ ಹೇಳುವ ಕತೆಯಲ್ಲಿ ಸಹಜವಾಗೇ ಒಂದಿಷ್ಟು ಸಂಶಯ ಎಂಥ ಗಾಂಪನಿಗಾದರೂ ಬರುತ್ತದೆ! ಪಳಗಿದ ಪಾತಕಿ ಪೂಜಾರಿ ನಾಲ್ಕು ಸಲ ಸತತವಾಗಿ ಶಾಸಕನಾಗಿರುವ ಹಾಲಾಡಿಯ "ಜನಪ್ರಿಯತೆ" "ಬಡವರೋದ್ಧಾರ" ಇತಿಹಾಸ ಗೊತ್ತಿಲ್ಲದೆ ಅನಾಮತ್ತು ಹತ್ತು ಕೋಟಿಯ ಬೇಡಿಕೆ ಇಡುತ್ತಾನೆಂದರೆ ನಂಬುವುದಾದರೂ ಹೇಗೆ? ಶಾಸಕರ "ಒಳ್ಳೆಯತನ" ಅರ್ಥವಾದ ನಂತರ ಶರಣಾಗಿ ನಿಮ್ಮ ತಂಟೆಗೇ ಬರುವುದಿಲ್ಲ ಎಂದು ಖತರ್‌ನಾಕ್ ಭೂಗತ ಪಾತಕಿಯೊಬ್ಬ ಹೇಳಿದ್ದಾನೆಂದರೆ ವಿಚಿತ್ರ ಎನ್ನಿಸದಾ? ಭೂಗತಲೋಕದ ಕೆಮಿಸ್ಟ್ರಿ ಬಲ್ಲವರಂತೂ ಡಾನ್ ಎಂದಬ್ಬರಿಸುವ ಭೂಗತನೊಬ್ಬ ಹಫ್ತಾ ಬೇಡಿಕೆ ಅಲ್ಲಿಗೇ ಬಿಟ್ಟುಬಿಡಬಹುದು; ಆದರೆ ಕ್ಷಮಾಪಣಾ ಧ್ವನಿಯಲ್ಲಿ "ಟಾರ್ಗೆಟ್"ನ ಜೊತೆ ಮಾತಾಡೋದು ಅಸಂಭವ ಎಂದೇ ತರ್ಕಿಸುತ್ತಾರೆ. ಉಡುಪಿ ಜಿಲ್ಲೆಯ ಜಾತಿ ಸಮೀಕರಣ ನೋಡಿದರಂತೂ ಪೂಜಾರಿ (ಬಿಲ್ಲವ) ರೌಡಿಯೊಬ್ಬ ಶೆಟ್ಟಿ (ಬಂಟ)ಗೆ ಶರಣಾಗೋದು ಸಾಧ್ಯವೇ ಇಲ್ಲ.

ಡಾನ್‌ಗೆ ಧಕ್ಕೆ ಮಾಡೋ ಧೈರ್ಯವಿದೆಯಾ?

ಒಮ್ಮೆ ಬೆದರಿಕೆ ಹಾಕಿದ ಮೇಲೆ ಶಸ್ತ್ರಾಸ್ತ್ರ ಕೆಲಕ್ಕಿಟ್ಟು ಮುಂದಿಯೂರುವ ಪೈಕಿ ಭೂಗತರಲ್ಲ, ಅಂದಿನ ರೌಡಿ ರವಿ ಪೂಜಾರಿ ಮನಪರಿವರ್ತನೆಯಾಗಿ ಹಿಮ್ಮೆಟ್ಟಿದ್ದಾನೆಂಬುದು ಯಾರೂ ನಂಬದ ಮಾತು. ಹಾಗಾಗಿ ಆತನ ಭೀಭತ್ಸ ಮಾರ್ಕೆಟ್‌ಗೆ ಕುಂದುತರುವಂಥ ಹೇಳಿಕೆ ನೀಡುವ ಧೈರ್ಯ ಶಾಸಕ ಶೆಟ್ಟಿಗೆ ಇದೆಯಾ? ಇಂಥ ರಿಸ್ಕ್ ತೆಗೆದುಕೊಳ್ಳಲು ಶೆಟ್ಟಿ ಮುಂದಾಗುವ ಛಾನ್ಸ್ ಇಲ್ಲ, ಈ "ಗುದ್ದೋಡುವ" ಗಂಡಾಗುಂಡಿಯಲ್ಲಿ ಎರಡು ಸಾಧ್ಯತೆಯಿದೆ ಎಂಬುದು ಪೊಲೀಸರ ಮತ್ತು ಭೂಗತರ ಇತಿಹಾಸ ಬಲ್ಲವರ ತರ್ಕ.

ಒಂದು, ಹಾಲಾಡಿಯ ಹಿತೈಷಿಗಳಾದ ಮುಂಬೈ-ದುಬೈನಲ್ಲಿರುವ ಬಿಸ್‌ನೆಸ್‌ಮನ್‌ಗಳು, ಭೂಮಾಫಿಯಾದವರು ಡಾನ್ ಪೂಜಾರಿಗೆ ಹತ್ತು ಕೋಟಿಯಲ್ಲದಿದ್ದರೂ ಒಂದಿಷ್ಟು ಕೊಟ್ಟು ಥಂಡ ಮಾಡಿರಬಹುದು ಅಥವಾ ಭೂಗತ ಲೋಕದಲ್ಲಿ ಸನ್ಮಿತ್ರರನ್ನು ಹೊಂದಿರುವ ಶಾಸಕ ಶೆಟ್ಟಿ ಬಿಜೆಪಿ ಬಿಟ್ಟನಂತರ ನೆಲ ಕಚ್ಚಿರುವ ತನ್ನ ಇಮೇಜು ವೃದ್ಧಿಗೆ ರವಿ ಪೂಜಾರಿಯನ್ನು ಬಳಸಿಕೊಂಡಿರಬೇಕು. ರವಿ ಪೂಜಾರಿ ಮತ್ತು ಹಾಲಾಡಿ "ನೀನು ಹೊಡೆದ ಹಾಗೆ ಮಾಡು.... ನಾನು ತಿರುಗಿಬಿದ್ದಂಗೆ ಮಾಡ್ತೇನೆ...." ಎಂದು ಪರಸ್ಪರ ಒಪ್ಪಂದ ಮಾಡಿಕೊಂಡಿರಬೇಕು. ಕುಂದಾಪುರದಲ್ಲೀಗ ಎಲ್ಲಿ ನೋಡಿದರೂ ಇದೇ ಚರ್ಚೆ. ಕಳೆಗುಂದಿರುವ ಶಾಸಕ ಹಾಲಾಡಿ ಶೆಟ್ಟಿ ರಾಜಕಾರಣದ ಮುಖ್ಯ ಭೂಮಿಕೆ ಬದಲು ಈ ಪ್ರಹಸನ ಹೆಣೆದಿದ್ದಾರೆಂದೇ ಜನರಾಡಿಕೊಳ್ಳುತ್ತಿದ್ದಾರೆ.

ಸತ್ಯ ಹೇಳಬೇಕಾಗಿರುವುದು ಎಸ್ಪಿ ಅಣ್ಣಾಮಲೈ ಸಾಹೇಬರೊಬ್ಬರೇ!! ಮಜಾ ಎಂದರೆ ಎಂಪಿಣಿ ಶೋಭಾ ಕರಂದ್ಲಾಜೆ ಎಂಬ ಕೂಗುಮಾರಿ ಒಬ್ಬರ ಬಿಟ್ಟರೆ ಮತ್ಯಾವ ರಾಜಕಾರಣಿಯಾಗಲಿ, ಜನಸಾಮಾನ್ಯರಾಗಲಿ ಈ ಶಾಸಕನಿಗೆ ಸಿಂಪಥಿ ಧೈರ್ಯ ಹೇಳಲು ಮುಂದಾಗಿಲ್ಲ. ಜನಸಾಮಾನ್ಯರಂತೂ ಈ ನಾಟಕವನ್ನು ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಇನ್ನಾದರೂ ಹಾಲಾಡಿ ಅಗ್ಗದ ಜನಪ್ರಿಯತೆಯ ದಗಲುಬಾಜಿ ಶೈಲಿ ಬಿಟ್ಟು ಪ್ರಜಾತಂತ್ರದ ಮೂಲಭೂತ ಆಶಯ-ನಿಯಮಕ್ಕೆ ಬದ್ಧನಾಗಬೇಕಾಗಿದೆ.

ಹೊಣೆಗಾರಿಕೆಯ ಶಾಸಕನಾಗಲಾಗದಿದ್ದರೆ ರಾಜಕೀಯ ಸನ್ಯಾಸ ತೆಗೆದುಕೊಂಡು ಹಾಲಾಡಿ ಪೂರ್ಣ ಪ್ರಮಾಣದ ರಿಯಲ್ ಎಸ್ಟೇಟ್ ಉದ್ಯಮಿ ಆಗುವುದು ಒಳ್ಳೆಯದು. ಕುಂದಾಪುರದ ಪ್ರಜ್ಞಾವಂತರು ಢೋಂಗಿ ರಾಜಕಾರಣದಿಂದ ಮುಕ್ತರಾಗಲು ಯೋಚಿಸುವ ಕಾಲ ಬಂದಿದೆ!!

■ ವರದಿಗಾರ

ಮದ್ರಾಸ್ ಐಐಟಿ ವಿದ್ಯಾರ್ಥಿ ಸಂಘದ ನಿಷೇಧ ಎಷ್ಟು ಸರಿ?

ಒಂದು ಪತ್ರ

ವ್ಯಕ್ತಿಗಳನ್ನು ಕೊಲ್ಲುವ ಮೂಲಕ ಅವರ ಆಲೋಚನೆಗಳನ್ನು ಕೊಲ್ಲಲು ಸಾಧ್ಯವಿಲ್ಲ ಎಂದು ಕ್ರಾಂತಿಕಾರಿ ಭಗತ್‌ಸಿಂಗ್ ಸೇರಿದಂತೆ ಅನೇಕ ಮಹಾತ್ಮರು ಸಾರಿಹೇಳಿದ್ದಾರೆ. ಗ್ರೀನ್‌ಪೀಸ್ ಸೇರಿದಂತೆ ಹಲವು ಸ್ವಯಂಸೇವಾ ಸಂಘಟನೆಗಳನ್ನು ನಿಷೇಧಿಸಲು ಮುಂದಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿನ ಟೀಕೆ ಸಹಿಸದೇ ಕೆಲವರನ್ನು ಬಂಧಿಸಿ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿದ್ದು, ಟೀಕಾಕಾರರಿಂದ ಮುಜುಗರಕ್ಕೊಳಗಾಗಿದ್ದ ಕೇಂದ್ರ ಸರ್ಕಾರಕ್ಕೆ ಇನ್ನೂ ಬುದ್ಧಿ ಬಂದಿಲ್ಲ. ಮದ್ರಾಸ್ ಐಐಟಿಯ ವಿದ್ಯಾರ್ಥಿ ಸಂಘಟನೆಯನ್ನು ನಿಷೇಧ ಮಾಡುವುದರೊಂದಿಗೆ ತನಗೆ ಸಮ್ಮತವಲ್ಲದ ವಿಚಾರ ಮಾತನಾಡುವವರನ್ನು ಬಂಧಿಸುವ ಇಲ್ಲವೇ ನಿಷೇಧಿಸುವ ಮೂಲಕ ತಾನು ಮಾಡಿದ ತಪ್ಪನ್ನೇ ಮತ್ತೆ ಮತ್ತೆ ಮಾಡುವ ಮೂಲಕ ಇಕ್ಕಟ್ಟಿಗೆ ಸಿಲುಕಿದೆ.

ಕೇಂದ್ರ ಸರ್ಕಾರ ಕಾರ್ಯವೈಖರಿ ಕುರಿತು ಟೀಕೆ ಮಾಡಿದ್ದಕ್ಕೆ ಮದ್ರಾಸ್ ಐಐಟಿಯ ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್ ಸಂಘಟನೆಯನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವಾಲಯದ ನಿರ್ದೇಶನದ ಮೇಲೆ ನಿಷೇಧ ಮಾಡಿರುವುದು ಗಮನಿಸಿದರೆ ನಮ್ಮದು ಪ್ರಜಾಪ್ರಭುತ್ವ ಸರ್ಕಾರವೋ? ಇಲ್ಲ ಮೋದಿ ಸರ್ವಾಧಿಕಾರವೋ..? ಎಂಬ ಅನುಮಾನ, ಆತಂಕ ಮೂಡಿಸುತ್ತಿದೆ.

ದೇಶದ ಸಂವಿಧಾನದ ಪ್ರಕಾರ ಕಲಂ 19ರ ಪ್ರಕಾರ ದೇಶದ ಎಲ್ಲಾ ಪ್ರಜೆಗಳಿಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಭೂತ ಹಕ್ಕಿದೆ. ಇದರಂತೆ ಸಂಘಟಿತರಾಗುವ, ಸಮಾಜದ ಆಗುಹೋಗುಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವ, ಸರ್ಕಾರ ನಡೆಗಳನ್ನು ಸಮರ್ಥಿಸುವ ಇಲ್ಲವೇ ಟೀಕಿಸುವ ಹಕ್ಕುಗಳು ಎಲ್ಲರಿಗೂ ಇದ್ದು ಇದನ್ನು ಕಾಪಾಡಬೇಕಾದ ಕೇಂದ್ರ ಸರ್ಕಾರವೇ ತನ್ನ ವಿರುದ್ಧದ ಟೀಕೆಯನ್ನು ಸಹಿಸದೇ ಈ ಕೃತ್ಯ ಎಸಗಿರುವುದು ದೊಡ್ಡ ದುರಂತವಾಗಿದ್ದು ಇದನ್ನು ಖಂಡಿಸಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮತ್ತು ಸಂವಿಧಾನದ ಹಕ್ಕುಗಳ ಪರ ದನಿ ಎತ್ತಬೇಕಿರುವುದು ಪ್ರಜಾತಂತ್ರವಾದಿಗಳ ಕರ್ತವ್ಯವಾಗಿದೆ.

ಅಧಿಕಾರ ವಹಿಸಿಕೊಂಡು ಭರ್ತಿ ಒಂದು ವರ್ಷ ಕಳೆದರೂ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವುದನ್ನು ಬಿಟ್ಟು ಜನಪರವಾಗಿ ಆಡಳಿತ ಮಾಡುವುದನ್ನು ಬಿಟ್ಟು ಸದಾ ಒಂದಲ್ಲೊಂದು ವಿವಾದ ಹುಟ್ಟುಹಾಕುವ ಮೂಲಕ ಕೇಂದ್ರ ಸರ್ಕಾರ ಕಾಲಹರಣ ಮಾಡುವುದಲ್ಲದೇ ದೇಶದ ಹಿತಕ್ಕೆ ಮಾರಕವಾಗುವಂತಹ ನೀತಿಗಳನ್ನೇ ಹೆಚ್ಚು ತರುತ್ತಿರುವಂಥದ್ದು ವಾಸ್ತವದ ಸಂಗತಿಯಾಗಿದೆ. ಘರ್ ವಾಪಸಿ, ಗೋಹತ್ಯೆ ನಿಷೇಧ ಕಾಯ್ದೆ, ಹಿಂದಿ ಭಾಷಾ ಹೇರಿಕೆ, ಕಾರ್ಮಿಕ ಕಾಯ್ದೆಗಳ ತಿದ್ದುಪಡಿ, ಬಾಲ ಕಾರ್ಮಿಕ ಕಾಯ್ದೆಗೆ ತಿದ್ದುಪಡಿ, ಭೂಸ್ವಾಧೀನ ಮಸೂದೆ ಸುಗ್ರೀವಾಜ್ಞೆ ಇತ್ಯಾದಿಗಳ ಮೂಲಕ ಸರ್ಕಾರ ಮತ್ತಷ್ಟು ಜನವಿರೋಧಿಯಾಗಿ ಕೆಲಸ ಮಾಡುತ್ತಿದೆ. ಇದನ್ನು ಕುರಿತು ಚರ್ಚಿಸುವುದು ತಪ್ಪೇ? ಒಂದು ವೇಳೆ ಈ ಯೋಜನೆಗಳು ಜನಪರ ಎಂದಾದರೆ ಅದರ ಬಗ್ಗೆ ಸಮರ್ಥನೆ ಮಾಡಿಕೊಳ್ಳುವುದು ಬಿಟ್ಟು ಸಂಘಸಂಸ್ಥೆಗಳನ್ನು ನಿಷೇಧಿಸುವುದರ ಮೂಲಕ ಜನರ ಬಾಯಿಮುಚ್ಚಿಸಲು ಪ್ರಯತ್ನಿಸುವುದು ಕೇಂದ್ರ ಸರ್ಕಾರದ ಅಧಿಕಾರ ದುರುಪಯೋಗ ಮತ್ತು ಹೇಡಿತನವನ್ನು ಸೂಚಿಸುತ್ತದೆ ಹೊರತು ಮತ್ತೇನಲ್ಲ.

ಇನ್ನು ಮದ್ರಾಸ್ ಐಐಟಿಯ ವಿಚಾರಕ್ಕೆ ಬರುವುದಾದರೆ ವಿದ್ಯಾರ್ಥಿ ಸಂಘಟನೆಗಳು ಪಾಲಿಸಬೇಕಾದ ಕೆಲವು ನಿಯಮಗಳಿರುತ್ತವೆ. ಪಠ್ಯಕ್ಕೆ ಹೊರತಾದ ವಿಚಾರಗಳನ್ನು ಚರ್ಚಿಸಿದರೆ ನಿಷೇಧ ಅನಿವಾರ್ಯ ಎಂದು ಹೇಳಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ದೇಶದ ಜ್ವಲಂತ ಸಮಸ್ಯೆಗಳ ಕುರಿತು ಚರ್ಚಿಸುವುದು, ಪರಿಹಾರಕ್ಕಾಗಿ ಒತ್ತಾಯಿಸುವುದು ಇಡೀ ದೇಶದ ಹಿತದೃಷ್ಟಿಯಿಂದ ಬಹಳ ಮಹತ್ವದ್ದು ಮತ್ತು ಪ್ರತಿಯೊಬ್ಬರ ಕರ್ತವ್ಯವೂ ಕೂಡ ಆಗಿರುತ್ತದೆ. ಈ ನಿಟ್ಟಿನಲ್ಲಿ ಆರೋಗ್ಯಪೂರ್ಣ ಚರ್ಚೆಗೆ ವೇದಿಕೆಯಾಗಬೇಕಿದ್ದ ವಿದ್ಯಾಕೇಂದ್ರಗಳು ಇಂದು ವಿದ್ಯಾರ್ಥಿಗಳನ್ನು ಕೇವಲ ಪಠ್ಯಪುಸ್ತಕಕ್ಕೆ ಕಟ್ಟಿಹಾಕುವ ಹುನ್ನಾರ ಮಾಡುತ್ತಿರುವುದು ಮಾನವ ಹಕ್ಕುಗಳ ಉಲ್ಲಂಘನೆಯೇ ಆಗುತ್ತದೆ.

ಇದು ಕೇವಲ ಈ ಒಂದು ಐಐಟಿಗೆ ಸೀಮಿತವಾದುದ್ದಲ್ಲ. ದೇಶದ ಇತಿಹಾಸದಲ್ಲಿ ಬಹಳ ಮುಖ್ಯವಾದ, ಜನಪರವಾದ ಚಳವಳಿಯ ಧಾರೆಗಳಲ್ಲಿ ವಿದ್ಯಾರ್ಥಿ ಚಳವಳಿಗಳ ಪಾತ್ರ ದೊಡ್ಡದಿದೆ. 70-80ರ ದಶಕದಲ್ಲಿ ಕಾಲೇಜುಗಳು-ವಿಶ್ವವಿದ್ಯಾಲಯಗಳು ರಾಜಕೀಯ ಚಳವಳಿಗಳ ಕೇಂದ್ರವಾಗಿದ್ದದ್ದು ಇದೆ. ಕರ್ನಾಟಕದ ರೈತ ಮತ್ತು ದಲಿತ ಚಳವಳಿಗಳ ಹುಟ್ಟು ವಿಶ್ವವಿದ್ಯಾಲಯಗಳು ಮತ್ತು ವಿದ್ಯಾರ್ಥಿನಿಲಯಗಳಲ್ಲಿಯೇ ಆಗಿದೆ ಎಂದು ಹೇಳಲಾಗುತ್ತದೆ. ಜನರಿಗೆ ಸ್ವಾಭಿಮಾನ ಮತ್ತು ಹಲವು ಹಕ್ಕುಗಳನ್ನು ಗಳಿಸಿಕೊಡುವಲ್ಲಿ ಈ ಚಳವಳಿಗಳು ಪ್ರಮುಖ ಪಾತ್ರ ವಹಿಸಿವೆ. ಆಗಿನ ಕಾಲೇಜು ವಿದ್ಯಾರ್ಥಿ ಚುನಾವಣೆಗಳು ವಿದ್ಯಾರ್ಥಿಗಳಿಗೆ ನಾಯಕತ್ವ, ರಾಷ್ಟ್ರಾಭಿಮಾನ, ಸಮಾನತೆ, ಸ್ವಾತಂತ್ರ್ಯ ಇತ್ಯಾದಿ ಗುಣಗಳನ್ನು ಕಲಿಸುತ್ತಿದ್ದವು. ಇವುಗಳ ಪ್ರತಿಭಟನೆ, ಧೈರ್ಯ ಪ್ರಶ್ನಾಮನೋಭಾವವನ್ನು ಹತ್ತಿಕ್ಕಲೆಂದೇ ವಿದ್ಯಾರ್ಥಿ ಚುನಾವಣೆಗಳನ್ನು ಸರ್ಕಾರ ನಿಷೇಧಿಸಿದ್ದು ಇತಿಹಾಸ. ಅಷ್ಟೇ ಅಲ್ಲದೇ ವಿದ್ಯಾರ್ಥಿಗಳನ್ನು ಚಳವಳಿಗಳಿಂದ ದೂರ ಇರಿಸಲೆಂದೆ ತಮ್ಮ ಪಠ್ಯಕ್ಕೆ ಸೀಮಿತವಾಗಿಸುವ, ಹೆಚ್ಚು ಪಠ್ಯಚಟುವಟಿಕೆಗಳನ್ನು ನೀಡುವ (ಅಸೈನ್‌ಮೆಂಟ್, ಪ್ರಾಜೆಕ್ಟ್ ವರ್ಕ್, ಕಿರುಪರೀಕ್ಷೆಗಳು, ಸೆಮಿನಾರ್) ವ್ಯವಸ್ಥೆಯನ್ನು ಜಾರಿಗೆ ತಂದಿದ್ದಲ್ಲದೇ, ವಾರ್ಷಿಕ ಪರೀಕ್ಷೆಗಳನ್ನೇ ರದ್ದು ಮಾಡಿ ಕೇವಲ 6 ತಿಂಗಳಿಗೊಮ್ಮೆ ಪರೀಕ್ಷೆ ನಡೆಸುವ ಸೆಮಿಸ್ಟರ್ ಪದ್ಧತಿಯನ್ನು ಜಾರಿಗೆ ತರಲಾಗಿದೆ. ಜೊತೆಗೆ ಶೇ.75ರಷ್ಟು ಹಾಜರಾತಿಯನ್ನು ಕಡ್ಡಾಯಗೊಳಿಸಿದೆ.

ಇವೆಲ್ಲವೂ ವಿದ್ಯಾರ್ಥಿಗಳಲ್ಲಿರುವ ಅಂತಃಶಕ್ತಿಯನ್ನು, ಪ್ರತಿಭಟನೆಯ ಕಿಚ್ಚನ್ನು, ಹೋರಾಟದ ಮನೋಭಾವವನ್ನು ಹತ್ತಿಕ್ಕುವ ಮತ್ತು ವಿದ್ಯಾರ್ಥಿ ಚಳವಳಿಯನ್ನು ದುರ್ಬಲಗೊಳಿಸುವ ಪ್ರಯತ್ನವಲ್ಲದೇ ಬೇರೇನೂ ಅಲ್ಲ. ಅದರ ಮುಂದುವರೆದ ಭಾಗವಾಗಿ ವಿದ್ಯಾರ್ಥಿಗಳು ತಮ್ಮ ಹಿತಾಸಕ್ತಿಗನುಸಾರವಾಗಿ ಸಂಘಟನೆಗಳನ್ನು ಕಟ್ಟುವ, ಚರ್ಚೆ ಹೋರಾಟ ನಡೆಸುವ ಹಕ್ಕನ್ನು ಕಸಿದುಕೊಳ್ಳುವ ಭಾಗವಾಗಿ ನಾವು ಈ ಐಐಟಿಯ ಕ್ರಮವನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಅಂಬೇಡ್ಕರ್ ಪೆರಿಯಾರ್ ಸ್ಟಡಿ ಸರ್ಕಲ್ ಸಂಘಟನೆಯನ್ನು ನಿಷೇಧಿಸಿರುವುದನ್ನು ದೊಡ್ಡ ದನಿಯಲ್ಲಿ ಕಾಂಗ್ರೆಸ್ ಖಂಡಿಸುತ್ತಿರುವುದು ಹಾಸ್ಯಾಸ್ಪದವೆನಿಸುತ್ತದೆ. ಇದೇ ಸರ್ಕಾರ ವಿದ್ಯಾರ್ಥಿ ಚುನಾವಣೆಗಳನ್ನು ನಿಷೇಧಿಸಿತ್ತು, ಅಲ್ಲದೇ ರಾಜ್ಯದ ಕಾಂಗ್ರೆಸ್ ಸರ್ಕಾರದ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ವ್ಯಾಪ್ತಿಯಲ್ಲಿ ಅನುದಾನ ಪಡೆಯುವ ವಿದ್ಯಾರ್ಥಿಗಳು ಸರ್ಕಾರದ ವಿರುದ್ಧ ಪ್ರತಿಭಟನೆಯಲ್ಲಿ ಪಾಲ್ಗೊಂಡರೆ ಅವರ ಅನುದಾನ ನಿಲ್ಲಿಸುವುದು, ವಿದ್ಯಾರ್ಥಿನಿಲಯದಿಂದ ಹೊರಹಾಕಲಾಗುವುದಾಗಿ ತನ್ನ ಆದೇಶದಲ್ಲಿ ತಿಳಿಸಿದೆ. ಹಾಗಾದರೆ ಇವೆಲ್ಲವೂ ಏನನ್ನು ತಿಳಿಸುತ್ತವೆ?

ಕೊನೆಯದಾಗಿ ಕೇಂದ್ರ ಸರ್ಕಾರಕ್ಕೊಂದು ಎಚ್ಚರಿಕೆ. ಇಂದು ಭಾರತದ ವಿವಿಧ ಪಕ್ಷಗಳಲ್ಲಿ ಅತ್ಯಂತ ದೊಡ್ಡ ಹುದ್ದೆಯಲ್ಲಿರುವ ಪ್ರಧಾನಿ ಸೇರಿದಂತೆ ಬಹುತೇಕರು ಇದೇ ವಿದ್ಯಾರ್ಥಿ ಚಳವಳಿಗಳಿಂದ ಬೆಳೆದು ಬಂದವರು ಎಂಬುದನ್ನು ಮರೆಯಬೇಡಿ ಮತ್ತು ಈ ಬಾರಿ ಎನ್‌ಡಿಎ ಸರ್ಕಾರವನ್ನು ಅಧಿಕಾರಕ್ಕೆ ತರುವಲ್ಲಿ ನಿರೀಕ್ಷೆಯುತ, ಸದಾ ಕ್ರಿಯಾಶೀಲರಾಗಿರುವ, ಬದಲಾವಣೆಯ ತುಡಿತವಿರುವ ಮತ್ತು ಬೇಗ ಬದಲಾಗಿಬಿಡುವ ಈ ವಿದ್ಯಾರ್ಥಿಗಳ, ಯುವಸಮುದಾಯದ ಅಧಿಕ ಮತಗಳು ಇವೆ ಎಂಬುದನ್ನು ಜ್ಞಾಪಿಸಿಕೊಳ್ಳಿ. ಈ ಯುವಸಮುದಾಯ ಮುಕ್ತ ಚಿಂತನೆಯ ಸ್ವಾತಂತ್ರ್ಯವನ್ನು ಬಯಸುತ್ತದೆಯೇ ವಿನಃ ನಿಮ್ಮ ಕಟ್ಟಾಜ್ಞೆಗಳನ್ನಲ್ಲ. ನಿಮ್ಮ ನಿರಂಕುಶ ಆಡಳಿತ ಮುಂದುವರೆದಲ್ಲಿ ಈ ವಿದ್ಯಾರ್ಥಿಗಳು ಸ್ಪಷ್ಟವಾಗಿ ನಿಮ್ಮ ವಿರುದ್ಧ ನಿಂತುಕೊಳ್ಳುತ್ತಾರೆ. ನಿರಂಕುಶಮತಿಗಳಾಗಿ ಮೆರೆದ ಹಿಟ್ಲರ್ ಮುಸ್ಸಲೋನಿಯಂತಹವರು ಕೊನೆಗೆ ಏನಾದರು ಎಂಬುದು ನಿಮಗೆ ತಿಳಿದೇ ಇದೆ ಅಲ್ಲವೆ?

ಹಾಗೆಯೇ ಉಗ್ರವಾದ ಬೆಂಬಲಿಸುವ, ದೇಶಕ್ಕೆ ಮಾರಕವೆನಿಸುವ ಸಂಘಟನೆಗಳನ್ನ ಬಿಟ್ಟು ನಿಮಗೆ ಬೆಂಬಲವಾಗಿರುವ ಆರ್‌ಎಸ್‌ಎಸ್, ಎಬಿವಿಪಿ ಸೇರಿದಂತೆ ದೇಶದ ಯಾವುದೇ ಸಂಘಟನೆಯನ್ನು ನಿಷೇಧಿಸುವುದು ಸರಿಯಲ್ಲವಾದುದು ಮತ್ತು ಸಂವಿಧಾನ ವಿರೋಧಿಯಾದದ್ದು. ಆ ಸಂಘಟನೆಗಳ ವಿಚಾರದ ಸರಿತಪ್ಪುಗಳನ್ನು ಜನರ ಮುಂದಿಡುವುದು, ಆ ಮೂಲಕ ಜನರ ವಿಶ್ವಾಸ ಗಳಿಸುವುದು ಪ್ರಜಾಸತ್ತಾತ್ಮಕವಾದದ್ದು. ಇದೇ ಹಿಂದಿನಿಂದಲೂ ನಡೆದುಕೊಂಡು ಬರುತ್ತಿರುವುದು. "ನಿಮ್ಮ ಅಭಿಪ್ರಾಯಗಳನ್ನು ನಾನು ಒಪ್ಪುವುದಿಲ್ಲ, ಆದರೆ ಅಭಿಪ್ರಾಯ ವ್ಯಕ್ತಪಡಿಸುವ ನಿಮ್ಮ ಹಕ್ಕನ್ನು ನಾನು ನನ್ನ ಪ್ರಾಣ ಕೊಟ್ಟಾದರೂ ರಕ್ಷಿಸುತ್ತೇನೆ" ಎಂದು ದಾರ್ಶನಿಕರೊಬ್ಬರು ಹೇಳಿದ್ದಾರೆ. ನೀವು ಹೀಗೆ ಮುಂದುವರೆಯಿರಿ. ಇಲ್ಲವಾದಲ್ಲಿ ಜನತೆ ನಿಮಗೆ ತಕ್ಕ ಪಾಠ ಕಲಿಸದೇ ಬಿಡುವುದಿಲ್ಲ.

- ಮುತ್ತುರಾಜು ಮಂಡ್ಯ

ಮಳವಳ್ಳಿ ಮಾಜಿ ಶಾಸಕ ಅನ್ನದಾನಿಯ 'ದಲಿತ' ಪುಂಡಾಟ



'ಅವನ್ ತಾಯ್‌ನಾ..ಯ ನನ್ನ ವಿರುದ್ಧನೇ ರಾಜಕೀಯ ಮಾಡ್ತಾನೆ ಹೊಲಗೇರಿಲಿ. ಅವನಮ್ಮನ್ ತಗಡಿ ಮಗ, ಅವನ ಹೆಂಡ್ತಿ.....ಯ, ನನ್ನ ಹತ್ರ ದುಡ್ಡಿಸ್ಕೊಂಡ ನನ್ ವಿರುದ್ಧ ರಾಜಕೀಯ ಮಾಡೋ ಅವನ್ನ...ನ್ ಕರಿಯೋಲೇ. ಇವತ್ತು ಅವನ್ ಹೊಡೆಸಾಕ್ತಿನಿ... ಅವನಮ್ಮನ್ ಗಾಂಡುಗಳು... ನಾನ್ ಗಾಂಡು ನೀವು ಗಾಂಡುಗಳು ಹೊಡೀರೋ ಹೋಗಿ ಅದೆಷ್ಟೆ ಖರ್ಚಾದ್ರೂ ನಾನ್ ನೋಡ್ಕೋತೀನಿ... ಈ ಊರ್‍ನ, ಕೇರಿನ ರಣರಂಗ ಮಾಡೇ ಹೋಗೋದು.... ಅವನಮ್ಮನ್.......'

ಸುಚಿತ್ ಸೆನ್ಸಾರ್ ಮಾಡಿದರೂ ತೀರಾ ಹೊಲಸೆನಿಸುವ ಈ ಮಾತುಗಳು ನಮ್ಮ ಓಂ ಪ್ರಕಾಶ್‌ರಾವ್ ಸಿನಿಮಾದ ಡೈಲಾಗ್‌ಗಳಲ್ಲ, ಮಳವಳ್ಳಿಯ ಮಾಜಿ ಶಾಸಕ ಡಾ. ಕೆ.ಅನ್ನದಾನಿ ಉದುರಿಸಿದ ಅಣಿಮುತ್ತುಗಳು! ಮೇ 29ರಂದು ಗ್ರಾ.ಪಂ.ಚುನಾವಣೆ ಮುಗಿದನಂತರ ಹುಸ್ಕೂರಿನ ದಲಿತಕೇರಿಗೆ ಅಕ್ಷರಶಃ ರೌಡಿಯಂತೆ ನುಗ್ಗಿದ ಅನ್ನದಾನಿ ತನ್ನ ವಿರುದ್ಧ ರಾಜಕೀಯ ಮಾಡುತ್ತಾನೆನ್ನುವ ಏಕೈಕ ಕಾರಣಕ್ಕೆ ಅಂದಾನಿ ಎಂಬ ಯುವಕನ ಎದೆಗೆ ಚಾಕುವಿನಲ್ಲಿ ಇರಿಯುವ ಮುನ್ನ ಆರ್ಭಟಿಸಿದಾಗ ಚೆಲ್ಲಾಡಿದ ಸಂಸ್ಕೃತ ಪದಗುಚ್ಛಗಳು ಹೀಗಿದ್ದವು.

ಜೆಡಿಎಸ್ ಕುಮಾಸ್ವಾಮಿಯ ಕೃಪಾಕಟಾಕ್ಷದಿಂದ ಗೆದ್ದು ಶಾಸಕನಾಗಿದ್ದಾಗ ಅಕ್ರಮ ಮರಳುಗಾರಿಕೆ, ಕಳಪೆ ಕಾಮಗಾರಿಗಳು, ದುರುಳ ಹಿಂಬಾಲಕರ ಜೊತೆಗೂಡಿ ನಡೆಸಿದ ದುರಾಡಳಿತಗಳನ್ನು ಎಗ್ಗಿಲ್ಲದಂತೆ ನಡೆಸಿದ್ದ ಈ ಅನ್ನದಾನಿಯನ್ನು ಮಳವಳ್ಳಿ ಜನ ಬ್ಯಾಕ್ ಟು ಬ್ಯಾಕ್ ಎರಡು ಬಾರಿ ಸೋಲಿಸಿ ಮನೆಗಟ್ಟಿದ್ದರು. ಆದರೂ ಆತ ಬುದ್ಧಿ ಕಲಿತಂತಿಲ್ಲ, ಅದಕ್ಕೆ ಈ ಘಟನೆಯೇ ಸಾಕ್ಷಿ.

ಅನ್ನದಾನಿಯ ದಲಿತ ದೌರ್ಜನ್ಯ

ಮಳವಳ್ಳಿ ತಾಲ್ಲೂಕಿನ ಈ ಹುಸ್ಕೂರು ಅನ್ನದಾನಿಯ ಹುಟ್ಟೂರು ಹೌದು. ಸುಮಾರು ಸಾವಿರಕ್ಕೂ ಹೆಚ್ಚು ಕುಟುಂಬಗಳಿರುವ ಇಲ್ಲಿ ದಲಿತರದ್ದೇ 200 ಕುಟುಂಬಗಳಿವೆ. ತಗಡಿ ಸಿದ್ದರಾಜು ಹಾಗೂ ಹೊಂಬಾಳಯ್ಯ ಎಂಬ ಇಬ್ಬರು ದಲಿತ ಸಹೋದರರು ಮೊದಲಿನಿಂದಲೂ ಜೆಡಿಎಸ್ ಕಾರ್ಯಕರ್ತರಾಗೇ ಗುರುತಿಸಿಕೊಂಡಿದ್ದವರು. ಕಳೆದ ಎರಡು ಎಂಎಲ್‌ಎ ಎಲೆಕ್ಷನ್‌ನಲ್ಲೂ ಜೆಡಿಎಸ್ ಹುರಿಯಾಳಾಗಿದ್ದ ಅನ್ನದಾನಿ ಪರವಾಗೇ ಕೆಲಸ ಮಾಡಿದವರು. ಮೊದಲ ಸಲ ಚುನಾವಣೆಗೆ ನಿಂತಾಗ ತಾನು ಗೆದ್ದರೆ ದೇವಸ್ಥಾನ ಕಟ್ಟಿಸಿಕೊಡುವುದಾಗಿ ಅನ್ನದಾನಿ ತಗಡಿ ಸಿದ್ದರಾಜುಗೆ ಮಾತು ಕೊಟ್ಟಿದ್ದರಂತೆ. ಆದರೆ ಗೆದ್ದು ಶಾಸಕನಾದ ಅನ್ನದಾನಿ ಮಾತಿನಂತೆ ನಡೆದುಕೊಂಡಿರಲಿಲ್ಲ, ಇದು ತಗಡಿ ಸಿದ್ದರಾಜುಗೆ ಬೇಸರ ತರಿಸಿತ್ತು,

ಇದೇ ಕಾರಣಕ್ಕೆ, 2013ರ ವಿಧಾನಸಭಾ ಚುನಾವಣೆಯಲ್ಲಿ ಹೊಂಬಾಳಯ್ಯನ ಮಗ ಚಿಕ್ಕಸ್ವಾಮಿ ಕಾಂಗ್ರೆಸ್‌ನ ಪಿ.ಎಂ.ನರೇಂದ್ರಸ್ವಾಮಿ ಪರ ಕೆಲಸ ಮಾಡಿದ್ದ. ಚಿಕ್ಕಸ್ವಾಮಿ, ಆತನ ಚಿಕ್ಕಪ್ಪ ಸಿದ್ದರಾಜು ಮತ್ತು ಅವನ ಮಗ ಅಂದಾನಿ ಎಲ್ಲರೂ ಸೇರಿಕೊಂಡು ನರೇಂದ್ರಸ್ವಾಮಿಯ ಪರ ಪ್ರಚಾರ ನಡೆಸಿದ್ದರು. ಈ ವಿಚಾರ ಅನ್ನದಾನಿ ಮತ್ತು ಅವನ ಅಣ್ಣ ಸಿದ್ದರಾಜುನ ಕೋಪಕ್ಕೆ ಕಾರಣವಾಗಿತ್ತು,

ಮಂಡ್ಯ ಲೋಕಸಭೆ ಉಪಚುನಾವಣೆ ಮತ್ತು ಸಾರ್ವತ್ರಿಕ ಚುನಾವಣೆಗಳಲ್ಲೂ ಈ ಕುಟುಂಬ ಕಾಂಗ್ರೆಸ್ ಪರವೇ ಕೆಲಸ ಮಾಡಿತ್ತು, ಮೊನ್ನೆ ನಡೆದ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಗಳ ಪರ ನಿಲ್ಲುವ ಮೂಲಕ ಅನ್ನದಾನಿಗೆ ಸರಿಯಾದ ಟಾಂಗ್ ನೀಡಿದ್ದರು. ಪದೇಪದೇ ಸೋತು ಹುಚ್ಚನಂತಾಗಿದ್ದ ಅನ್ನದಾನಿ ಪಂಚಾಯ್ತಿ ಚುನಾವಣೆ ಮುಗಿದ ಮಾರನೆಯ ದಿನ ದಲಿತಕೇರಿಗೆ ರೌಡಿಯಂತೆ ನುಗ್ಗಿ ಪುಂಡಾಟ ನಡೆಸಿದ್ದಾನೆ. ಅವನ ಸಿಟ್ಟೆಲ್ಲಾ ಇದ್ದದ್ದು ಸಿದ್ದರಾಜು ಕುಟುಂಬದ ಮೇಲೆ. ಹಾಗಾಗಿ ಅವರ ಮನೆ ಮುಂದೆ ಹೋದವನೆ ಸಿದ್ದರಾಜುನನ್ನು ಹೊರಕರೆದು ಬಾಯಿಗೆಬಂದಂತೆ ಬೈದದ್ದಲ್ಲದೆ ಕೆನ್ನೆಗೂ ಬಾರಿಸಿದ್ದಾನೆ. ಕೂಡಲೇ ಓಡಿಬಂದ ಸಿದ್ದರಾಜುನ ಮಗ ಅಂದಾನಿ, ತನ್ನಪ್ಪನ ರಕ್ಷಣೆಗೆ ಮುಂದಾಗಿದ್ದಾನೆ. ಅನ್ನದಾನಿಯ ದುರಹಂಕಾರ ಅದೆಷ್ಟು ಹದ್ದುಮೀರಿತ್ತೆಂದರೆ ಮೊದಲೇ ಜೇಬಿನಲ್ಲಿಟ್ಟುಕೊಂಡಿದ್ದ ಬಟನ್ ಚಾಕು ತೆಗೆದು 'ಸುಸಂಸ್ಕೃತ ಮಂತ್ರಘೋಷ'ಗಳೊಂದಿಗೆ ಆ ಹುಡುಗ ಅಂದಾನಿಯ ಎದೆಗೆ ಇಳಿಸಿದ್ದ. ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದು ಕಂಡು ಅಕ್ಕಪಕ್ಕದಲ್ಲಿದ್ದ ಜನ ಬಂದು ಆಸರೆಯಾಗದಿದ್ದರೆ ಅವತ್ತು ಅನ್ನದಾನಿ ಆ ಹುಡುಗನ ಪ್ರಾಣವನ್ನೇ ತೆಗೆದುಬಿಡುತ್ತಿದ್ದ ಅನ್ನಿಸುತ್ತೆ.

ಎದೆಯಿಂದ ಹರಿಯುತ್ತಿದ್ದ ರಕ್ತದ ಸಮೇತ ಅಂದಾನಿಯನ್ನು ಹಲಗೂರು ಪೊಲೀಸ್ ಸ್ಟೇಷನ್‌ಗೆ ಅವನ ದೊಡ್ಡಪ್ಪನ ಮಗ ಚಿಕ್ಕಸ್ವಾಮಿ ಕರೆತಂದಿದ್ದ. ತನ್ನ ಮೇಲೆ ಕೇಸು ಜಡಿಯುತ್ತಾರೆಂಬ ವಾಸನೆ ಮೂಗಿಗೆ ಬಡಿಯುತ್ತಿದ್ದಂತೆ, ತನ್ನ ಚೇಲಾಗಳ ಮನೆಯ ಹೆಂಗಸರನ್ನು ಠಾಣೆಗೆ ಕಳುಹಿಸಿ ಸಿದ್ದರಾಜು, ಹೊಂಬಾಳಯ್ಯ, ಚಿಕ್ಕಸ್ವಾಮಿ ಮತ್ತು ಅಂದಾನಿಯ ಮೇಲೆಯೇ ಕೇಸು ಜಡಿಸಲು ಅನ್ನದಾನಿ ಹುನ್ನಾರ ನಡೆಸಿದ್ದ, ಅವತ್ತು ಎಸ್‌ಐ ಗೋವಿಂದರಾಜು ಠಾಣೆಯಲ್ಲಿರದ ಕಾರಣ ಬೆಳಗ್ಗೆ ಬನ್ನಿ ಎಂದೇಳಿದ ಪೊಲೀಸರು ಅಂದಾನಿಗೆ ಚಿಕಿತ್ಸೆ ಕೊಡಿಸುವಂತೆ ಹೇಳಿ ಮಾಜಿ ಶಾಸಕ ಅನ್ನದಾನಿಯ 'ಕೌಂಟರ್ ಕೇಸ್' ಗಿರಾಕಿಗಳನ್ನೂ ಸಾಗ ಹಾಕಿದ್ದರು.

ಅಟ್ಟಾಡಿಸಿ ಹೊಡೆದರು

ಇದಾದ ಮಾರನೆ ದಿನ ಅಂದರೆ, ಮೇ 30ರ ಬೆಳ್ಳಂಬೆಳಗ್ಗೆ 6.30ರ ಹೊತ್ತಿಗೆ ಪ್ರತಾಪ (ಬ್ಯಾಟರಿ), ವಿದ್ಯಾಸಾಗರ್. ಸತೀಶ್, ಕಿರಣ್‌ಕುಮಾರ್ ಎಂಬಿತ್ಯಾದಿ ಪುಟಗೋಸಿ ಪುಂಡರನ್ನು ಕಟ್ಟಿಕೊಂಡ ಅನ್ನದಾನಿಯ ಅಣ್ಣ ಕೆ.ಸಿದ್ದರಾಜು ದಲಿತಕೇರಿಯ ಸಿದ್ದರಾಜು ಮನೆಗೆ ನುಗ್ಗಿ 'ಬೋಳಿಮಕ್ಕಳ, ನಮ್ಮ ವಿರುದ್ಧವೇ ಕಂಪ್ಲೆಂಟ್ ಕೊಡೋ ಹಂಗಾದ್ರಾ ಅಂತ' ತಮ್ಮ ಯೋಗ್ಯತೆಗೆ ತಕ್ಕಂತೆ ಬೈಗುಳ ಉದುರಿಸಿದ್ದಲ್ಲದೇ ಮನೆಯಲ್ಲಿದ್ದ ಸಿದ್ದರಾಜು, ನಾಗೇಂದ್ರ, ಶಿವ ಮತ್ತಿತರ ದಲಿತರನ್ನು ಅಟ್ಟಾಡಿಸಿ ಹೊಡೆದಿದ್ದರು. ಕೈಲಿದ್ದ ಮಚ್ಚು, ದೊಣ್ಣೆಗಳನ್ನು ಮನಬಂದಂತೆ ಬಿಸಾಡಿ ಅಟ್ಟಹಾಸಗೈದಿದ್ದರು. ಮಚ್ಚಿನ ಏಟಿಗೆ ದಲಿತ ಸಿದ್ದರಾಜುವಿನ ತಲೆ ಹೊಡೆದು, ಕೈ ಮುರಿದುಹೋಗಿದೆ. ದೊಣ್ಣೆಯ ಏಟು ಕುತ್ತಿಗೆಯ ಮೇಲೆ ಬಲವಾಗಿ ಬಿದ್ದಿರೋದರಿಂದ ಮಾತನ್ನೂ ಆಡಲಾಗದ ಆತ ಸದ್ಯ ಮಂಡ್ಯ ಜಿಲ್ಲಾಸ್ಪತ್ರೆಯಲ್ಲಿ ನರಳಾಡುತ್ತಿದ್ದಾನೆ.

ಅಸಲಿಗೆ ಅನ್ನದಾನಿಗೆ ಯಥೇಚ್ಛ ರೊಚ್ಚಿರುವುದು ಈ ಕುಟುಂಬದ ಚಿಕ್ಕಸ್ವಾಮಿಯ ಮೇಲೆ. ಹಾಗಾಗಿ ಅದೆಷ್ಟೇ ಖರ್ಚಾಗಲಿ ಆತನಿಗೆ ಒಂದು ಗತಿ ಕಾಣಿಸಿ ಅಂತ ತನ್ನ ಗೂಂಡಾಪಡೆಗೆ ಹುಕುಂ ಹೊರಡಿಸಿದ್ದಾನೆ. ಹುಸ್ಕೂರಿನ ದಲಿತಕೇರಿ ಜೀವ ಕೈಲಿಡಿದು ಕ್ಷಣ ದೂಡುತ್ತಿದೆ. ಮಂಡ್ಯ ಎಸ್ಪಿ ಭೂಷಣ್ ಬೊರಸೆಯವರು ಇತ್ತ ಗಮನಹರಿಸದಿದ್ದರೆ ರಾಜಕೀಯ ವೈಷಮ್ಯಕ್ಕೆ ತಲೆಯೊಂದು ಉರುಳುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಯುವಕ ಅಂದಾನಿಗೆ ಚಾಕು ಹಾಕಿದ ಪ್ರಕರಣದಲ್ಲಿ ಕೆ.ಅನ್ನದಾನಿ, ಆತನ ಅಣ್ಣ ಕೆ.ಸಿದ್ದರಾಜು. ಬೆಂಗಳೂರಿನಲ್ಲಿ ಪೊಲೀಸ್ ಪೇದೆಯಾಗಿರುವ ಶಿವಲಿಂಗಸ್ವಾಮಿ, ಅಂದಾನಯ್ಯ (ಗುಂಡ) ಎಂಬ ನಾಲ್ವರ ಮೇಲೆ ಮತ್ತು ಮನೆಗೆ ನುಗ್ಗಿ ಹಲ್ಲೆ ನಡೆಸಿದ ಪ್ರಕರಣದಲ್ಲಿ ಕೆ.ಅನ್ನದಾನಿಯ ಅಣ್ಣ ಕೆ.ಸಿದ್ದರಾಜು, ಪ್ರತಾಪ, ವಿದ್ಯಾಸಾಗರ್, ಸತೀಶ್, ಕಿರಣ್‌ಕುಮಾರ್ ಎಂಬ ಐವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ತಮ್ಮ ರಕ್ಷಣೆಗೋಸ್ಕರ ಅನ್ನದಾನಿ ತನ್ನ ಚೇಲಾಗಳ ಹೆಂಗಸರಿಂದ ಕೊಡಿಸಿದ್ದ ದೂರು ಸುಳ್ಳು ದೂರೆಂದು ಮೇಲ್ನೋಟಕ್ಕೇ ಕಂಡುಬರುತ್ತಿದ್ದರೂ ಎಸ್‌ಐ ಗೋವಿಂದರಾಜು ಮಾತ್ರ ಅದನ್ನು ಕಸದಬುಟ್ಟಿಗೆ ಎಸೆಯದೆ ಪೆಂಡಿಂಗ್ ಇಟ್ಟುಕೊಂಡಿರುವುದು ಹಲವು ಅನುಮಾನಗಳನ್ನು ಹುಟ್ಟುಹಾಕುತ್ತದೆ. ವಿಪರ್ಯಾಸವೆಂದರೆ, ಈ ಎರಡೂ ಪ್ರಕರಣಗಳಲ್ಲಿ (ಚಾಕು ಹಾಕಿದ್ದು ಮತ್ತು ಮನೆಗೆ ನುಗ್ಗಿ ಹಲ್ಲೆ) ಭಾಗಿಯಾಗಿರುವ ಆರೋಪಿಗಳು ಮದ್ದೂರು ತಾಲ್ಲೂಕಿನ ಚಿಕ್ಕರಸಿನಕೆರೆ ಹಾಗೂ ಮಳವಳ್ಳಿ ತಾಲ್ಲೂಕಿನ ಕೊನ್ನಾಪುರ ಗ್ರಾಮದಲ್ಲಿ ಬಹಿರಂಗವಾಗಿ ಅಡ್ಡಾಡುತ್ತಿದ್ದರೂ ಪೊಲೀಸರು ಅವರನ್ನು ಬಂಧಿಸುವ ಪ್ರಯತ್ನವನ್ನೇ ಮಾಡುತ್ತಿಲ್ಲ.

ಅಹಂಕಾರಿ ಅನ್ನದಾನಿಯ ಅಂಧಾದರ್ಬಾರ್

ಕೆಲವೇ ವರ್ಷಗಳ ಹಿಂದೆ ಬರಿಗೈ ದಾಸನಾಗಿ ಮಳವಳ್ಳಿ ಬೀದಿಗಳಲ್ಲಿ ಅಂಡಲೆಯುತ್ತಿದ್ದ ಅನ್ನದಾನಿ ಇವತ್ತು ಬಾರು, ಪೆಟ್ರೋಲ್‌ಬಂಕ್, ನೈಸ್ ರಸ್ತೆಯ ಪಕ್ಕ ಜಮೀನು, ಮನೆ, ನಿವೇಶನ ಸೇರಿದಂತೆ ಹಲವು ಕೋಟಿಗಳ ಒಡೆಯ ಎನಿಸಿಕೊಂಡಿದ್ದಾನೆ. ಇದಕ್ಕೆಲ್ಲ ಮುಖ್ಯ ಕಾರಣ ಎಚ್.ಡಿ. ಕುಮಾರಸ್ವಾಮಿಯ ಸಖ್ಯ. 2004ರ ವಿಧಾನಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿಗೆ ಮಸ್ಕಾ ಹೊಡೆದು ಜೆಡಿಎಸ್ ಟಿಕೆಟ್ ಗಿಟ್ಟಿಸಿ ಮಳವಳ್ಳಿ ಶಾಸಕನಾಗಿ ಆಯ್ಕೆಯಾದ ಅನ್ನದಾನಿ ಅಧಿಕಾರದಲ್ಲಿದ್ದ ಮೂರೂವರೆ ವರ್ಷದಲ್ಲಿ ಭರ್ಜರಿ ಗಂಟು ಮಾಡಿದ್ದನ್ನು ಬಿಟ್ಟರೆ ಆತ ಮಳವಳ್ಳಿ ಕ್ಷೇತ್ರಕ್ಕಾಗಲಿ ಜನರಿಗಾಗಲಿ ಕಿಸಿದದ್ದು ಏನೂ ಇಲ್ಲ.

ಅನ್ನದಾನಿಯ ಮೇಯ್ದಾಟ ಕಂಡಿದ್ದ ಮಳವಳ್ಳಿಯ ಮತದಾರರು 2008 ಮತ್ತು 2013ರ ಸತತ ಚುನಾವಣೆಗಳಲ್ಲಿ ಸೋಲಿಸಿ ಮನೆಗಟ್ಟಿದ್ದರು. ಸತತ ಸೋಲುಗಳಿಂದ ಕ್ರುದ್ಧನಾಗಿರುವ ಅನ್ನದಾನಿ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಹಾಗೂ ಅವರ ಬೆಂಬಲಿಗರ ವಿರುದ್ಧ ಕೂಗಾಡುತ್ತಾ ಬಾಯಿ ಚಪಲ ತೀರಿಸಿಕೊಳ್ಳುತ್ತಿದ್ದಾನಷ್ಟೆ. ಸದ್ಯಕ್ಕೆ ಅವನಿಗೆ ಉಳಿದಿರುವ ಕಸುಬು ಅದೊಂದೆ!

ಈತನ ಅವಧಿಯಲ್ಲಿ ಅಕ್ರಮ ಮರಳುಗಾರಿಕೆ ದಂಧೆ ಜೋರಾಗಿತ್ತು, ಟಿ.ನರಸೀಪುರ, ಬನ್ನೂರು ಈ ಭಾಗಗಳಿಂದ ದಿನನಿತ್ಯ ಹಗಲಿರುಳೆನ್ನದೆ ಸಾವಿರಾರು ಮರಳು ಲಾರಿಗಳು ಮಳವಳ್ಳಿ ಮುಖಾಂತರ ಬೆಂಗಳೂರಿಗೆ ತಲುಪುತ್ತಿದ್ದವು. ಶಾಸಕನಾಗುತ್ತಿದ್ದಂತೆಯೇ ಪ್ರತಿ ಲಾರಿಗೆ ಇಂತಿಷ್ಟು ಮಾಮೂಲಿ ಫಿಕ್ಸ್ ಮಾಡಿಕೊಂಡಿದ್ದ. ಸುಮಾರು 18 ಗ್ರಾ.ಪಂ.ಗಳ ಮೂಲಕ ಹಾದು ಬೆಂಗಳೂರು ತಲುಪಬೇಕಿತ್ತು, ಅನ್ನದಾನಿ ಬೆಂಬಲಿಗರೇ ಖುದ್ದಾಗಿ 18 ಚೆಕ್‌ಪೋಸ್ಟ್‌ಗಳಲ್ಲಿ ನಿಂತು ಪ್ರತಿ ಲಾರಿಯಿಂದ 7 ಸಾವಿರ ರೂಪಾಯಿ ವಸೂಲಿ ಮಾಡುತ್ತಿದ್ದರು. ವಸೂಲಿಯಾದ ಹಣದಲ್ಲಿ ಅರ್ಧಕ್ಕೂ ಹೆಚ್ಚು ಪಾಲು ಅನ್ನದಾನಿಯ ತಿಜೋರಿ ಸೇರುತ್ತಿತ್ತು, ಉಳಿದ ಹಣ ಗ್ರಾ.ಪಂ.ಗೆ ಒಂದಷ್ಟು ಬಿಸಾಕಿ ಅಧಿಕಾರಿಗಳು ಹಾಗೂ ಜೆಡಿಎಸ್ ಬೆಂಬಲಿಗರು ಹಂಚಿಕೊಳ್ಳುತ್ತಿದ್ದರು. ಅಂದಹಾಗೆ ದಿನವೊಂದಕ್ಕೆ ಏನಿಲ್ಲವೆಂದರು 700 ಲಾರಿಗಳ ಆಮದನಿ ಅನ್ನದಾನಿ ತಿಜೋರಿಗೆ ಬಂದು ಬೀಳುತ್ತಿತ್ತು,

ಇನ್ನು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಮಳವಳ್ಳಿ ಕ್ಷೇತ್ರಕ್ಕೆ 300 ಕೋಟಿ ಅನುದಾನ ತಂದು ಕೆಲಸ ಮಾಡಿಸಿದ್ದೇನೆ ಅಂತ ಬಡಾಯಿ ಕೊಚ್ಚಿಕೊಳ್ಳುತ್ತಾನಾದರೂ ಅಂತಹ ಯಾವ ಕೆಲಸಗಳೂ ಇಲ್ಲಿ ಕಾಣುವುದಿಲ್ಲ, ಶಿಂಷಾ, ಭೀಮೇಶ್ವರಿ ಫಿಶರೀಸ್, ಮುಡುಕುತೊರೆ, ಮಳವಳ್ಳಿಯಲ್ಲಿರುವ ಗೆಸ್ಟ್‌ಹೌಸ್‌ಗಳಲ್ಲಿ ತಡರಾತ್ರಿಯವರೆಗೂ ಗುಂಡು-ತುಂಡಿನ ಪಾರ್ಟಿ ಮಾಡಿದ್ದಷ್ಟೇ ಅವನ ಕರಾಳ ಕಾಮಗಾರಿಗಳು. ಇನ್ನು ಅವನ ಅವಧಿಯಲ್ಲಿ ರೌಡಿಗಳ ಅಟ್ಟಹಾಸ ಮುಗಿಲುಮುಟ್ಟಿತ್ತು, ಅವನ ಬೆಂಬಲಿಗ ಪಡೆಯಲ್ಲಿದ್ದ ರೌಡಿಶೀಟರ್ ಹಲಗೂರು ನವೀನ್, ಚೇತನ್, ಲಿಯಾಕತ್ ಖಾನ್ ಅಲಿಯಾಸ್ ಪಿಳ್ಳು ಮೊದಲಾದವರೆಲ್ಲ ಹಲಗೂರು ಪೊಲೀಸ್ ಠಾಣೆಯ ಕಾಂಪೌಂಡ್ ಮೇಲೆಯೇ ಕುಳಿತು ಮಧ್ಯರಾತ್ರಿ ತನಕವೂ ಗುಂಡು-ತುಂಡಿನಲ್ಲಿ ಮುಳುಗೇಳುತ್ತಿದ್ದರೆ ಪೊಲೀಸರು ಅವರ ಕಾವಲಿಗೆ ನಿಂತಿರುತ್ತಿದ್ದರು. ಇವರ ಆರ್ಭಟಕ್ಕೆ ಕಡಿವಾಣ ಹಾಕಿದ್ದು ಡಿವೈಎಸ್‌ಪಿ ಶಿವಕುಮಾರ್. ಗ್ರಾ. ಪಂ ಸದಸ್ಯನಾಗಿದ್ದ ನವೀನ, ಸಾರ್ವಜನಿಕ ಸಭೆಯಲ್ಲೇ ಮಹಿಳಾ ಅಧ್ಯಕ್ಷೆ ಮೇಲೆ ಹೊಡೆಯಲು ಏರಿಹೋಗಿದ್ದ ಪ್ರಕರಣವನ್ನು ಕೈಯಲ್ಲಿಟ್ಟುಕೊಂಡ ಡಿವೈಎಸ್‌ಪಿ ಶಿವಕುಮಾರ್ ತಕ್ಕ ಪಾಠ ಕಲಿಸಿದ್ದರು.

ಅಸಲಿಗೆ, ಮಳವಳ್ಳಿ ಜೆಡಿಎಸ್ ಪಾಳೆಯದಲ್ಲೇ ಅನ್ನದಾನಿಗೆ ತನ್ನದೇ ಆದ ವರ್ಚಸ್ಸಿಲ್ಲ, ದೇವೇಗೌಡ ಹಾಗೂ ಕುಮಾರಸ್ವಾಮಿ ಮುಖ ನೋಡಿಕೊಂಡು ಒಕ್ಕಲಿಗ ಸಮುದಾಯ ಇವನನ್ನು ಸಹಿಸಿಕೊಂಡು ಬಂದಿತ್ತು, ಇದೀಗ ದುರಹಂಕಾರ ತಾಳದೆ ಒಕ್ಕಲಿಗ ಮುಖಂಡರಾದ ಎಂ.ಸಿ.ವೀರೇಗೌಡ, ಜಿ.ಪಂ ಸದಸ್ಯ ಸತೀಶ, ತಳಗವಾದಿ ಹನುಮಂತು ಸೇರಿದಂತೆ ಹಲವರು ದೂರ ಹೋಗಿದ್ದಾರೆ. ಇನ್ನು ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದ ಕುರುಬ ಮುಖಂಡ ಚೆನ್ನಪಿಳ್ಳೆ ಕೊಪ್ಪಲು ಸಿದ್ದೇಗೌಡ ಮೊದಲಾದವರು ಒಳಗಿಂದೊಳಗೇ ಶಾಸಕ ನರೇಂದ್ರಸ್ವಾಮಿಯ ಹೆಜ್ಜೆ ಅನುಸರಿಸುತ್ತಿದ್ದಾರೆ. ಟಿಎಪಿಸಿಎಂಎಸ್ ಮಾಜಿ ಸದಸ್ಯ ಮಲ್ಲಯ್ಯ ಜೆಡಿಎಸ್ ತ್ಯಜಿಸಿ ಕಾಂಗ್ರೆಸ್ ಸೇರಿದ್ದರೆ, ಪುರಸಭೆಯ ಜೆಡಿಎಸ್ ಸದಸ್ಯರು ಕೂಡ ಶಾಸಕ ನರೇಂದ್ರಸ್ವಾಮಿ ಅಕ್ಕಪಕ್ಕದಲ್ಲಿ ಸುಳಿದಾಡುತ್ತಿದ್ದಾರೆ. ಕಳೆದ ಹತ್ತು ವರ್ಷಗಳಿಂದ ಟಿಎಪಿಸಿಎಂಎಸ್‌ನಲ್ಲಿ ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡರ ದರ್ಬಾರು ನಡೆಯುತ್ತಿತ್ತು, ಆದರೆ ಅನ್ನದಾನಿಯ ಅವಾಂತರದಿಂದ ಅದೂ ಈಗ ಕೈತಪ್ಪಿಹೋಗಿದೆ. ಪುರಸಭೆ, ತಾಲ್ಲೂಕು ಪಂಚಾಯತ್‌ಗಳಲ್ಲೂ ನರೇಂದ್ರಸ್ವಾಮಿಯದ್ದೇ ಕಾರುಬಾರು ಜೋರಾಗುತ್ತಿದೆ. ಒಟ್ಟನಲ್ಲಿ ಜೆಡಿಎಸ್‌ನ ಬೇರುಗಳು ಮಳವಳ್ಳಿಯಲ್ಲಿ ಒಂದೊಂದಾಗಿ ಸಡಿಲವಾಗುತ್ತಿರುವುದಕ್ಕೆ ಅನ್ನದಾನಿಯ ಅವಾಂತರಗಳೇ ಕಾರಣ. ಇದು ದೊಡ್ಡಗೌಡರ



ಹಲ್ಲೆಗೊಳಗಾದ ಸಿದ್ದರಾಜು

ಅಂಗಳದವರೆಗೆ ತಲುಪಿ ಮುಂದಿನ ಬಾರಿ ಅನ್ನದಾನಿಗೆ ಗೇಟ್‌ಪಾಸ್ ಕೊಟ್ಟು ಹೊಸ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಲೆಕ್ಕಾಚಾರ ನಡೆಯುತ್ತಿದೆ ಎಂಬ ವರ್ತಮಾನಗಳೂ ಕೇಳಿಬರುತ್ತಿವೆ. ದಲಿತರ ಮೇಲೆ ನಡೆಸಿರುವ ಅನ್ನದಾನಿಯ ಈ ದೌರ್ಜನ್ಯ ಅದಕ್ಕೊಂದು ನೆಪವಾಗುವ ಎಲ್ಲಾ ಲಕ್ಷಣಗಳೂ ಜೋರಾಗಿವೆ.


ಅಂದಹಾಗೆ, ಈ ಸಲ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ ಮಳವಳ್ಳಿ ಕ್ಷೇತ್ರದ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳಿಗೆ ದುಡ್ಡು ಹರಿಸಿದವನು ಬೆಂಗಳೂರಿನ ಮಾಜಿ ಸೆನೆಟ್ ಮೆಂಬರ್ ಅಪ್ಪಾಜಿಗೌಡ. ವಿಧಾನಪರಿಷತ್ ಸದಸ್ಯ ಬಿ.ರಾಮಕೃಷ್ಣರಿಗೆ ಮುಂದಿನ ಎಂಎಲ್‌ಸಿ ಚುನಾವಣೆಯಲ್ಲಿ ಮತ್ತೆ ಟಿಕೆಟ್ ಕೊಡದಿರಲು ತೀರ್ಮಾನಿಸಿರುವ ಜೆಡಿಎಸ್ ವರಿಷ್ಠರಾದ ದೇವೇಗೌಡ ಹಾಗೂ ಹೆಚ್.ಡಿ.ಕುಮಾರಸ್ವಾಮಿ ಸೆನೆಟ್ ಮೆಂಬರ್ ಅಪ್ಪಾಜಿಗೌಡರನ್ನು ಕಣಕ್ಕಿಳಿಸಲು ತೀರ್ಮಾನಿಸಿದ್ದಾರೆ. ಅದರಂತೆ ಜಿಲ್ಲೆಯಲ್ಲಿ ಜೆಡಿಎಸ್ ಶಾಸಕರಿರುವ ಕ್ಷೇತ್ರಗಳನ್ನು ಬಿಟ್ಟು ಮಂಡ್ಯ ಹಾಗೂ ಮಳವಳ್ಳಿ ತಾಲ್ಲೂಕಿನಲ್ಲಿ ಈ ಬಾರಿಯ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಗಳಿಗೆ ಅಪ್ಪಾಜಿಗೌಡನಿಂದ 50 ಲಕ್ಷ ರೂ.ವನ್ನು ಬಂಡವಾಳ ಹಾಕಿಸಿದ್ದಾರೆ. ಆ ದುಡ್ಡಿನಲ್ಲಿ ಸಾಕಷ್ಟು ಗೆಬರಿಕೊಂಡು ಜೇಬಿಗಿಳಿಸಿಕೊಂಡಿರುವ ಅನ್ನದಾನಿ ಅಭ್ಯರ್ಥಿಗಳಿಗೆ ನಯಾಪೈಸೆ ಬಿಚ್ಚಿಲ್ಲ.

ಇಂಥ ಗುಳ್ಳೆನರಿಯಂತ ಅನ್ನದಾನಿಯನ್ನು ಪೊಲೀಸರು ಹುಸ್ಕೂರು ದಲಿತ ದೌರ್ಜನ್ಯ ಪ್ರಕರಣದ ಮೂಲಕವಾದರೂ ಹದ್ದುಬಸ್ತಿನಲ್ಲಿಡದೇ ಹೋದರೆ ಮುಂದಾಗುವ ಅನಾಹುತಕ್ಕೆಲ್ಲ ಅವರೇ ಕಾರಣವಾಗಬೇಕಾಗುತ್ತದೆ. ಏಕೆಂದರೆ ಈಗಾಗಲೇ ಅನ್ನದಾನಿಯ ರಾಜಕೀಯ ಭವಿಷ್ಯ ಕೊನೆಗಾಣುತ್ತಾ ಬರುತ್ತಿದ್ದು, ಅದರ ಹತಾಶೆಗೆ ಆತ ಎಂತಹ ಹುಚ್ಚಾಟ ಬೇಕಾದರು ಆಡಬಹುದೆನ್ನುವುದಕ್ಕೆ ಇದೊಂದು ನಿದರ್ಶನ ಅಷ್ಟೆ. ಇದಕ್ಕಿಂತಲೂ ಅಪಾಯಕಾರಿ ಅವಾಂತರಗಳು ಅನ್ನದಾನಿಯಿಂದ ಘಟಿಸುವ ಮುನ್ನ ಅವನ ಆಟಾಟೋಪಕ್ಕೆ ಪೊಲೀಸರು ಬ್ರೇಕ್ ಬಿಗಿಯಲೇಬೇಕಾಗಿದೆ.

■ ವರದಿಗಾರ

ಗಾಂಧೀವಾದಿಗಳಿಗೆ ಅಂಬೇಡ್ಕರ್‌ವಾದಿಯೊಬ್ಬನ ಪತ್ರ

ಕೇದ ಹುತಾತ್ಮ ದಿನಾಚರಣೆಯ ಅಂಗವಾಗಿ ಬಂದ ಲೇಖನಗಳೆಲ್ಲವೂ ಗಾಂಧೀಜಿ ಮತ್ತು ಅಂಬೇಡ್ಕರರ ವಿಚಾರಗಳಲ್ಲಿನ ಸಾಮ್ಯತೆಗಳನ್ನು, ಪೂನಾ ಒಪ್ಪಂದದ ಭಿನ್ನಾಭಿಪ್ರಾಯವನ್ನೂ ಅದರಲ್ಲಿನ ಗಾಂಧೀಜಿಯವರ ತಪ್ಪನ್ನೂ ಕೊನೆಯ ದಿನಮಾನಗಳಲ್ಲಿ ಅವರು ಬದಲಾದ ಪರಿಯನ್ನೂ ವಿವರಿಸುತ್ತಾ, ಇಂದಿನ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಒಂದಾಗಬೇಕೆಂದು ಕರೆ ಕೊಡುತ್ತಿದ್ದವು. ಜೊತೆಗೆ ಅಂಬೇಡ್ಕರರನ್ನು ಓದಿಕೊಂಡಿರುವ ದಲಿತ ಯುವಕರಲ್ಲಿ ಗಾಂಧೀಜಿಯ ಬಗ್ಗೆ ಇರುವ ಧೋರಣೆಯನ್ನು ಬದಲಾಯಿಸಿಕೊಳ್ಳಲು ಒತ್ತಾಯಿಸಿದ್ದರು. ಇದು ಇಂದಿನ ತುರ್ತು ಎಂಬುದು ಎಷ್ಟು ನಿಜವೋ, ಅಷ್ಟೇ ನಿಜ ನಾವೂ ಬದಲಾಗಬೇಕಿರುವುದು.



ಗಾಂಧೀಜಿಯನ್ನು ಕೊಂದ ಗೋಡ್ಸೆಗೆ ದೇವಸ್ಥಾನ ಕಟ್ಟಲು ಹೊರಟಿರುವುದನ್ನು ಪೈಶಾಚಿಕ ಮನಸ್ಸು ಮಾತ್ರ ಬಯಸಿಕೊಳ್ಳುತ್ತದೆ. ಅದೇ ರೀತಿಯಲ್ಲಿ ಹದಿನೆಂಟು ನಿಮಿಷಗಳಿಗೊಂದರಂತೆ ದಲಿತರ ಮೇಲೆ ದೌರ್ಜನ್ಯ ನಡೆಸುವ ಮನಸ್ಸುಗಳೂ ಪಿಶಾಚಿಯದ್ದೆ! 'ನಾನು ಮೇಲ್ಜಾತಿ' ಎಂಬ ದುರಭಿಮಾನವೇ ಕೋಮುವಾದದ ತಿರುಳಾಗಿದೆ. ಆದ್ದರಿಂದ ಕೋಮುವಾದವನ್ನು ವಿರೋಧಿಸುವವರು ಜಾತಿ ದುರಭಿಮಾನವನ್ನು ವಿರೋಧಿಸುವುದೂ ಅತ್ಯಗತ್ಯ.

ದಲಿತ ಯುವಕರು ಗಾಂಧೀಜಿಯವರನ್ನು ಕೋಮುವಾದದ ವಿಚಾರದಲ್ಲಿ ನೋಡುವ ದೃಷ್ಟಿಗೂ, ಪೂನಾ ಒಪ್ಪಂದದ ವಿಚಾರದಲ್ಲಿ ನೋಡುವ ದೃಷ್ಟಿಗೂ ಜಗಜ್ಜಾಂತರ ವ್ಯತ್ಯಾಸವಿದೆ. ಕೋಮುವಾದವನ್ನು ಹೇಗೆ ಎಂದಿಗೂ ಸಹಿಸುವುದಿಲ್ಲವೋ, ಹಾಗೆಯೇ ಪೂನಾ ಒಪ್ಪಂದದಲ್ಲಾದ ಮೋಸವನ್ನೂ ನಾವು ಮರೆಯಲಾರೆವು. ಇಲ್ಲಿಯವರೆವಿಗೂ ಗಾಂಧಿವಾದಿಗಳಾದರೂ ಅದನ್ನು ಮರೆಸುವಂತಹ ಕೆಲಸವನ್ನೇನೂ ಮಾಡಿಲ್ಲ, ಬದಲಾಗಿ ಅಂಬೇಡ್ಕರರು ಬೌದ್ಧ ಧರ್ಮ ಅಪ್ಪಿಕೊಂಡದ್ದನ್ನು 'ಕಡೆಯ ಕಾಲದಲ್ಲಿ ಮುಸ್ಲಾದವರಂತೆ ಮತಾಂತರವಾದರು' ಎಂದು ವ್ಯಂಗ್ಯವಾಡಿದ್ದಿದೆ. ವಿದೇಶಿ ವಿದ್ಯಾಭ್ಯಾಸಕ್ಕೆ ತೆರಳಿದರೆ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕುತ್ತೇವೆ, ದಂಡ ವಿಧಿಸುತ್ತೇವೆ ಎಂದು 'ಶೇಟ್' ಮತ್ತು ಜಾತಿ ಮುಖಂಡರುಗಳು ಹೇಳಿದಾಗ ಹೆದರದೇ ಜುಟ್ಟು ಕತ್ತರಿಸಿ ವಿದೇಶಕ್ಕೆ ತೆರಳುವ ಗಾಂಧೀಜಿಯವರದನ್ನು ಕ್ರಾಂತಿ ಎನ್ನುವ ಇವರು, ಸಾವಿರಾರು ವರ್ಷಗಳಿಂದ ನಾಯಿಗಳಿಗಿಂತ ಕೀಳಾಗಿ ನಡೆಸಿಕೊಂಡು ಬಂದ ಧರ್ಮವನ್ನು ಸಮುದಾಯದ ಹಿತಾಸಕ್ತಿಗೆ ತೊರೆದರೆ ಅದು ಅಪಹಾಸ್ಯದವಾಗುತ್ತದೆ!

ಗಾಂಧೀಜಿಯವರು ದಲಿತರ ಬಗ್ಗೆ ತೋರಿದ ಕಾಳಜಿ ಪ್ರಾಮಾಣಿಕವಾದುದೇ ಅಥವಾ ರಾಜಕೀಯ ಪ್ರೇರಿತವೇ ಎಂಬುದನ್ನು ತಿಳಿಯಲು ಅಂಬೇಡ್ಕರರು ಅವರ ಬಗ್ಗೆ ಮಾಡಿರುವ ಟೀಕೆಗಳನ್ನು ನೋಡಿಯೇ ಮುನ್ನಡೆಯ ಬೇಕಾಗುತ್ತದೆ. ಇಲ್ಲದಿದ್ದರೆ ಗಾಂಧೀಜಿಯೇ ಅಪೂರ್ಣರಾಗಿ ಬಿಡುತ್ತಾರೆ. ಅದಕ್ಕೂ ಮೀರಿ ಗಾಂಧೀಜಿಯವರನ್ನು ನೋಡುವುದಾದರೆ, ಎಲ್ಲರೂ ಹೇಳುವಂತೆ ಆಫ್ರಿಕಾದಲ್ಲಿನ ರೈಲು ಪ್ರಯಾಣದ ಘಟನೆಯನ್ನು ಹೇಳಬಹುದು. ಆದರೆ ಅದಕ್ಕೂ ಮೀರಿದ ವಿಚಾರಗಳು ಅಲ್ಲಿ ಗಾಂಧೀಜಿಗೆ ನಡೆದಿವೆ. ರೈಲಿನಿಂದ ಕೆಳ ದಬ್ಬಿದ ನಂತರ ಟಪ್ಪಾಗಾಡಿಯೊಂದನ್ನು ಹಿಡಿಯುವ ಗಾಂಧೀಜಿಗೆ ಅಲ್ಲೂ ತಾರತಮ್ಯವಾಗಿ ಕಂಡಕ್ಟರ್ ಅವರ ಕಿವಿಹಿಡಿದು, ಕೈತಿರುವಿ, ಕೆಳ ಚೀಲದ ಮೇಲೆ ಬಲವಂತವಾಗಿ ಕೂರಿಸಲು ಹೋದಾಗ ಗಾಂಧೀಜಿ ಅದಕ್ಕೆ ಒಪ್ಪದೆ ನಿಂತರು. ಪ್ರತಿಭಟಿಸಿದರು. ಜೊತೆಗೆ ಅಲ್ಲಿನ ಬಿಳಿಯರು ಗಾಂಧೀಜಿಯ ಮೇಲೆ ಕನಿಕರ ತೋರಿಸಿ ಕಂಡಕ್ಟರನನ್ನು ಸುಮ್ಮನಿರಿಸಿದ್ದರು. ಮತ್ತೊಮ್ಮೆ ಮೊದಲನೇ ದರ್ಜೆಯ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ಗಾಂಧೀಜಿಯವರನ್ನು ಅಧಿಕಾರಿ ಹೊರಹೋಗಲು ತಿಳಿಸಿದಾಗ ಅಲ್ಲಿದ್ದ ಬಿಳಿಜನಾಂಗದ ಸಹ ಪ್ರಯಾಣಿಕ 'ತನಗೇನು ತೊಂದರೆ ಇಲ್ಲವೆಂದು' ಗಾಂಧೀಜಿಯನ್ನು ಅಲ್ಲೇ ಉಳಿಸಿಕೊಂಡಿದ್ದ. ಇವುಗಳಿಂದ ನಮಗೆ ತಿಳಿಯುವುದೇನು? ಬಿಳಿಯರಿಗೇ ಬುದ್ಧಿ ಹೇಳುವ ಬಿಳಿಯರಿದ್ದರು.

ಭಾರತೀಯರ ಮತದಾನ ಹಕ್ಕಿಗಾಗಿ ನಡೆದ ಹೋರಾಟಕ್ಕೆ ಅಲ್ಲಿನ ವೃತ್ತ ಪತ್ರಿಕೆಗಳು ಬೆಂಬಲ ಸೂಚಿಸಿ ಬೆನ್ನೆಲುಬಾಗಿ ನಿಂತಿದ್ದವು. ಹಲವಾರು ಕ್ರಿಶ್ಚಿಯನ್ ಮಿಶನರಿಗಳು ದೇಣಿಗೆ ನೀಡಿ ಸಲುಹಿದ್ದವು. ಸ್ಥಳೀಯ ಬಿಳಿಯ ಮುಖಂಡರುಗಳ ಸಹಕಾರವಿತ್ತು. ಆದರೆ ಇತ್ತೀಚೆಗೆ ಭಾರತದಲ್ಲಿ ನಡೆದ ದಲಿತರ ಕೊಲೆಗಳಿಗೆ ನ್ಯಾಯವೇ ಸಿಕ್ಕಿಲ್ಲ. ಕರ್ನಾಟಕದಲ್ಲಿಯೇ ಕಂಬಾಲಪಲ್ಲಿ, ನಾಗಲಾಪಲ್ಲಿಗಳು ನರಳುತ್ತಿವೆ. ನೂರಾರು ಸಾಮಾಜಿಕ ಬಹಿಷ್ಕಾರ ಪ್ರಕರಣಗಳು ಉಸಿರಾಡುತ್ತಲೇ ಇವೆ. ಇದನ್ನು ಗಾಂಧಿವಾದಿಗಳು ಎಷ್ಟು ಬಾರಿ ಪ್ರಶ್ನಿಸಿದ್ದಾರೆ? ಇದರ ವಿರುದ್ಧ ಅದೆಷ್ಟು ಬಾರಿ ಉಪವಾಸಕ್ಕೆ ಕುಳಿತಿದ್ದಾರೆ?

ಪ್ರಿಟೋರಿಯಾದಲ್ಲಿ ಕ್ಷೌರಿಕನೊಬ್ಬ ಕ್ಷೌರ ಮಾಡದಿದ್ದಾಗ ಖುದ್ದಾಗಿ ಕನ್ನಡಿಯ ಮುಂದೆ ನಿಂತು ಕೂದಲು ಕತ್ತರಿಸಿಕೊಂಡಿದ್ದ ಗಾಂಧೀಜಿ "ಈ ರೀತಿಯ ಅವಮಾನ ಭಾರತದಲ್ಲಿನ ಅಸ್ಪೃಶ್ಯತೆ ಆಚರಣೆಯ ಉಡುಗೊರೆ" ಎಂದುಕೊಂಡಿದ್ದರು. ಆದರೆ ಇಂದಿಗೂ ದಲಿತ ಕೇರಿಯ ಮಕ್ಕಳ ತಲೆಯನ್ನು ಮುಟ್ಟಲೂ ಅಸಹ್ಯ ಪಡುವವರಿಗೆ ಈ ಮಾತುಗಳನ್ನಾದರೂ ಗಾಂಧಿವಾದಿಗಳು ಹೇಳಿದ್ದಾರೆಯೇ? ಗಾಂಧೀಜಿಯವರಿಂದಾಗಿ ಅಂದಿನ ಕಾಂಗ್ರೆಸ್ ಸಾವಿರಾರು ಶಾಲೆಗಳನ್ನು ಹರಿಜನರಿಗಾಗಿ ತೆರೆಯಿತು ಎಂದು ಮೆಲುಕು ಹಾಕುವವರು, ಕುಪ್ಪೇಗಾಲದಲ್ಲಿ ಮುಂದಿನ ಪ್ರಜೆಗಳನ್ನು ನಿರ್ಮಾಣ ಮಾಡುವ ಶಾಲೆಯಲ್ಲಿಯೇ ಅಸ್ಪೃಶ್ಯತೆ ಆಚರಣೆ ಮಾಡಿದಾಗ ಗಾಂಧಿವಾದಿಗಳೆಲ್ಲರೂ ಒಕ್ಕೊರಲಿನಿಂದ ಖಂಡಿಸಬಹುದಿತ್ತಲ್ಲವೆ? ಚಾಮರಾಜನಗರ ಜಿಲ್ಲೆಯಲ್ಲಿ ದಲಿತರ ರುಂಡ ಕತ್ತರಿಸಿ ಕೊಲೆ ಮಾಡಿದವರಿಗೆ ಶಿಕ್ಷೆ ವಿಧಿಸಲು ಉಪವಾಸ ಸತ್ಯಾಗ್ರಹಕ್ಕೆ ಕೂರಬಹುದಿತ್ತಲ್ಲವೆ?

ಪೂನಾ ಒಪ್ಪಂದದಲ್ಲಿ ದಲಿತರಿಗೆ ಅನ್ಯಾಯವಾಗಿದೆ ಎಂದು ಒಪ್ಪಿಕೊಳ್ಳುವವರು, ಅದನ್ನೇ ಸಾಧಿಸುತ್ತಾ ಕುಳಿತುಕೊಳ್ಳಬೇಡಿ ಎನ್ನುತ್ತೀರಿ. ಆದರೆ ಪೂನಾ ಒಪ್ಪಂದದಿಂದಾದ ಹಾನಿಯನ್ನು ವಿವರಿಸಲು ಪ್ರಯತ್ನಿಸಬಹುದಿತ್ತಲ್ಲವೆ? ಆ ಹಾನಿಯನ್ನು ಸರಿಪಡಿಸಲು ಪರ್ಯಾಯವಾದ ಮಾರ್ಗಗಳನ್ನು ಪರಸ್ಪರ ಚರ್ಚೆಗಳಿಂದ ಕಂಡುಕೊಳ್ಳಲು ಪ್ರಯತ್ನಿಸಬಹುದಲ್ಲವೆ? ಸದಾಶಿವ ಆಯೋಗದ ವರದಿಯನ್ನು ಮೂಲೆಗುಂಪು ಮಾಡಲಾಗಿದೆ. ನೀವು (ನಾವೂ ಸಹ) ಬೆಂಬಲಿಸಿದ ಸರ್ಕಾರವೇ ಬಂದಿದೆ. ಜಾರಿಯಾಗಲು ನಮ್ಮೊಂದಿಗೆ ಒತ್ತಾಯಿಸಬಹುದಲ್ಲವೆ? ಸದಾಶಿವ ಆಯೋಗದ ಶಿಫಾರಸ್ಸಿಗೂ, ಪೂನಾ ಒಪ್ಪಂದದಲ್ಲಿನ ಮೋಸಕ್ಕೂ ನೇರಾನೇರ ಸಂಬಂಧವಿದೆ. ಪ್ರತ್ಯೇಕ ಮತಕ್ಷೇತ್ರದಿಂದ ದಲಿತರಿಗೆ ಸವರ್ಣೀಯನನ್ನು ಆರಿಸುವ ಅವಕಾಶದ ಜೊತೆಗೆ, 'ಸವರ್ಣೀಯರ ಗುಲಾಮನಲ್ಲದ' ದಲಿತನನ್ನು ಆಯ್ಕೆ ಮಾಡುವ ಅವಕಾಶ ಸಿಗುತ್ತಿತ್ತು. ಗಾಂಧೀಜಿಯವರು ಒಂದು ಕಪಾಳಕ್ಕೆ ಹೊಡೆದಿದ್ದರೆ ಮತ್ತೊಂದು ತೋರಿಸುತ್ತಿದ್ದೆವು. ಹೊಟ್ಟೆಗೆ ಹೊಡೆದದ್ದನ್ನು ಹೇಗೆ ಸಹಿಸುವುದು? ಇಡೀ ಪೀಳಿಗೆಯೇ ತತ್ತರಿಸಿಹೋಗಿದೆ.

ಕಾರ್ಮಿಕ ವರ್ಗದ ವಿಮೋಚನೆ ಆಗದೆ ಇಡೀ ಮಾನವ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಮಾರ್ಕ್ಸ್ ಭಾವಿಸಿದ ಹಾಗೆ, ದಲಿತರ ವಿಮೋಚನೆ ಆಗದೆ ಇಡೀ ಭಾರತೀಯ ಸಮಾಜದ ವಿಮೋಚನೆ ಸಾಧ್ಯವಿಲ್ಲ ಎಂದು ಅಂಬೇಡ್ಕರ್ ಭಾವಿಸಿದ್ದರು. ಗಾಂಧೀಜಿಯವರಾದರೂ "ಹಿಂದೂಗಳು ಸ್ವಹಿತಾಸಕ್ತಿಯಿಂದಲೇ ಅಸ್ಪೃಶ್ಯ ವಿಮುಕ್ತಿಯ ಕಾರ್ಯದಲ್ಲಿ ತೊಡಗಬೇಕು. ಉಪಕಾರ ಮಾಡುತ್ತಿದ್ದೇವೆ ಎನ್ನುವ ಅಹಂಭಾವದಿಂದಲ್ಲ" ಎಂದೇನೋ ಹೇಳುತ್ತಿದ್ದರು. ಆದರೆ ಅಸ್ಪೃಶ್ಯರ ಬಳಿ ಬಂದು "ಹಿಂದೂಗಳು ಸ್ವಭಾವತಃ ಪಾಪಿಷ್ಟರಲ್ಲ, ಆದರೆ ಅವರು ಅಜ್ಞಾನದಲ್ಲಿ ಮುಳುಗಿಹೋಗಿದ್ದಾರೆ" ಎಂದು ಸಮಾಧಾನಪಡಿಸುತ್ತಿದ್ದರು. ಇದು ಅಂಬೇಡ್ಕರ್‌ರವರಿಗೆ ಸ್ವಲ್ಪವೂ ಹಿಡಿಸದೆ "ಅಸ್ಪೃಶ್ಯತೆ ಸವರ್ಣೀಯರ ಸಮಸ್ಯೆ, ಅದನ್ನು ಅವರೇ ಪರಿಹರಿಸಿಕೊಳ್ಳಬೇಕು" ಎಂದು ಬಿಡುತ್ತಿದ್ದರು. ಆದ್ದರಿಂದ ಮಾರ್ಕ್ಸ್ ಹತ್ತಿರವಾದಷ್ಟು ಗಾಂಧೀಜಿ ದಲಿತರಿಗೆ ಹತ್ತಿರವಾಗುವುದಿಲ್ಲ. ವಿಪರ್ಯಾಸವೆಂದರೆ ಮಾರ್ಕ್ಸ್‌ವಾದಿಗಳಿಗೂ ಇದು ಅರ್ಥವಾಗುತ್ತಿಲ್ಲ.

ಇಷ್ಟಕ್ಕೂ ಮೀರಿ ನಮ್ಮ ಮುಂದೆ ಕೋಮುವಾದಿ ಶಕ್ತಿಗಳು ಬೆಳೆಯುತ್ತಿದ್ದು ನಮ್ಮ ಕಿತ್ತಾಟಗಳು ಅವಕ್ಕೆ ಬಹಳ ಉಪಯುಕ್ತವಾಗುತ್ತಲೇ ಬಂದಿದೆ. ಆದ ಕಾರಣ ಗಾಂಧಿವಾದಿಗಳು ದಲಿತಪರ ಕಾಳಜಿಯನ್ನು ವಿಚಾರಕ್ಕಷ್ಟೆ ಸೀಮಿತವಾಗಿಸದೇ ಆಚರಣೆಗೆ ತರಬೇಕಿದೆ. ಅಂಬೇಡ್ಕರರೊಂದಿಗೆ ಸಂಘರ್ಷಿಸಿ ತಿಳಿದ ಸತ್ಯದಂತೆ "ಜಾತಿ ಪದ್ಧತಿಯನ್ನು ಸಾರ್ವಜನಿಕರು ಎಷ್ಟು ಬೇಗ ಬಿಡುತ್ತಾರೋ ಅಷ್ಟೂ ಉತ್ತಮ", "ಅಸ್ಪೃಶ್ಯತೆ ನಿವಾರಣೆಯಾಗದಿದ್ದಲ್ಲಿ ಹಿಂದೂ ಧರ್ಮ ನಾಶವಾಗಿ ಹೋಗಲಿ ಎನ್ನುವುದು ನನ್ನ ನಿತ್ಯದ ಪ್ರಾರ್ಥನೆ. ನೀವೆಲ್ಲರೂ ನಿತ್ಯ ಇದೇ ರೀತಿ ಪ್ರಾರ್ಥಿಸಬೇಕು" ಎಂದಿದ್ದ ಗಾಂಧೀಜಿ ಮಾತುಗಳನ್ನು ಸಾರಿ ಸಾರಿ ಜಾತಿವಾದಿ ಮನಸುಗಳಿಗೆ ಹೇಳಬೇಕಾಗಿದೆ. ಪೂನಾ ಒಪ್ಪಂದದ ಕಹಿಯನ್ನು ಮರೆಸುವ ಕಾಯಕ ಮಾಡಬೇಕಿದೆ. ದಲಿತರಿಗೆ ಬೇಡವಾದ "ಹರಿಜನ" ಪದ ಬಳಕೆ ಬಿಡಬೇಕಿದೆ. ದಲಿತರ ಮತಾಂತರವನ್ನು ಗೌರವಿಸಬೇಕಿದೆ. ಗಾಂಧೀಜಿಯವರನ್ನು "ರಾಮರಾಜ್ಯ", "ಚಾತುರ್ವರ್ಣ ಪದ್ಧತಿ", "ಆದರ್ಶ ಬಂಡವಾಳ ವ್ಯವಸ್ಥೆ" ಪರಿಕಲ್ಪನೆಯಿಂದ ಹೊರತರಬೇಕಿದೆ. ಇವೆಲ್ಲವನ್ನೂ ಸಾಕಾರಗೊಳಿಸಲು ಸ್ವತಃ ಗಾಂಧೀಜಿಯವರು ಹೇಳಿರುವಂತೆ "ಪ್ರತಿ ದಿನ ನಿಮ್ಮ ಮನೆಗೆ ಅಸ್ಪೃಶ್ಯರಲ್ಲಿ ಒಬ್ಬರನ್ನು ಊಟಕ್ಕೆ ಕರೆಯಿರಿ ಅಥವಾ ಕನಿಷ್ಠ ಪಕ್ಷ ನೀವು ಊಟ ಮಾಡುವ ಮುನ್ನ ನೀರು ಅಥವಾ ಆಹಾರ ಪದಾರ್ಥವನ್ನು ಮುಟ್ಟಲು ಅವರಿಗೆ ಹೇಳಿ. ನಿಮ್ಮ ಪಾಪಗಳಿಗೆ ಪಶ್ಚಾತ್ತಾಪ ಪಡಿ" ಎಂದು ಹಳ್ಳಿ ಹಳ್ಳಿಗಳ ಸವರ್ಣೀಯರಿಗೆ ಹೇಳಿ ಪರಿವರ್ತಿಸಬೇಕಿದೆ. ಹೀಗಾದರೂ ಮಾಡಿ ಗಾಂಧೀಜಿಯವರು ಕಡೆಯ ಕಾಲದಲ್ಲಿ ಕಂಡ ಕನಸುಗಳಿಗೆ ಜೀವ ತುಂಬಿರಿ ಎಂದು ಈ ಕಿರಿಯ ಅಂಬೇಡ್ಕರ್‌ವಾದಿ ನಿಮ್ಮಲ್ಲಿ ಆಗ್ರಹಪೂರ್ವಕವಾಗಿ ವಿನಂತಿಸುತ್ತಾನೆ.

■ ವಿಕಾಸ ಆರ್ ಮೌರ್ಯ

ಎಚ್.ಟಿ. ಕೃಷ್ಣಪ್ಪನವರಿಗೆ 86

ಎಲ್ಲ ವಯೋವೃದ್ಧ ರಾಜಕಾರಣಿಗಳು ತಮ್ಮ ತಮ್ಮ ಹುಟ್ಟುಹಬ್ಬಗಳನ್ನು ಆಚರಿಸಿಕೊಳ್ಳುತ್ತಿರುವಾಗಲೆ ನಮ್ಮ ಮಂಡ್ಯದ ನಿವೃತ್ತ ರಾಜಕಾರಣಿ ಎಚ್.ಟಿ. ಕೃಷ್ಣಪ್ಪನವರೂ ತಮ್ಮ 86ನೇ ವರ್ಷಾಚರಣೆಯನ್ನ ಯಾರಿಗೂ ಗೊತ್ತಾಗದಂತೆ ಆಚರಿಸಿಕೊಂಡರು. ಮೈಸೂರಿನ ಗೋವಿಂದರಾಜು, ಕೆ.ಆರ್. ಪೇಟೆ ನಾಗರಾಜು ಮತ್ತು ನಾನು ಕೃಷ್ಣಪ್ಪನವರ ಜೊತೆ ಹೊಟ್ಟೆತುಂಬ ಡ್ರಿಂಕ್ ಮಾಡುತ್ತಿರುವಾಗ "ಇವತ್ತಿನಿಂದ ನಿಮಗೆ ಎಂಬತ್ತಾರಲ್ಲವೆ?" ಎಂದಾಗ "ಹೌದು" ಎಂದರು. ಎಂದೂ ತಮ್ಮ ಹುಟ್ಟುಹಬ್ಬವನ್ನ ಆಚರಿಸಿಕೊಳ್ಳದ ಕೃಷ್ಣಪ್ಪನವರಿಗೆ ತಾವು ಹುಟ್ಟಿದ ದಿನಾಂಕಕ್ಕೂ ಅದರ ಮಾರನೆ ದಿನಕ್ಕೂ ಅಂತಹ ವ್ಯತ್ಯಾಸವೇ ಇಲ್ಲ, ಈ 86ನೇ ವರ್ಷದಲ್ಲೂ ಅವರು ನಮ್ಮೆಲ್ಲರಿಗಿಂತಲೂ ಎರಡು ಪೆಗ್ ಜಾಸ್ತಿ ಏರಿಸುತ್ತಾರೆ, ಕೈಲಿರುವ ಸಿಗರೇಟ್ ಆರಿದ ಕೂಡಲೆ ಮತ್ತೆ ಹಚ್ಚುತ್ತಾರೆ. ಯಾವ ಕಾಯಿಲೆಯೂ ಇಲ್ಲ, "ನಿಮ್ಮ ಆರೋಗ್ಯ ಇಷ್ಟು ಚನ್ನಾಗಿರಕ್ಕೆ ಕಾರಣ ಏನು ಸಾರ್?" ಎಂದರೆ "ಅದೇ ನನಗೂ ಆಶ್ಚರ್ಯ. ಯಾತನೆಯಿಲ್ಲದ, ಯಾಚನೆಯಿಲ್ಲದ ಅಂತ್ಯ ಬರಲಿ ಅನ್ನೋದು ನನ್ನ ಅಪೇಕ್ಷೆ. ಅದು ಪ್ರಾಪ್ತಿಯಾಗುತ್ತೆ ಅನ್ನಿಸುತ್ತೆ" ಎಂದರು.

ಕೃಷ್ಣಪ್ಪನವರು ತಮ್ಮ ವಾಕ್ಯ ಪೂರ್ಣಗೊಳಿಸಲು ಸೂಕ್ತ ಪದ ಸದಕ್ಕಾಗಿ ಹುಡುಕುತ್ತಾರೆ. ಎದುರಿದ್ದವನು ಕೂಡಲೆ ಒದಗಿಸಿಕೊಡಬೇಕು. ಇಲ್ಲ ಅಂದರೆ ಲೇಟಾಗುತ್ತೆ ಅಥವಾ ಅಪೂರ್ಣವಾಗುತ್ತೆ. ಹೊರತು ದುರ್ಬಲ ಪದ ಹಾಕಿ ರೂಪಿಸಿದ ವಾಕ್ಯವನ್ನು ಅವರು ಹಾಳು ಮಾಡುವುದಿಲ್ಲ. ನಾಗರತ್ನಮ್ಮನವರು ಸ್ಪೀಕರ್ ಆಗಿದ್ದಾಗ ವಿರೋಧ ಪಕ್ಷದ ನಾಯಕರಾಗಿಯೂ ಕೆಲಸ ನಿರ್ವಹಿಸಿದ ಕೃಷ್ಣಪ್ಪನವರು ಸದನದಲ್ಲಿ ಬಳಸಿದ ಭಾಷೆ ಕೂಡ ಮೆಚ್ಚುಗೆ ಗಳಿಸಿತ್ತು, ದೇವೇಗೌಡರ ಬದಲಿಗೆ ತಾತ್ಕಾಲಿಕವಾಗಿ ವಿರೋಧ ಪಕ್ಷದ ನಾಯಕರ ಕರ್ತವ್ಯ ನಿರ್ವಹಿಸಿದ ಕೃಷ್ಣಪ್ಪನವರನ್ನ ಕುರಿತು ನಾಗರತ್ನಮ್ಮ, "ನಿಮ್ಮ ಜಾಗದಲ್ಲಿ ಇನ್ನೂ ದೇವೇಗೌಡರೆ



ಇದ್ದಾರೆ ಅನ್ನಿಸುತ್ತೆ" ಎಂದಿದ್ದರು. ಅದಕ್ಕೆ ಕೃಷ್ಣಪ್ಪನವರು "ನಿಮ್ಮ ಸ್ಥಾನದಲ್ಲೂ ವೈಕುಂಠ ಬಾಳಿಗ ಇದ್ದುದ್ದು ನನಗೆ ನೆನಪಿಗೆ ಬರುತ್ತೆ" ಎಂದು ಮರ್ಮಾಘಾತ ಮಾಡಿದ್ದರು.

ಅವರ ಜೊತೆ ಮಾತನಾಡುತ್ತಿದ್ದರೆ ಎಂತೆಂತಹ ಕನ್ನಡ ಪದಗಳನ್ನ ಕಳೆದುಕೊಳ್ಳುತ್ತಿದ್ದೇವಲ್ಲ ಅನ್ನಿಸುತ್ತದೆ. ಸದ್ಯದ ಸರ್ಕಾರದ ಬಗ್ಗೆ ಅವರಿಗೆ ಸಿದ್ದರಾಮಯ್ಯನನ್ನ ಭೇಟಿ ಮಾಡಿ ಮಾತನಾಡಬೇಕೆನಿಸಿದೆ. ಆದರೆ ಅದಕ್ಕಿನ್ನೂ ಅವಕಾಶ ಸಿಕ್ಕಿಲ್ಲ. ಅವರಿಗಿರುವ ಇನ್ನೊಂದು ಮಹದಾಸೆ ಎಂದರೆ ದೇವೇಗೌಡರು ಬರೆಯುವ ಜೀವನ ಚರಿತ್ರೆ ಓದಿ ಅದಕ್ಕೆ ಉತ್ತರ ಕೊಡಬೇಕೆಂಬುದು. ಯಾಕೆ ಎಂದು ಕೇಳಿದರೆ "ದೇವೇಗೌಡರು ಸುಳ್ಳು ಬರೆದೇ ಬರೆಯುತ್ತಾರೆ. ನನ್ನನ್ನೂ ಸೇರಿ ಒಕ್ಕಲಿಗ ಜನಾಂಗದ ಹಲವು ನಾಯಕರನ್ನು ರಾಜಕೀಯವಾಗಿ ನಿರ್ನಾಮ ಮಾಡಿದ ಕಥೆಗಳನ್ನು ಅವರು ಬರೆಯಲಾರರು. ಬರೆದರೂ ಅದರಲ್ಲಿ ಸುಳ್ಳು ಸುದ್ದಿಗಳಿರುವುದು ಗ್ಯಾರಂಟಿ. ಹಾಗಾಗಿ ಜನಸಾಮಾನ್ಯರಿಗೆ ಸತ್ಯಸಂಗತಿಯನ್ನು ತಿಳಿಸುವುದು ನಮ್ಮ ಕರ್ತವ್ಯ. ಸುಳ್ಳು ಸುದ್ದಿಗಳು ಹೇಗೆ ಸತ್ಯಸಂಗತಿಗಳಾಗಿ ಬೇರು ಬಿಟ್ಟು ಫಲಾನುಭವಿಗೆ ದಾಸ್ತಾನಾಗಿ ಒದಗಿಬರುತ್ತೆ ಎಂಬುದಕ್ಕೆ ಗೌಡರು 'ಮಣ್ಣಿನ ಮಗ' ಎಂಬ ಸಂಗತಿಯೇ ಸಾಕ್ಷಿ. ದೇವರಾಜ ಅರಸು ದೊಡ್ಡ ಎತ್ತುಗಳನ್ನು ಕಟ್ಟಿ ಬೇಸಾಯ ಮಾಡಿದ್ದನ್ನು ನೋಡಿದ್ದೇವೆ. ಅರಸು ಅವರು ಕರಾವಿನ ಹಸು ಕಟ್ಟಿದ್ದರು. ಆದರೂ ಅವರನ್ನ 'ಮಣ್ಣಿನ ಮಗ' ಎಂದು ಯಾರೂ ಗುರುತಿಸಲಿಲ್ಲ. ಆದರೆ ನಮ್ಮ ದೇವೇಗೌಡರು ಹೊಲ ಉತ್ತಿದ್ದನ್ನು ಯಾರೂ ನೋಡಿಲ್ಲ. ರಸ್ತೆಗೆ ಮಣ್ಣು ಹಾಕಿಸುತ್ತ ಮರದ ಕೆಳಗೆ ಬೈಕ್ ನಿಲ್ಲಿಸಿಕೊಂಡು ಕಂಟ್ರಾಕ್ಟ್ ಮಾಡಿಸಿದ್ದನ್ನು ನೋಡಿದ್ದೇವೆ. ಈ ಕಂಟ್ರಾಕ್ಟ್‌ಗೆ ಬಂಡವಾಳ ಕೊಟ್ಟವರು ನಲ್ಲೂರೇ ಗೌಡರು. ಆ ಹಣವನ್ನೂ ಗೌಡರು ಹಿಂದಿರುಗಿಸಿದ್ದು ಕಾಣೆ. ಅವರು ಮೊದಲು ಗೆದ್ದಾಗ ಶಂಕರೇಗೌಡರಿಗೆ ಪರಿಚಯಿಸಿ ಬೆಂಗಳೂರಿನ ಬ್ರಿಗೇಡ್ ರೋಡ್ ತೋರಿಸಿ, ಊಟ ಮಾಡಿಸಿ ಕಳುಹಿಸಿದ್ದೆ. ಆತ ನಮ್ಮ ಬಡ್ಡೆಗೇ ನೀರು ಬಿಟ್ಟು ನಮಗೆ ನಾವೇ ಉಂಟಿಕೊಳ್ಳುವಂತೆ ಮಾಡುತ್ತಾನೆಂದು ನಾವೆಣಿಸಿರಲಿಲ್ಲ. ನಮ್ಮ ರಾಜಕೀಯ ಜೀವನದಲ್ಲಿ ನಮಗೆ ವೈರಿಗಳೇ ಇರಲಿಲ್ಲ, ಇಂದೂ ಕೂಡ ಇಲ್ಲ. ನಮ್ಮನ್ನ ಮುಗಿಸಲು ಓಡಾಡಿದ ಶಿವರಾಮೇಗೌಡನ ಮೊಮ್ಮಗನ ನಾಮಕರಣಕ್ಕೂ ಹೋಗಿ ಬಂದೆ. ಯಾವತ್ತಿಗೂ ರಾಜಕಾರಣ ಬೇರೆ, ಮನುಷ್ಯ ಸಂಬಂಧ ಬೇರೆ. ದೇವೇಗೌಡರ ಹಿರಿಯ ಮಗ ಹೋಗಿ ಸಿದ್ದರಾಮಯ್ಯನನ್ನು ಮಗನ ಮದುವೆಗೆ ಬರುವಂತೆ ಕರೆದರು. ಸಿದ್ದರಾಮಯ್ಯ ಹೋಗಿ ಬಂದರು. ಹಾಗೆಯೇ ದೇವೇಗೌಡರು ಬಿ.ಎಲ್. ಶಂಕರ್ ಮಗಳ ಮದುವೆಗೆ ಹೋಗಿದ್ದರು. ಇದು ನಿಮ್ಮ ಸಾಹಿತಿಗಳ ಬಳಗದಲ್ಲಿ ಸಾಧ್ಯವೇ?" ಎಂದು ಕೃಷ್ಣಪ್ಪ ದಂ ಎಳೆದು ಮುಖ ನೋಡಿದರು. ಕೂಡಲೇ ಉತ್ತರ ಕೊಡುವುದು ಕಷ್ಟವಾಯ್ತು.

"ನೋಡಿ, ವಿನಾಕಾರಣ ವೈರಿಗಳನ್ನ ಸೃಷ್ಟಿಸಿಕೊಳ್ಳದವರು, ವೈರತ್ವ ಸಾಧಿಸಲು ಸಾಧ್ಯವಿಲ್ಲದವನನ್ನ ಮಹಾ ಬ್ರಹ್ಮರಾಕ್ಷಸನೆಂದು ಪರಿಗಣಿಸಿ, ಹಲವಾರು ತಂತ್ರಗಳನ್ನು ಬಳಸಿ, ಹತ್ತಿಕ್ಕಲು ಹೋರಾಡುವುದಿದೆಯಲ್ಲ ಅದರಂತಹ ಮೂರ್ಖತನವೇ ಇಲ್ಲ, ಜಾತಿವಾದಿಗಳು, ಧರ್ಮಾಂಧರು ಇಂತಹ ಕೆಲಸದಲ್ಲಿ ನಿರತರಾಗಿರುತ್ತಾರೆ. ದುರಾದೃಷ್ಟಕ್ಕೆ ಅವರಿಗೆ ಸಾರ್ವಜನಿಕರಿಂದ ಬೆಂಬಲವೂ ಸಿಕ್ಕಿಬಿಡುತ್ತದೆ. ಆಗ ನಾವೂ ಕೂಡ ಸೈನ್ಯ ಕಟ್ಟಿ ಹೋರಾಡುವ ಬದಲು ಹೀಗೆ ಸುಮ್ಮನಿರುವುದೇ ಒಳ್ಳೆಯದೆಂದು ಭಾವಿಸಿ ಸುಮ್ಮನಾಗುತ್ತೇವೆ" ಎಂದರು.

ಅಷ್ಟರಲ್ಲಿ ಗೋವಿಂದರಾಜು "ಒಂದು ರಂಗಗೀತೆ ಹೇಳಿ ಸಾರ್" ಎಂದ. ಕೃಷ್ಣಪ್ಪನವರು ಶಂಕರೇಗೌಡರ ಜೊತೆ ಸೇರಿ ಕಲಿತ ಪಾದುಕಾ ಕಿರೀಟ ನಾಟಕದ ಹಾಡು ಹೇಳಿದರು. ಕೃಷ್ಣಪ್ಪನವರಲ್ಲಿ ಹಲವಾರು ಹಾಸ್ಯ ಪ್ರಸಂಗಗಳಿವೆ. ಅವು ಅನಾದಿಕಾಲದಿಂದ ಇಲ್ಲಿಯವರೆಗೂ ವ್ಯಾಪಿಸಿದೆ. ಹಾಗಾಗಿ ನಾನು "ಒಂದು ಜೋಕೇಳಿ ಸಾ" ಎಂದೆ.

"ಜೋಕಲ್ಲ, ನಿಜವಾಗ್ಲು ನಡೆದದ್ದು ಕೇಳಿ. ನಮ್ಮೂರಲ್ಲಿ ದ್ಯಾವಣ್ಣ ಅಂತ ಇದ್ದ. ಹೆಂಡತಿಗೆ ಯಲ್ಲ ಜವಾಬ್ದಾರಿ ಕೊಟ್ಟಿದ್ದ. ಅವಳು ಹಿಪ್ಪೆ ಬೀಜ, ವಂಗೆ ಬೀಜ, ಬೇವಿನ ಬೀಜನ್ನೆಲ್ಲ ಆದು, ಒಣಗಿಸಿ, ಸಂತೆಗೆ ತಗಂಡೋಗಿ ಮಾರಿ ಸಂತೆ ಬಂಗ ಮಾಡಿಕಂಡು ಬರೋಳು. ಒಂದು ಸತಿ ಹಿಂಗೆ ಸಂತಿಗೆ ಬೀಜ ಹೊತಗಂಡೋಗಿ ಮಾರಿ ಬಂಗ ಮಾಡಿಕಂಡು ಬಂದ್ಲು, ಗಂಡ "ಎಷ್ಟು ಕೊಟ್ಟೆ ಬೀಜವಾ?" ಅಂದ.

"ಮೂರು ರೂಪಾಯಿಗೆ ಸೇರಿನಂಗೆ ತಂಗಡ."

"ಯಾರು?"

"ಅವ್ರುನೆ ಇಕ್ಬಾಲ್ ಸಾಬಿ."

"ಸರಿಯಾಗಿ ಮಾಡಿಕಳಿಸ್ಕವ್ರುನೆ ಬುಡು."

"ನಾನೊಬ್ಬಳೆ ಅಲ್ಲ"

ಕೃಷ್ಣಪ್ಪನವರು ಬಳಸಿದ ಭಾಷೆಗೆ ನಾವೆಲ್ಲಾ ಬಿದ್ದು ಬಿದ್ದು ನಕ್ಕೆವು. ಈ ಎಂಬತ್ತಾರನೆ ವಯಸ್ಸಿನಲ್ಲೂ ತಮ್ಮ ಎಂದಿನ ಲವಲವಿಕೆ ಉಳಿಸಿಕೊಂಡು ಮದುವೆ, ತಿಥಿ, ಊರ ಹಬ್ಬಗಳಿಗೆ ಭೇಟಿಕೊಡುತ್ತ ವಿಸ್ಕಿ, ಮಟನ್, ಚಿಕನ್, ಸಿಗರೇಟ್ ಜೊತೆ ಕಾಲ ಕಳೆದು ರಾತ್ರಿ ಹನ್ನೆರಡಕ್ಕೆ ಮಲಗುವ ಅವರ ಆರೋಗ್ಯ ದೇವೇಗೌಡರೇ ಕೃಷ್ಣಪ್ಪನವರ ಬಗ್ಗೆ ಹೇಳುವಂತೆ ಹಿಂದಿನ ಜನ್ಮದಲ್ಲಿ ಪಡೆದುಕೊಂಡು ಬಂದಿದ್ದು.

ಆದರೆ ಹಿಂದಿನ ಜನ್ಮದಲ್ಲಿ ಎಲ್ಲಿಂದ ಏನು ಪಡೆದುಕೊಂಡು, ಇಲ್ಲಿ ಬಂದು ಹುಟ್ಟಿದ್ದಾರೆಂಬುದಕ್ಕೆ ವಿವರವಿಲ್ಲ!

■ ಬಿ.ಚಂದ್ರೇಗೌಡ



ಕೋಟ್ಯಾಧಿಪತಿಯಲ್ಲಿ ಪುನೀತ್



ಬಿಗ್‌ಬಾಸ್ ಸುದೀಪ್

ಹೀರೋ ಸೊಕ್ಕು ಸಿನಿಮಾ ಸುಕ್ಕು!

ಅರೆಬರೆ ನಿರ್ಮಾಪಕರಿಗೂ ಧಿಮಾಕಿನ ಹೀರೋಗಳಿಗೂ ವಾಣಿಜ್ಯ ಮಂಡಳಿಯ ಅಂಗಳದಲ್ಲಿ ಮುಸುಕಿನ ಗುದ್ದಾಟ. ಇದು ಟೀವಿ ಚಾನಲ್ಲುಗಳ ವಿರುದ್ಧದ ಬಡ ನಿರ್ಮಾಪಕರ ಆರ್ತನಾದವಾ, ಸೊಕ್ಕಿನ ನಾಯಕ ನಟರ ವಿರುದ್ಧದ ಅಸಹಾಯಕತೆಯಾ, ಥೇಟರುಗಳ ಮಾಲೀಕರಿಗೂ ಪ್ರದರ್ಶಕರಿಗೂ ನಡುವಿನ ಪಾಲು ಹಂಚಿಕೆಯ ಜಿದ್ದಾಜಿದ್ದಿಯಾ, ಕ್ಯೂಬ್, ಯುಎಫ್‌ಓ ತಾಂತ್ರಿಕತೆಯಿಂದಾದ ವಂಚನೆಯಾ ಅಥವಾ ನಿರುದ್ಯೋಗಿ ಸಿನಿಮಾ ಶೋಕಿಲಾಲರು ಕೆಲಸವಿಲ್ಲದೆ ಶುರುಹಚ್ಚಿಕೊಂಡ ಹೊಸ ಕ್ಯಾತೆ ಜಗಳವಾ...?

ಸಿನಿಮಾ ನಿರ್ಮಾಪಕರ ಒಂದು ಗುಂಪು ಮೊನ್ನೆಯಷ್ಟೇ ವಾಣಿಜ್ಯ ಮಂಡಳಿಯೆದುರು ಧರಣಿ ಶುರುವಿಟ್ಟಾಗಿದೆ. ಧರಣಿ ಕೂತವರ ಹಿನ್ನೆಲೆ, ದುರ್ಗತಿ,, ಆರ್ಥಿಕ ಪರಿಸ್ಥಿತಿ ಮತ್ತು ಉದ್ದೇಶಗಳೇನೇ ಇರಲಿ; ಅವರ ಬೇಡಿಕೆಗಳಿಗಾದರೂ ಅರ್ಥವಿದೆಯೆ?

ಇನ್ನು ಮುಂದೆ ಕನ್ನಡದ ಹೀರೋಗಳು ಟೀವಿಗಳ ರಿಯಾಲಿಟಿ ಶೋನಲ್ಲಿ ಭಾಗವಹಿಸಕೂಡದು. ಇದರಿಂದಾಗಿ ಥೇಟರುಗಳಿಗೆ ಜನ ಬರುತ್ತಿಲ್ಲ ಎಂಬುದು ಬೀದಿಗಿಳಿದ ನಿರ್ಮಾಪಕರ ವಾದ. ಹೀರೋಗಳು ನಿರ್ಮಾಪಕರಿಗೆ ನೀಡುತ್ತಿರುವ ಕಿರುಕುಳ ನಿಲ್ಲಿಸಬೇಕು, ಟೀವಿ ಚಾನಲ್‌ಗಳು ಸಿನಿಮಾಗಳನ್ನು ಖರೀದಿಸುತ್ತಿಲ್ಲವಾದ್ದರಿಂದ ಹೀರೋಗಳು ರಿಯಾಲಿಟಿ ಶೋಗಳಿಗೆ ಹೋಗುವುದನ್ನು ನಿಲ್ಲಿಸಬೇಕು, ಮಲ್ಟಿಪ್ಲೆಕ್ಸ್‌ಗಳಂತೆ ಸಿನಿಮಾಗಳ ಗಳಿಕೆಯಲ್ಲಿ ಏಕಪರದೆಯ ಥೇಟರ್‌ಗಳೂ ನಿರ್ಮಾಪಕರಿಗೆ ಪಾಲು ನೀಡಬೇಕು, ಕ್ಯೂಬ್ ಮತ್ತು ಯುಎಫ್‌ಓಗಳ ಜಾಹಿರಾತಿನಲ್ಲೂ ನಿರ್ಮಾಪಕರಿಗೆ ಪಾಲು ಕೊಡಬೇಕು. ಅಲ್ಲಿಯತನಕ ರಿಯಾಲಿಟಿ ಶೋನ ಹೀರೋಗಳ ಯಾವ ಚಿತ್ರಗಳ ಬಿಡುಗಡೆಗೂ ವಾಣಿಜ್ಯ ಮಂಡಳಿ ಅವಕಾಶ ಕೊಡಕೂಡದು!


ಫಿಲ್ಮ್‌ಛೇಂಬರ್ ಅಧ್ಯಕ್ಷ ಥಾಮಸ್ ಡಿಸೋಜ

ಬಾಮಾ ಕಿತಾಪತಿ!

ಇದು ಜೂನ್ 1ರಿಂದ ವಾಣಿಜ್ಯ ಮಂಡಳಿ ಮುಂದೆ ಧರಣಿ ಆರಂಭಿಸಿರುವ ನಿರ್ಮಾಪಕರ ಪ್ರಮುಖ ಬೇಡಿಕೆಗಳು. ಈ ಹಿಂದೆ ಡಬ್ಬಿಂಗ್ ವಿರುದ್ಧ ಬೀದಿಗಿಳಿದವರು, ಪರಭಾಷಾ ಚಿತ್ರಗಳ ಹಾವಳಿಗೆ ರೋಸತ್ತವರು, ಹೀರೋಗಳ ಸಂಭಾವನೆ ತಗ್ಗಿಸುವಂತೆ ಗೊಣಗುತ್ತಿದ್ದವರು, ಥೇಟರ್ ಬಾಡಿಗೆ ವಿರುದ್ಧ ಬೊಬ್ಬೆಯಿಟ್ಟವರು, ರಿಲೀಜಿಗಾಗಿ ಬಡಿದಾಡಿಕೊಂಡವರು, ನಾ ಮುಂದು ತಾ ಮುಂದೆಂದು ಸಿನಿಮಾ ಬಿಡುಗಡೆಗೆ ಕೈಕೈ ಮಿಲಾಯಿಸಿದವರು ಇತ್ಯಾದಿಗಳೆಲ್ಲರ ಮಧ್ಯೆ ಈಗ ಬೀದಿಗಿಳಿದವರದ್ದು ಹೊಸವರಸೆ ಮತ್ತು ಹಿಂದೆಂದೂ ಕೇಳರಿಯದ ಬೇಡಿಕೆ. ಇಂಥ ಬೇಡಿಕೆಗಳ ಪರಿಶೀಲನೆಗೆಂದೇ ವಾಣಿಜ್ಯ ಮಂಡಳಿ ಅಧ್ಯಕ್ಷ ಥಾಮಸ್ ಡಿಸೋಜ ಸಮಿತಿಯೊಂದನ್ನು ರಚಿಸಿದ್ದಾರೆ. ಜಗ್ಗೇಶ್, ತಾರಾ, ರಾಕ್‌ಲೈನ್, ಸಾ.ರಾ. ಗೋವಿಂದು, ಉಮೇಶ್ ಬಣಕಾರ್ ಮುಂತಾದವರ ಸಮಿತಿಯನ್ನು ರಚಿಸಿದ್ದಾಗಿದೆ.

ಸಿನಿಮಾ ಹೀರೋಗಳ ಸೊಕ್ಕು, ದೌಲತ್ತು ಇವತ್ತು ನಿನ್ನೆಯದೇನಲ್ಲ, ಶೂಟಿಂಗ್‌ಗೆ ಕರೆತರುವುದಕ್ಕೆ ಐಷಾರಾಮಿ ಕಾರು ಬೇಕು. ಸಮಯಕ್ಕೆ ಸರಿಯಾಗಿ ಬರದೇಹೋದರೂ ಇಡೀ ಯೂನಿಟ್ ಕಾಯುತ್ತಿರಬೇಕು. ಪ್ರತಿಯೊಬ್ಬ ಹೀರೋಗೂ ಆತನಿಗೆ ಸರಿಹೊಂದುವ ಹೀರೋಯಿನ್ ಬೇಕು. ಮೊಬೈಲು ಹಿಡಿದುಕೊಳ್ಳಲೊಬ್ಬ ಚೇಲಾ, ಛತ್ರಿ ಹಿಡಿಯಲೊಬ್ಬ ಚೇಲಾ, ಮೇಕಪ್ಪಿಗೊಬ್ಬ, ಪ್ಯಾಕಪ್ಪಿಗೊಬ್ಬ ಮತ್ತು ಭೋಪರಾಕು ಹಾಕಲೆಂದೇ ಅರ್ಧಡಜನ್ ಚೇಲಾಗಳು. ಹೀಗೆ ಹೀರೋ ಸುತ್ತಮುತ್ತ ಠಳಾಯಿಸುವ ಚೇಲಾಗಳಿಗೆಂದೇ ನಿರ್ಮಾಪಕ ಬಿರಿಯಾನಿ, ಕಬಾಬು, ಮಿಲ್ಟ್ರಿ ಹೊಟೇಲಿನ ಊಟ ತರಿಸಬೇಕು.


ಬೀದಿಗಿಳಿದ ನಿರ್ಮಾಪಕರು.

ಹೀರೋಗಳ ಕತೆ ಒತ್ತಟ್ಟಿಗಿರಲಿ. ತೀರ ಇತ್ತೀಚೆಗೆ ರಂಗಾಯಣ ರಘು, ಬುಲೆಟ್ ಪ್ರಕಾಶ್, ಸಾಧು ಕೋಕಿಲ, ರಾಜು ತಾಳಿಕೋಟೆಯಂಥ ಪೋಷಕ ನಟರೂ ಶೂಟಿಂಗ್ ವೇಳೆ ಕ್ಯಾರಾವ್ಯಾನಿನ ಡಿಮ್ಯಾಂಡಿಡುತ್ತಾರೆಂದರೆ ಇನ್ನು ನಿರ್ಮಾಪಕನ ಪಾಡು ಏನಾಗಬೇಕು?

ಸಿನಿಮಾ ಹೀರೋ, ಹೀರೋಯಿನ್, ಕಮೇಡಿಯನ್, ವಿಲನ್ನುಗಳ ಅಂಧಾದುಂದಿಯ ಹಾವಳಿ ಇಂದು ನಿನ್ನೆಯದೇನಲ್ಲ. ಕೇವಲ ಗಾಂಧಿನಗರಕ್ಕಷ್ಟೇ ಅದು ಸೀಮಿತವಾಗಿಲ್ಲ. ಆದರೆ ಈಗ ಎದ್ದಿರುವ ಪ್ರಶ್ನೆ 'ರಿಯಾಲಿಟಿ ಶೋ' ಎಂಬ ಟೀವಿ ತಂತ್ರದ ಬಗ್ಗೆ. ನಿಜಕ್ಕೂ ರಿಯಾಲಿಟಿ ಶೋಗಳಿಂದಾಗಿ ಥೇಟರಿಗೆ ಜನ ಬರುತ್ತಿಲ್ಲವಾ ಅಥವಾ ಕನ್ನಡ ಚಿತ್ರಗಳ ಗುಣಮಟ್ಟದಲ್ಲೇ ಸಮಸ್ಯೆಯಿದೆಯಾ? ಸದ್ಯ ಬರುತ್ತಿರುವ ಚಿತ್ರಗಳ ಅಭಿರುಚಿಯಾದರೂ ಎಂಥಾದ್ದು? ಹೀರೋ ಟೀವಿಯೊಂದರಲ್ಲಿ ಕಾಣಿಸಿಕೊಂಡ ಮಾತ್ರಕ್ಕೆ ಆತನ ಚಿತ್ರವನ್ನು ಜನ ನಿರ್ಲಕ್ಷಿಸುತ್ತಾರೆಂಬುದು ಎಷ್ಟು ಸರಿ? ಅದೇ ನಿಜವಾಗಿದ್ದರೆ ಹಿಂದಿ, ತಮಿಳು, ತೆಲುಗು ಸಿನಿಮಾಗಳಿಗೂ 'ರಿಯಾಲಿಟಿ ಶೋ' ಕುತ್ತಾಗಬೇಕಿತ್ತಲ್ಲವೇ? ಹೀರೋಗಳು ರಿಯಾಲಿಟಿ ಶೋನಲ್ಲಿ ಕಾಣಿಸಿಕೊಂಡ ಕಾರಣಕ್ಕೇ ಟೀವಿಗಳು ಸಿನಿಮಾಗಳ ಸ್ಯಾಟಲೈಟ್ ರೈಟ್ಸ್ ಖರೀದಿಸುತ್ತಿಲ್ಲವೇ?

ಟೀವಿ ರೈಟ್ಸ್ ಕುಸಿತ?

ಇದು ಪ್ರಸ್ತುತ ತಲೆ ಎತ್ತಿದ ಪ್ರಶ್ನೆಗಳಾದರೂ ಉತ್ತರ ಬೇರೆಯದೇ ಹಕೀಕತ್ತೊಂದನ್ನು ಬಿಚ್ಚಿಡುತ್ತವೆ. ತೀರ ಇತ್ತೀಚೆಗೆ ಯೋಗರಾಜ್ ಭಟ್ಟರ 'ವಾಸ್ತು ಪ್ರಕಾರ'ಕ್ಕೆ ಟೀವಿ ರೈಟ್ಸಿನ ಸಮಸ್ಯೆ ಕಾಡಿತು. ಅದರ ಯಾವೊಬ್ಬ ನಟರೂ ರಿಯಾಲಿಟಿ ಶೋನಲ್ಲಿದ್ದವರಲ್ಲ, ಜಗ್ಗೇಶ್, ರಕ್ಷಿತ್ ಶೆಟ್ಟಿ, ಅನಂತ್‌ನಾಗ್, ಸುಧಾರಾಣಿ ಮುಂತಾದವರಿದ್ದೂ ಮೂರು ಕೋಟಿಯಷ್ಟು ಟೀವಿ ಹಕ್ಕಿನ ಮೊತ್ತ ನಿರೀಕ್ಷಿಸಿದ್ದ ಭಟ್ಟರಿಗೆ ಅದರ ಅರ್ಧದಷ್ಟಕ್ಕೆ ಪರದಾಡಬೇಕಾಯಿತು. ಗಣೇಶ್, ಲೂಸ್ ಮಾದ, ಅಜಯ್‌ರಾವ್, ಶ್ರೀನಗರ ಕಿಟ್ಟಿ, ದುನಿಯಾ ವಿಜಿ, ದಿಗಂತ್, ಪ್ರಜ್ವಲ್ ದೇವರಾಜ್ ಮುಂತಾದ ಸೆಕೆಂಡ್ ಲೈನ್ ಹೀರೋಗಳ ಚಿತ್ರಗಳಿಗೂ ಹಿಂದಿನ ಟೀವಿರೇಟು ಹುಟ್ಟುತ್ತಿಲ್ಲ.

ಎಲ್ಲೋ ಒಂದಿಬ್ಬರು ಹೊರತಾಗಿ ಬಹುತೇಕ ಕನ್ನಡದ ಹೀರೋಗಳ್ಯಾರೂ ಸದ್ಯ ರಿಯಾಲಿಟಿ ಶೋಗಳಲಿಲ್ಲ. ಗಣೇಶ್‌ನ ಸೂಪರ್ ಮಿನಿಟ್ ಮುಗಿದು ಯಾವುದೋ ಕಾಲವಾಗಿದೆ. ಸುದೀಪ್ ಬಿಗ್‌ಬಾಸ್‌ನಲ್ಲಿ ಮುಖ ತೋರಿಸಿ ಹೆಚ್ಚೂಕಮ್ಮಿ ವರ್ಷ ತುಂಬುತ್ತಿದೆ. ಪುನೀತ್ ಕೋಟ್ಯಾಧಿಪತಿ ನಡೆಸಿಕೊಟ್ಟು ವರ್ಷ ಕಳೆದುಹೋಗಿದೆ. ಈಗ ರಿಯಾಲಿಟಿ ಶೋನಲ್ಲಿರುವ ಕನ್ನಡದ ನಟರೆಂದರೆ ರವಿಚಂದ್ರನ್, ಸೃಜನ್ ಲೋಕೇಶ್, ಅರುಣ್ ಸಾಗರ್ ಮತ್ತು ಪ್ರಿಯಾಮಣಿ.

ಮಂಜು, ಮುನಿ, ಜಯಣ್ಣ, ರಾಮು ಹಿಂದೇಟು ಹಾಕಿದ್ದೇಕೆ?


ಮಂಜು ಮುನಿರತ್ನ ರಾಮು ರಾಕ್‌ಲೈನ್ ರಾಜೇಂದ್ರ ಸಿಂಗ್ ಬಾಬು ಜಯಣ್ಣ

ಹೀರೋಗಳ ದೌಲತ್ತು ದರ್ಪದ ವಿರುದ್ಧ ಸದ್ಯ ವಾಣಿಜ್ಯ ಮಂಡಳಿ ಮುಂದೆ ಪ್ರತಿಭಟಿಸುತ್ತಿರುವ ಸೋಕಾಲ್ಡ್ ಕನ್ನಡದ ನಿರ್ಮಾಪಕರ ಪೈಕಿ ಎದ್ದು ಕಾಣುತ್ತಿರುವ ತಲೆಗಳಾದರೂ ಎಂತೆಂಥವು?

ಹುಟ್ಟಾ ಹಲಾಲುಟೋಪಿ ಬಾ.ಮಾ. ಹರೀಶ, ಆತನ ತಮ್ಮ ಮೂಗುಬಟ್ಟು ಬಾ.ಮಾ. ಗಿರೀಶ, ಯಾವುದೋ ಕಾಲಕ್ಕೆ ಕಳಪೆ ಸಿನಿಮಾ ದಂಧೆ ಹುಟ್ಟು ಹಾಕಿದ ಬಿ.ಆರ್. ಕೇಶವ ಅಡ್ಡ ಹೆಸರಲ್ಲಿ ಅಪ್ಪ ಮುಸುರಿ ಬಿಟ್ಟರೆ ಸಿನಿಮಾ ಜೊತೆ ಸಂಬಂಧವೇ ಇಲ್ಲದ ಜಯಸಿಂಹ, ಮುಸುರಿ, ಕೂಡ್ಲು ಜೊತೆ ಯಾವುದೋ ಜನ್ಮದ ಋಣಾನುಬಂಧವೆಂಬಂತೆ ನಿರ್ಮಾಪಕಿಯೆಂಬ ಆರೋಪ ಹೊತ್ತ ಅನಿತಾ ರಾಣಿ ಮತ್ತು ತಾನೂ ಒಬ್ಬ ಚಿತ್ರ ನಿರ್ಮಾಪಕನೆಂದು ರೈಲು ಬಿಡುವ ಕೃಷ್ಣೇಗೌಡ!

ಕನ್ನಡದ ಸಿನಿಮಾ ನಿರ್ಮಾಪಕರೆಂದು ಯಾರಾದರೂ ಈ ಮಂದಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಾದರೆ ಕೆ. ಮಂಜು, ಮುನಿರತ್ನ, ರಾಕ್‌ಲೈನ್, ರಾಮು, ಸಿ.ಆರ್. ಮನೋಹರ್, ಜಯಣ್ಣ ಭೋಗೇಂದ್ರ, ಬಸಂತ್‌ಕುಮಾರ್, ಪ್ರಸಾದ್ ಮುಂತಾದವರನ್ನು ಏನೆನ್ನಬೇಕು?

ಯಾವ ಕಾರಣಕ್ಕೋ ಗೊತ್ತಿಲ್ಲ ರಾಜೇಂದ್ರಸಿಂಗ್ ಬಾಬು ಈ ಮಂದಿ ಜೊತೆ ಗುರುತಿಸಿಕೊಳ್ಳುತ್ತಿದ್ದಾರೆ. ಕೆಸಿಎನ್ ಚಂದ್ರಶೇಖರ್ ಏನಾದರೂ ತಲೆ ಹಾಕದೇ ಹೋಗಿದ್ದರೆ ಇವರ ಧರಣಿಗೆ ಕಿಮ್ಮತ್ತಿರುತ್ತಿರಲಿಲ್ಲ. ಕನ್ನಡ ಚಾಲ್ತಿಯ ನಿರ್ಮಾಪಕರನ್ನು ಕಾಟಾಚಾರಕ್ಕೂ ವಿಶ್ವಾಸಕ್ಕೆ ತೆಗೆದುಕೊಳ್ಳದೆ ಏಕಾಏಕಿ ತಾವೇ ಬೀದಿಗಿಳಿದ ಇಂಥವರಿಂದಾಗಿ ಹೋರಾಟಕ್ಕೆ ಅರ್ಥ ಬರುವುದಿಲ್ಲ, ಏಕೆಂದರೆ ಸಿನಿಮಾ ಮಾಡುವ ತಾಕತ್ತಾಗಲಿ ಸಿದ್ಧತೆಯಾಗಲಿ ಇವರ್‍ಯಾರಲ್ಲೂ ಇಲ್ಲ, ಹಾಗೊಮ್ಮೆ ಹೀರೋಗಳೆಲ್ಲ ಸೇರಿಕೊಂಡು 'ಆಯ್ತು ಇನ್ನು ಮುಂದೆ ನಮ್ಮ ಸಂಭಾವನೆಯನ್ನು ಅರ್ಧಕ್ಕೆ ಇಳಿಸ್ತೀವಿ. ನೀವು ಸಿನಿಮಾ ಮಾಡ್ತೀರಾ....?' ಎಂದು ಯಾರೇ ಧರಣಿನಿರತರನ್ನು ಕೇಳಿ ನೋಡಲಿ. ಯಾರೊಬ್ಬರಿಗೂ ಆ ಸಾಮರ್ಥ್ಯವಿಲ್ಲ.

ಸಿನಿಮಾ ನಿರ್ಮಾಣವನ್ನೇ ವಂಚನೆಯ ದಂಧೆಯಾಗಿಸಿಕೊಂಡ ಇಂಥವರಿಂದಾಗಿ ಹೋರಾಟಕ್ಕೇ ಅರ್ಥವುಂಟೆ? ಮಂಜು, ಮುನಿರತ್ನ, ರಾಮು ಥರದವರಿಗಿದು ಅರ್ಥವಾಗಬೇಕಲ್ಲ?





ಪ್ರಿಯಾಮಣಿ ನಡೆಸಿಕೊಡುವ ಡ್ಯಾನ್ಸಿಂಗ್ ಸ್ಟಾರ್, ...ಸೀಸನ್-2 ಸದ್ಯ ಜನಪ್ರಿಯ ಶೋ ಎಂಬುದರಲ್ಲಿ ಎರಡು ...ಮಾತಿಲ್ಲ. ಹಿರಿಯ ನಟ ರವಿಚಂದ್ರನ್ ಇದರ ವಿಶೇಷ ...ತಿಥಿ. ಬಹುಶಃ ರವಿಚಂದ್ರನ್ ಬೇರೆ ಚಿತ್ರಗಳಿಲ್ಲದೆ ...ಡುವಾಗಿರುವುದರಿಂದ ರಿಯಾಲಿಟಿ ಶೋನ ಮೊರೆ ...ಹೊಕ್ಕಿರಬೇಕು. ಹಾಗೇ ಪ್ರಿಯಾಮಣಿಗೂ ...ವಕಾಶಗಳಿಲ್ಲವಾದ್ದರಿಂದ ಟೀವಿ ಅನಿವಾರ್ಯವಾಗಿರಬೇಕು. ...ಮುಕ್ಕಂತೆ ಸೃಜನ್ ಲೋಕೇಶ್, ಅರುಣ್ ಸಾಗರ್‌ರದ್ದೂ ...ಇದೇ ಪರಿಸ್ಥಿತಿ. ಸದ್ಯದಲ್ಲೇ ರಾಗಿಣಿಯ ಯಾವುದೋ ...ರಿಯಾಲಿಟಿ ಶೋನ ತಯಾರಿಯ ಮಾತು ...ಕೇಳಿಬರುತ್ತಿದೆಯಾದರೂ ಅದಿನ್ನೂ ನಿಕ್ಕಿಯಾಗಿಲ್ಲ. ಇಲ್ಲಿ ...ಸಿನಿಮಾ ಜನಪ್ರಿಯತೆಯನ್ನು ಹೇಗೆ ಟೀವಿ ...ಲಾಭವಾಗಿಸಿಕೊಳ್ಳಲು ಹವಣಿಸುತ್ತೋ ಹಾಗೆಯೇ ಟೀವಿಯ ...ಖ್ಯಾತಿಯನ್ನು ತಮ್ಮ ಲಾಭವನ್ನಾಗಿ ಮಾಡಿಕೊಳ್ಳುವತ್ತ ಸಿನಿಮಾ ...ಮಂದಿಯೂ ಹಿಂದೆ ಬಿದ್ದಿಲ್ಲ.

ದುಪ್ಪಟ್ಟು ರೇಟು


ಇಲ್ಲಿ ದುಡ್ಡು ಬಿಟ್ಟರೆ ಬೇರೆ ಕಾರಣಗಳಿಲ್ಲ. ಯಾರೇ ...ಟ ಏನೇ ಮಾಡಿದರೂ ಸಿನಿಮಾ ಚೆನ್ನಾಗಿಲ್ಲದೆ ಹೋದರೆ ...ನೂ ಪ್ರಯೋಜನವಿಲ್ಲ. ಇದು ವಾಸ್ತವ. ಟೀವಿ ಶೋಗಳು, ...ಸ್ಯಾಟಲೈಟ್ ರೈಟ್ಸ್ ಯಾವುದೂ ಇರದಿದ್ದ ಕಾಲಕ್ಕೆ ...ಬಂದಬಂದ ಚಿತ್ರಗಳನ್ನೆಲ್ಲ ಪ್ರೇಕ್ಷಕ ಕಣ್ಣು ಮುಚ್ಚೇನೂ ...ಒಪ್ಪಿಕೊಂಡಿಲ್ಲ. ಯಾವತ್ತು ಟೀವಿಗಳು ಸಿನಿಮಾ ಒಂದರ ...ಶೂಟಿಂಗ್ ಶುರುವಾಗುತ್ತಿದ್ದಂತೆ ಅದರ ಹೀರೋ, ಡೈರೆಕ್ಟರ್, ...ಕೆ, ಹಾಡುಗಳನ್ನು ನೋಡಿ ಮುಂಗಡವಾಗಿ ರೊಕ್ಕ ...ಚೆಲ್ಲತೊಡಗಿದವೋ ಅದರ ಅಡ್ಡ ಪರಿಣಾಮವೆಂಬಂತೆ ...ಹೀರೋಗಳ ಪಿತ್ಥ ನೆತ್ತಿಗೇರಿತು. ತಾನು ಹೀರೋ ಎಂಬ ...ಕಾರಣಕ್ಕೇ ಟೀವಿಗಳು ಕೋಟಿಕೋಟಿ ಸುರಿಯುತ್ತಿವೆಯೆಂದು ...ಹೀರೋ ಭ್ರಮೆಗೆ ಬಿದ್ದ. ಟೀವಿ ರೈಟ್ಸೇ ಎರಡು ಕೋಟಿ ...ಬರುವಾಗ ತನ್ನ ಸಂಭಾವನೆ ಕೇವಲ ಐವತ್ತೋ ಎಪ್ಪತ್ತೋ ...ಲಕ್ಷವಿದ್ದರೆ ಅದು ತನಗೇ ಅವಮಾನವೆಂದು ಹಮ್ಮಿಗೆ ...ಬಿದ್ದ ಹೀರೋ ಟೀವಿಗಳು ಕೊಡುವ ಮೊತ್ತವನ್ನೇ ತನ್ನ ...ಸಂಭಾವನೆ ದರಕ್ಕೇರಿಸಿಬಿಟ್ಟ.

ದರ್ಶನ್, ಸುದೀಪ್, ಯಶ್‌ರಂಥ ಸ್ಟಾರ್‌ಗಳಿದ್ದರೆ ...ಸಿನಿಮಾ ನಿರ್ಮಾಣ ಇನ್ನೂ ಸುಲಭವಾಗಲೆಂದೇ ಟೀವಿಗಳು ...ಮುಂಗಡವಾಗಿ ದುಡ್ಡು ಕೊಡುತ್ತಿದ್ದದ್ದು ಕಾಲಕ್ರಮೇಣ ...ಹೀರೋಗಳ ಕಾಲ್‌ಶೀಟ್ ಮೊತ್ತವಾಗಿ ಬದಲಾಯಿತು. ...ಸಿನಿಮಾಗತಿ ಹಾಳಾದರೇನು ತನ್ನ ಜೇಬು ತುಂಬಿದರೆ ...ಸಾಕೆಂಬ ದುರಾಶೆಗೆ ಹೀರೋ ಬಿದ್ದ. ಎರಡು ಕೋಟಿಯಷ್ಟಿದ್ದ ...ಪುನೀತ್ ರೇಟು ರಾತ್ರೋರಾತ್ರಿ ನಾಲ್ಕು ಕೋಟಿಗೇರಿತು. ...ಷ್ಟೇ ಪಡೆಯುತ್ತಿದ್ದ ದರ್ಶನ್ ತನ್ನ ಹೆಸರಿಗೆ ಹುಟ್ಟುವ ...ಟೀವಿ ರೈಟ್ಸ್ ಅನ್ನೇ ತನ್ನ ಸಂಭಾವನೆಯೆಂದು ...ಘೋಷಿಸಿಕೊಂಡ. ನೀನೇನೂ ಕೈಯಿಂದ ಹಾಕಬೇಡ. ...ಟೀವಿಯವರು ಕೊಡುತ್ತಾರಲ್ಲ ಅಷ್ಟು ಕೊಟ್ಟುಬಿಡು ಸಾಕು... ...ಎಂದು ಸುದೀಪ್ ವರಸೆ ಶುರುವಿಟ್ಟ. ದುನಿಯಾ ವಿಜಿ, ...ಲೂಸ್ ಮಾದ, ಪ್ರಜ್ವಲ್, ಅಜಯ್‌ರಾವ್ ಎಲ್ಲರೂ ...ಟೀವಿ ಹಕ್ಕಿನ ರೇಟಿನ ಆಧಾರದ ಮೇಲೆಯೇ ತಮ್ಮ ಸಂಭಾವನೆ ಹೆಚ್ಚಿಸಿಕೊಂಡರು. ಅಲ್ಲಿಗೆ ಸಿನಿಮಾ ಗುಣಮಟ್ಟ, ನಿರ್ಮಾಣದ ಖರ್ಚಿಗೆಂದು ಟೀವಿಗಳು ಕೊಡುತ್ತಿದ್ದ ಕಾಸು ಹೀರೋಗಳ ಸಂಭಾವನೆಯಾಗಿ ಬದಲಾಯಿತು. ವಿಪರ್ಯಾಸವೆಂಬಂತೆ ಹೀರೋಗಳು ಕೊಬ್ಬಿದರೇ ಹೊರತು ಗುಣಮಟ್ಟದ ಸಿನಿಮಾಗಳು ಬರಲಿಲ್ಲ. ನಿರ್ಮಾಪಕ ಕೋಟಿ ಕೋಟಿ ಸುರಿದು ಬಸವಳಿದರೆ ಹೀರೋಗಳು ಜೇಬು ತುಂಬಿಸಿಕೊಂಡರು, ಶೋಕಿಗಿಳಿದರು.




ರಜನಿ ಮಾದರಿ

ಪುನೀತ್ ನಟಿಸಿದ ಪರಮಾತ್ಮ, ಅಣ್ಣಾಬಾಂಡ್, ನಿನ್ನಿಂದಲೇ ಥರದ ಚಿತ್ರಗಳು ಇನ್ನಿಲ್ಲದಂತೆ ನಷ್ಟ ಕಂಡವಾದರೂ ಆದ ನಷ್ಟಕ್ಕೆ ಹೀರೋ ಯಾವ ಹೊಣೆಯನ್ನೂ ಹೊರಲಿಲ್ಲ. ಹಾಗೇ ದರ್ಶನ್‌ನ ಚಿತ್ರಗಳೂ ಒಂದರ ಮೇಲೊಂದು ತೋಪಾದರೂ ನಿರ್ಮಾಪಕನ ನೆರವಿಗೆ ಯಾರೂ ಬರಲಿಲ್ಲ. ಇದು ಒಬ್ಬಿಬ್ಬರು ಹೀರೋಗಳ ದೌಲತ್ತಷ್ಟೇ ಆಗಿದ್ದರೆ ಆ ಮಾತು ಬೇರೆ. ಸುದೀಪ್, ಪ್ರಜ್ವಲ್, ಲೂಸ್ ಮಾದ, ದುನಿಯಾ ವಿಜಿ, ಯಶ್ ಯಾರೊಬ್ಬರೂ ನಿರ್ಮಾಪಕನ ಕಷ್ಟಕ್ಕೆ ಕೈ ಜೋಡಿಸಲಿಲ್ಲ. ಯಾವ ಬಂಡವಾಳವನ್ನೂ ಹಾಕದೆ, ಯಾವ ರಿಸ್ಕಿಗೂ ತಲೆಕೊಡದೆ, ಯಾವುದೇ ಜವಾಬ್ದಾರಿ, ಹೊಣೆಗಾರಿಕೆಗೂ ಬದ್ಧರಾಗದೇ ಕೇವಲ ಮುಖ ತೋರಿಸಿ ದುಡ್ಡು ಬಾಚಿಕೊಳ್ಳುವ ಹೀರೋಗಳು ತಮ್ಮನ್ನು ಈ ಮಟ್ಟಕ್ಕೇರಿಸಿದ ನಿರ್ಮಾಪಕರಿಗಾಗಲಿ, ಕನ್ನಡ ಪ್ರೇಕ್ಷಕರಿಗಾಗಲಿ ಸಣ್ಣದೊಂದು ಕೃತಜ್ಞತೆಯ ಹೊಣೆಯನ್ನೂ ಹೊತ್ತವರಲ್ಲ.



ಗಾಂಧಿನಗರದ ಇತಿಹಾಸದುದ್ದಕ್ಕೂ ಹೀರೋಗಳು ದೇವರಾದರೇ ಹೊರತು ಅವರಿಂದ ಚಿತ್ರರಂಗ ಪಡೆದದ್ದು ಏನೇನೂ ಇಲ್ಲ. ತನ್ನ ಹೆಸರು, ವರ್ಚಸ್ಸಿನ ಮೇಲೆ ಕೋಟಿಗಟ್ಟಲೆ ಸುರಿದು ನಷ್ಟ ಮಾಡಿಕೊಂಡ ನಿರ್ಮಾಪಕನಿಗೆ ಒಂದಲ್ಲ ಒಂದು ರೀತಿಯಲ್ಲಿ ಲಾಭ ಮಾಡಿಕೊಡಲೆತ್ನಿಸುವ ರಜನಿ ಮಾನವೀಯತೆಯ ಯಾವ ಗಂಧವೂ ಇವರಲ್ಲಿಲ್ಲ. ಇವರ ಹೀರೋಗಿರಿಗೆ ಕಿಮ್ಮತ್ತು ಹುಟ್ಟುವುದು ನಿರ್ದೇಶಕನ ಜಾಣ್ಮೆ ಮತ್ತು ನಿರ್ಮಾಪಕನ ರೊಕ್ಕದಿಂದಾಗಿಯೇ ಹೊರತು ಸಿನಿಮಾ ಹೇಗೇ ಇರಲಿ ಹೀರೋ ಇದ್ದರೆ ಸಾಕೆಂಬ ಹೆಗ್ಗಳಿಕೆಯ ಯಾವೊಬ್ಬ ನಟನೂ ಕನ್ನಡದಲ್ಲಿಲ್ಲ.

ಬಹುಶಃ ಇದು ಅರ್ಥವಾಗಿದ್ದರೆ ಹೀರೋಗಳು ಈ ಪಾಟಿ ಸೊಕ್ಕುತ್ತಿರಲಿಲ್ಲ. ಈಗ ನಿರ್ಮಾಪಕರು ತಿರುಗಿಬಿದ್ದಿದ್ದಾರೆ. ಅದಕ್ಕೆ ಅವರು ನೀಡುತ್ತಿರುವ ಕಾರಣ ಕ್ಷುಲ್ಲಕವೆನಿಸಿರಬಹುದು. ರಿಯಾಲಿಟಿ ಶೋನಲ್ಲಿ ಹೀರೋಗಳಿದ್ದಾರೆಂದು ಜನ ಟೀವಿ ನೋಡುತ್ತಾ ಕೂತು ಥೇಟರಿಗೆ ಬರುತ್ತಿಲ್ಲ ಎಂಬ ನಿರ್ಮಾಪಕರ ವಾದಕ್ಕೆ ಸಮರ್ಥನೆಗಳಿಲ್ಲದಿರಬಹುದು. ಆದರೆ ಹೀರೋಗಳ ಕ್ರೌರ್ಯ ಮತ್ತು ದುಡ್ಡಿನ ದಾಹದ ಬಗ್ಗೆ ಯಾರಲ್ಲೂ ಎರಡು ಮಾತಿಲ್ಲ. ನಿರ್ಮಾಪಕರ ಇತರೇ ಬೇಡಿಕೆಗಳ ಕುರಿತಂತೆ ಅವರೊಳಗೇ ಸ್ಪಷ್ಟತೆಯಿಲ್ಲ. ರಿಯಾಲಿಟಿ ಶೋಗಳಿಂದಾಗಿ ಸಿನಿಮಾಗಳು ಸೊರಗುತ್ತಿವೆ ಎಂಬುದಕ್ಕೂ ಯಾವುದೇ ಆಧಾರವಿಲ್ಲ. ಹಿಂದೆ ಕೇರಳದಲ್ಲಿ ಇದೇ ರೀತಿಯ ಸಮಸ್ಯೆ ತಲೆದೋರಿದಾಗ ಮೋಹನ್‌ಲಾಲ್, ಮಮ್ಮುಟ್ಟಿ ಸೇರಿದಂತೆ ಮಲೆಯಾಳಂ ಚಿತ್ರರಂಗದ ನಟನಟಿಯರೆಲ್ಲ ಏಕಾಏಕಿ ತಮ್ಮ ಸಂಭಾವನೆಯನ್ನು ಅರ್ಧಕ್ಕರ್ಧ ಇಳಿಸಿಕೊಂಡರು. ಅದು ಅನ್ನ ಕೊಟ್ಟ ಸಿನಿಮಾಕ್ಕೆ ಅವರು ತೀರಿಸಿದ ಋಣ ಮತ್ತು ತೋರಿದ ಕೃತಜ್ಞತೆ.




ಈಗದು ಗಾಂಧಿನಗರದ ಸರದಿ. ತಮ್ಮ ಹೆಸರು ಮತ್ತು ವರ್ಚಸ್ಸನ್ನು ನಂಬಿ ಕೋಟಿ ಕೋಟಿ ಸುರಿದು ಕೈಸುಟ್ಟುಕೊಂಡ ನಿರ್ಮಾಪಕರ ಯಾವ ದುರ್ಗತಿಗೂ ಹೀರೋಗಳು ಜವಾಬ್ದಾರರಲ್ಲ ಎನ್ನುವುದಾದರೆ ಅವರು ಪಡೆಯುವ ಕೋಟಿ ಕೋಟಿಯ ಸಂಭಾವನೆಗಾದರೂ ಗ್ಯಾರಂಟಿಯಿರಬೇಕಲ್ಲ? ಅಂಗಡಿಯಲ್ಲಿ ಕೊಳ್ಳುವ ಯಾವುದೇ ಉತ್ಪನ್ನಕ್ಕಾದರೂ ಒಂದು ಗ್ಯಾರಂಟಿಯಿರುತ್ತದೆ. ಹಾಕಿದ ದುಡ್ಡಿಗೊಂದು ಹೊಣೆಗಾರಿಕೆಯಿದ್ದೇ ಇದೆ. ಆದರೆ ಹೀರೋಗಳು ಪಡೆಯುವ ಸಂಭಾವನೆಗೆ ಅವರು ಗ್ಯಾರಂಟಿ ಕೊಡಲೇಬೇಕಲ್ಲವೆ? ಹಾಗೊಮ್ಮೆ ಹಾಕಿದ ದುಡ್ಡು ಬರದೇ ಹೋದರೆ ಪಡೆದ ಸಂಭಾವನೆಯಿಂದ ನಷ್ಟ ತುಂಬಿಸಿಕೊಡಬೇಕಲ್ಲವೆ?

ಕನಿಷ್ಠ ಈಗಲಾದರೂ ಕನ್ನಡದ ಸ್ಟಾರ್‌ಗಳು ಮನುಷ್ಯರಾಗಬೇಕಿದೆ. ತಮ್ಮ ಸಂಭಾವನೆಯನ್ನು ಟೀವಿ ರೈಟ್ಸ್‌ನ ಮೊತ್ತಕ್ಕೇರಿಸಿಕೊಂಡ ಹೀರೋಗಳೆಲ್ಲರೂ ಕೇರಳದ ಹೀರೋಗಳ ಮೇಲ್ಪಂಕ್ತಿಯನ್ನು ಅನುಸರಿಸಿದರಷ್ಟೇ ಚಿತ್ರರಂಗ ಉಳಿದೀತು. ಇಲ್ಲದೆ ಹೋದರೆ ಹೀರೋಗಳೇ ಮುಂದೊಮ್ಮೆ ತಮ್ಮ ಚಿತ್ರಕ್ಕೆ ತಾವೇ ಬಂಡವಾಳ ಹಾಕಬೇಕಾಗುತ್ತದೆ. ಈ ನಿಟ್ಟಿನಲ್ಲಿ ವಾಣಿಜ್ಯ ಮಂಡಳಿ ಈಗಲಾದರೂ ಧೈರ್ಯ ಮಾಡುತ್ತಾ? ಹೀರೋಗಳ ಈಗಿನ ಸಂಭಾವನೆಯನ್ನು ಅರ್ಧಕ್ಕಿಳಿಸುವುದು ಬಿಟ್ಟರೆ ಕನ್ನಡ ಚಿತ್ರರಂಗದ ಉಳಿವಿಗೆ ಬೇರೆ ದಾರಿ ತಾನೇ ಎಲ್ಲಿದೆ?

■ ರಾ. ಸೋಮನಾಥ್

ಬಾಮಾ ಡ್ರಾಮಾ ಯಾಮಾರಿದರೆ ಪಂಗನಾಮ!



ಬಹುಶಃ ಬಾಮಾ ಎಂಬ ಟೋಪಿ ಗಿರಾಕಿ ತಲೆಹಾಕದೇ ಹೋಗಿದ್ದರೆ ನಿರ್ಮಾಪಕರ ಹೋರಾಟಕ್ಕೊಂದು ತೂಕ ಮತ್ತು ಗಂಭೀರತೆಯಿರುತ್ತಿತ್ತೋ ಏನೋ. ಇಲ್ಲಿಗೆ ಹತ್ತು ವರ್ಷದ ಹಿಂದೆ ಯಾವುದೋ ತಗಡು ಸಿನಿಮಾ ತೆಗೆದು ತಾನೂ ಒಬ್ಬ ನಿರ್ಮಾಪಕನೆಂದು ವಾಣಿಜ್ಯ ಮಂಡಳಿಗೆ ವಕ್ಕರಿಸಿದವನು ಬಾಮಾ ಹರೀಶ. ಅಲ್ಲಿಂದಾಚೆಗೆ ತನ್ನ ಬ್ಯಾನರ್ ಮಾರಿಕೊಂಡು ಯಾರೋ ಮಾಡಿದ ಸಿನಿಮಾಕ್ಕೆ ತನ್ನ ಹೆಸರು ಹಾಕಿಕೊಂಡೇ ಚಾಲ್ತಿಯಲ್ಲಿದ್ದಾನೆ. ಸಿನಿಮಾ ಮಾಡುವ ಯೋಗ್ಯತೆ ಹಾಳಾಗಲಿ ವಾಣಿಜ್ಯ ಮಂಡಳಿಯ ಹೊಸ್ತಿಲು ಮೆಟ್ಟುವುದಕ್ಕೂ ಲಾಯಕ್ಕಲ್ಲದ ಬಾಮಾ ಈಗ ನಿರ್ಮಾಪಕರ ಹೆಸರಲ್ಲಿ ಬೀದಿ ಡ್ರಾಮಾ ಶುರುವಿಟ್ಟಿದ್ದಾನೆ.




ಅದು ಆತನ ಪ್ರಚಾರದ ಹುಚ್ಚು. ಮೊನ್ನೆಯಷ್ಟೇ ಈತ ಸಿನಿಮಾ ಕ್ರೀಡಾ ಕೂಟ ಮಾಡಲು ಹೋಗಿ ಮಂಗಳಾರತಿ ಮಾಡಿಸಿಕೊಂಡ. ಸಿನಿಮಾ ನಟ-ನಟಿಯರೆಲ್ಲ ಸೇರಿಕೊಂಡು ಯಾವ್ಯಾವುದೋ ಕ್ರೀಡೆ ಆಡುವ ಮೂಲಕ ಭರ್ಜರಿ ಗಿಮಿಕ್ ಮಾಡುವ ಪ್ರಚಾರ ಕೊಟ್ಟೇ ಬಾಮಾ ಮುಖ್ಯಮಂತ್ರಿಗಳನ್ನು ಆಹ್ವಾನಿಸಿದ್ದ. ಈತನ ಹಿನ್ನೆಲೆ ಗೊತ್ತಿಲ್ಲದೆ ಸಿಎಂ ಸಿದ್ದರಾಮಯ್ಯ ಚಿತ್ರನಟರೆಲ್ಲರೂ ಸೇರುತ್ತಾರೆಂದು ಭಾವಿಸಿ ಉದ್ಘಾಟನೆಗೂ ಬಂದಿದ್ದಾಯ್ತು. ಮುಖ್ಯಮಂತ್ರಿಯೇ ಬರುತ್ತಾರೆಂದ ಮೇಲೆ ಕನ್ನಡ ಚಿತ್ರರಂಗದ ಹಿರಿಕಿರಿ ಸ್ಟಾರ್‌ಗಳೆಲ್ಲ ಬರಬೇಕಲ್ಲವೆ?



ಆದರೆ ಬಂದದ್ದು ಶರಣ್, ರವಿಶಂಕರ್, ಗಣೇಶ್ ಇತ್ಯಾದಿ ಮೂರೂ ಮುಕ್ಕಾಲು ನಟರು. ಯಾಮಾರಿ ರಾಗಿಣಿ ಬಂದಿದ್ದೇ ಜನರಾಗಲಿ ಸ್ಟಾರ್‌ಗಳಾಗಲಿ ಇಲ್ಲವೆಂದು ಏಕಾಮಕ್ಕಾ ಬಾಮಾ ಮುಖಕ್ಕುಗಿದಳು. ಪುಡಿಪುಡಿ ನಟರು ಬೆರಳೆಣಿಕೆಯ ಪ್ರೇಕ್ಷಕರನ್ನು ಕಂಡಿದ್ದೇ ಸಿನಿಮಾ ಹೆಸರಲ್ಲಿ ತನ್ನನ್ನು ಯಾಮಾರಿಸಿದ ಬಾಮಾ ಕರೆದದ್ದೇ ಮುಖ್ಯಮಂತ್ರಿಗಳೂ ಮುಖಕ್ಕುಗಿದರು. ಬಾಮಾ ಹುಚ್ಚಾಟಗಳು ಒಂದೆರಡಲ್ಲ. ಏಕೆಂದರೆ ಮಾಡಲು ಕೆಲಸವಿಲ್ಲ, ರೊಕ್ಕ ಹುಟ್ಟುತ್ತಿಲ್ಲ, ಯಾರೂ ನಂಬುತ್ತಿಲ್ಲ.



ಸಿನಿಮಾ ಕ್ರೀಡಾಕೂಟಕ್ಕೆ ಬಾರದೇ ತನ್ನನ್ನು ಅವಮಾನಿಸಿದ ಹೀರೋಗಳ ಮೇಲೆ ಕತ್ತಿ ಮಸೆಯುತ್ತಲೇ ಇದ್ದ ಬಾಮಾಗೊಂದು ಕಾರಣ ಬೇಕಿತ್ತು. ತನ್ನಂತೆ ನಿರುದ್ಯೋಗಿಗಳಾಗಿದ್ದ ಮುಸುರಿ ಕೇಶವನಂಥವರನ್ನು ಜೊತೆ ಹಾಕಿಕೊಂಡ. ಸಾಲದ್ದಕ್ಕೆ ಟೀವಿ ಚಾನಲ್‌ಗಳಿಂದಲೂ ಅಷ್ಟಿಷ್ಟು ಲಾಭ ಮಾಡಿಕೊಳ್ಳಬೇಕಲ್ಲ, ಅದಕ್ಕೆಂದು ಬಾಮಾ ಗ್ಯಾಂಗ್ ಹುಟ್ಟುಹಾಕಿದ್ದೇ 'ರಿಯಾಲಿಟಿ ಶೋ' ವಿರೋಧಿ ಹೋರಾಟ. ಎಲ್ಲಿಯವರೆಗೆ ಬಾಮಾಗೀಮಾನಾಮಾ ಥರದ ಸವಕಲು ನಿರ್ಮಾಪಕರು ಹೋರಾಟದ ಮುಂಚೂಣಿಯಲ್ಲಿರುತ್ತಾರೋ ಅಲ್ಲಿಯತನಕ ಹೋರಾಟಕ್ಕೂ ಬೆಲೆಯಿಲ್ಲ, ಹೀರೋಗಳೂ ಜಗ್ಗುವುದಿಲ್ಲ.



ಕತೆ

ಪರದೆ

ಅದು ನಮ್ಮನೆ. ಅದಕ್ಕೆ ಮೂರು ಕೋಣೆಗಳಿವೆ. ಮೊದಲನೆಯದು ತೆರೆದ ಕೋಣೆ.

ಅದಕ್ಕೊಂದು ಶಟರ್ ಹಾಕಿಸಬೇಕೆಂದು ಹಾಗೆಯೇ ಬಿಟ್ಟಿದ್ದ ಅಪ್ಪ ಎರಡನೆಯ ಕೋಣೆಯ ಬಾಗಿಲಿಗೆ ಒಂದು ಪರದೆ ಇದೆ. ಅದು ಮುಂಚೆ ಇರಲಿಲ್ಲ. ನಮ್ಮ ಅಕ್ಕ ದೊಡ್ಡವಳಾದ ಮೇಲೆ ಬಂತು. ಆಮೇಲೆ ನಮ್ಮ ಮನೆಯಲ್ಲಿ ಸಾಕಷ್ಟು ಬದಲಾವಣೆಗಳು ಆದವು. ಮೂರನೆಯದು ಅಡುಗೆ ಕೋಣೆ. ನಮ್ಮಕ್ಕ ಉಂಡರೂ, ಸುತ್ತಾಡಿದರೂ ಈ ಎರಡು ಕೋಣೆಗಳಲ್ಲೇ. ಮುಂದಿನ ಕೋಣೆಗೆ ಬಾಗಿಲು ಇಲ್ಲವಾದ್ದರಿಂದ ಆ ಕೋಣೆಗೆ ಕೇವಲ ರಾತ್ರಿ ಹೊತ್ತಿನಲ್ಲಿ ಮಾತ್ರ ಅವಳಿಗೆ ಪ್ರವೇಶ.

ಮನೆಗೆ ಹೊರಗಿನವರು ಯಾರೇ ಬಂದರೂ ಮುಂದಿನ ಕೋಣೆಯಲ್ಲಿ ಕೂಡಿಸಿ, ಮಾತನಾಡಿಸಿ ಕಳಿಸುತ್ತಿದ್ದ ಅಪ್ಪ ಅವರು ಇದ್ದಷ್ಟು ಹೊತ್ತು ಎರಡನೆಯ ಕೋಣೆಯ ಬಾಗಿಲು ಹಾಕಿ ಪರದೆಯನ್ನು ಸರಿಸುತ್ತಿದ್ದ. ಬರೀ ಅಪ್ಪ ಅಲ್ಲ ಅಮ್ಮ ಕೂಡ ಅಷ್ಟೇ. ಅದೇ ಅಭ್ಯಾಸ ಮನೆಯಲ್ಲಿ ಚಿಕ್ಕವನಾದ ನನಗೂ ಬಂತು.

ನಮ್ಮ ಅಜ್ಜಿಗೆ ಅದು ಅಭ್ಯಾಸವಾಗಲಿಲ್ಲ. ಆ ವಯಸ್ಸಿನಲ್ಲಿ ಕೂಡ ಅಜ್ಜಿಗೆ ಸುತ್ತಾಡೊ ಚಟ. ಕಟ್ಟಿ ಹಾಕಿದ್ರೂ ಒಂದು ಕಡೆ ಇರೋ ಜಾಯಮಾನವಲ್ಲ. ಕಷ್ಟಪಟ್ಟು ಬದುಕಿದ ಕಾಲುಗಳು ಅವು. ಅತ್ತಿತ್ತ ಸುತ್ತಾಡದಿದ್ದರೆ ಅವುಗಳಿಗೆ ಏನೂ ತೋಚುವುದಿಲ್ಲ. ಹಾಗೆ ಸುತ್ತಾಡುವುದು ಅಮ್ಮನಿಗೆ ಹಿಡಿಸುವುದಿಲ್ಲ. ಮುದುಕರಾದ ಮೇಲೆ 'ಅಲ್ಲಾ... ಬಿಸ್ಮಿಲ್ಲಾ' ಎಂದು ಒಂದು ಮೂಲೆಯಲ್ಲಿರಬೇಕೆಂಬುದು ಅಮ್ಮನ ಸಿದ್ಧಾಂತ. ಜಗತ್ತು ಕೊಚ್ಚಿಹೋದರೂ ಸರಿ ತಾನು ಕುಳಿತಿರುವ ಸ್ಥಳದಿಂದ ಕದಲಬಾರದೆನ್ನುತ್ತಾಳೆ ಅಮ್ಮ. ಅಜ್ಜಿ ಅದಕ್ಕೆ ಬಿಲ್‌ಕುಲ್ ಸಾಧ್ಯವಿಲ್ಲ ಎನ್ನುತ್ತಾಳೆ. ಅಲ್ಲಿ ಇಲ್ಲಿ ಹೋಗುತ್ತಾಳೆ. ಇಲ್ಲವೇ ಆ ಮನೆ ಈ ಮನೆ ಸುತ್ತುತ್ತಾಳೆ. ಸ್ವಲ್ಪ ಪರಿಚಯವಾದರೆ ಸಾಕು, ಗಂಟೆಗಟ್ಟಲೇ ಅವರ ಮನೆಯಲ್ಲಿ ಠಿಕಾಣಿ ಹೂಡುತ್ತಾಳೆ. 'ಇದು ಟೌನ್. ಇಲ್ಲಿ ಇಂಥದನ್ನೆಲ್ಲಾ ಮಾಡಬಾರದು' ಎಂದರೆ ಕೇಳುವುದಿಲ್ಲ.

'ಇದೇನು ಊರಲ್ಲವಾ....ಇವರೇನು ಮನುಷ್ಯರಲ್ವಾ?' ಎಂದು ಪ್ರಶ್ನಿಸುತ್ತಾಳೆ. ಅಜ್ಜಿಯ ದೇಹಕ್ಕೆ ವಯಸ್ಸಾಗಿದೆ ಆದರೆ ಬಾಯಿ ತುರಿಕೆ ಕಡಿಮೆಯಾಗಿಲ್ಲ. ಹೊಡಿತಾಳೋ, ಹೊಡಿಸಿಕೊಳ್ಳುತ್ತಾಳೋ ಬೇರೆ ವಿಷಯ. ಆದರೆ ಏನಾದರೂ ಹೆಚ್ಚು ಕಡಿಮೆಯಾದರೆ ಮಾತ್ರ ಎಂಥ ಜಗಳಕ್ಕಾದರೂ ಸೈ ಎನ್ನುತ್ತಾಳೆ. ಅವರು ಒಂದು ಹೇಳಿದರೆ ನಮ್ಮಜ್ಜಿ ಹತ್ತು ಹೇಳುತ್ತಾಳೆ. ಇನ್ನು ಬೈಗುಳ ಪುರಾಣಕ್ಕಂತೂ ಕೊನೆಯೇ ಇಲ್ಲ. ಆಕೆಯ ಹಳ್ಳಿಸೊಗಡಿನ ಒರಟು ಗಾದೆ ಮಾತುಗಳನ್ನು ಕೇಳಿಸಿಕೊಂಡರೆ ಹೆಂಗಸರಾದರೂ, ಗಂಡಸರಾದರೂ ನಾಚಿಕೆಯಿಂದ ತಲೆ ತಗ್ಗಿಸಬೇಕು. ಆದ್ದರಿಂದಲೆ ಹಳ್ಳಿಯಲ್ಲಿ ನಮ್ಮ ಅಜ್ಜಿ ತಂಟೆಗೆ ಯಾರು ಹೋಗುವುದಿಲ್ಲ.

ಇಂತಹ ರೌಡಿ ಹಿನ್ನೆಲೆ ಇರುವ ನಮ್ಮಜ್ಜಿ ನಮ್ಮಮ್ಮನಿಗೆ ಮಾತ್ರ ಹೆದರುತ್ತಾಳೆ. ಬೈತಾಳೆ, ಹೊಡಿತಾಳೆ ಅಂತ ಅಲ್ಲ-ಸಮಯಕ್ಕೆ ಸರಿಯಾಗಿ ಊಟ ಹಾಕುವುದಿಲ್ಲವೆಂದು.

ಈ ಬಲಹೀನತೆ ಇರುವುದರಿಂದಲೆ ನಮ್ಮಜ್ಜಿಗೆ ಕೆಲವು ಕಷ್ಟಗಳು ಬಂದವು. ಮೈಯಲ್ಲಿ ಕಸುವು ಇರುವಷ್ಟು ದಿನ ಈ ಸಮಸ್ಯೆ ಇರಲಿಲ್ಲ. ಅಮ್ಮನೊಂದಿಗೆ ಜಗಳವಾದರೆ ಮಾತಿಗೆ ಮಾತು, ಏಟಿಗೆ ಏಟು ಹಾಕಿ ಸರ್ರನೆ ಬಸ್ ಹತ್ತಿ ಹಳ್ಳಿಗೆ ಹೊರಟುಬಿಡುತ್ತಿದ್ದಳು. ಅಲ್ಲಿ ಕೂಲಿನಾಲಿ ಮಾಡಿಯಾದರೂ ಬದುಕುತ್ತಿದ್ದಳಾಗಲಿ ಸಾಕಷ್ಟು ದಿನಗಳವರೆಗೆ ಈ ಕಡೆ ತಿರುಗಿ ನೋಡುತ್ತಿರಲಿಲ್ಲ. ನಮ್ಮಪ್ಪ ಕೂಡಾ ಅಜ್ಜಿ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಈ ಅತ್ತೆ-ಸೊಸೆ ಜಗಳದಲ್ಲಿ ನಲುಗಿ ಹೋಗೋದು ಏಕೆಂದು ಇದ್ದು ಬಿಡುತ್ತಿದ್ದ ಅಮಾವಾಸ್ಯೆಗೋ ಹುಣ್ಣಿಮೆಗೋ ಹೋಗಿ ಭತ್ಯೆ ಕೊಟ್ಟು ಬರುತ್ತಿದ್ದ. ಆದರೂ ಅಜ್ಜಿಗೆ ಯಾಕೋ ಆ ಬದುಕೆ ಚೆನ್ನಾಗಿರುತ್ತಿತ್ತು. ಹೆಸರಿಗೆ ಮಗನಾಗಲಿ ತನ್ನ ಕಷ್ಟ ಸುಖ ವಿಚಾರಿಸುವುದಿಲ್ಲ. ಇವರ ಮನೆಗೆ ಬಂದು ಪುಗ್ಸಟ್ಟೆ ಊಟ ಮಾಡಬೇಕಾದ ಕರ್ಮವೇಕೆ? ಇವನಿಗಿಂತ ಬೇರೆಯವರು ಮೇಲು. ಮನೆಗೆ ಹೋಗಿ ಕುಳಿತರೆ ಒಂದು ಹೊತ್ತಿನ ಊಟವಾದ್ರೂ ಮನಃಪೂರ್ತಿಯಾಗಿ ನೀಡುತ್ತಾರೆ. ಹೋಗಲಿ ಇವನ ಹೊಟ್ಟೆಯಲ್ಲಿ ಒಳ್ಳೆ ಹುಡುಗರು ಹುಟ್ಟಿದ್ದಾರಾ ಅಂದರೆ ಇಬ್ಬರಿಗೆ ಇಬ್ಬರೂ (ನಾನು, ಅಕ್ಕ) ಕಳ್ಳರೇ. ಅಮ್ಮನ ಮಕ್ಕಳು. ಆಯಮ್ಮ ಏನು ಹೇಳಿದರೆ ಅದನ್ನು ಕೇಳುತ್ತಾರೆ. ಆಯಮ್ಮನ ಕಡೆಗೆ ಮಾತಾಡುತ್ತಾರೆ. ಇನ್ನು ತನಗ್ಯಾರು ದಿಕ್ಕು? ಏಕಿರಬೇಕು ಇಲ್ಲಿ?

ಇದು ಅಜ್ಜಿಯ ಮನಸ್ಸಿನಲ್ಲಿಯ ಮಾತು.

ಅಜ್ಜಿ ಕಳೆದ ವಾರ ಇಲ್ಲಿಗೆ ಬಂದಿದ್ದಾಳೆ. ಬಟ್ಟೆ ಬರೆ ಜೋಡಿಸಿಕೊಂಡು ಏಕಾಏಕೀ ಇಲ್ಲಿ ಠಿಕಾಣಿ ಹೂಡಲೆಂದೇ ಬಂದಿದ್ದಾಳೆ. ಯಾವುದೇ ರೀತಿಯ ಗಲಾಟೆ ಇಲ್ಲದಂತೆ ಸುಮ್ಮನೇ ತನ್ನ ಪಾಡಿಗೆ ತಾನು ಇರುವುದಕ್ಕೆ ಬಂದಿದ್ದಾಳೆ.

ಅಜ್ಜಿಯ ಇಂಥ ರಾಜಿ ಧೋರಣೆ ಈ ಮುಂಚೆ ಯಾವತ್ತೂ ನೋಡಿರಲಿಲ್ಲ. ಇನ್ನು ಸ್ವತಂತ್ರವಾಗಿ ಬದುಕುವ ಶಕ್ತಿ ಆಕೆಗಿಲ್ಲ. ಹಳ್ಳಿಯಲ್ಲಿ ಕೂಡಾ ತುಂಬಾ ಜನ ಅಜ್ಜಿಯನ್ನು ಬೈದಿದ್ದಾರಂತೆ. 'ಈಗಲಾದರೂ ಮಗನ ಹತ್ತಿರ ಹೋಗಿ ಮಾನ ಮರ್ಯಾದೆಯಿಂದ ಬದುಕು. ಇಲ್ಲಿದ್ದರೆ ದಿಕ್ಕಿಲ್ಲದ ಸಾವು ಸಾಯ್ತೀಯಾ' ಎಂದು.

ಬೇರೆ ದಾರಿ ಕಾಣದೆ ಇಲ್ಲಿಗೆ ಬಂದು ಸಿಕ್ಕಿಹಾಕಿಕೊಂಡಿದ್ದಾಳೆ ಅಜ್ಜಿ.

"ನಾನು ಪರದಾ ಮುಚ್ಚೋದು...ನೀನು ತೆಗೆಯೋದು...ನಾನು ಮುಚ್ಚೋದು...ನೀನು ತೆಗೆಯೋದು... ಹಗಲೆಲ್ಲಾ ನನಗೆ ಇದೇ ಕೆಲ್ಸ ಆಗಿದೆ. ಮನೆಯಲ್ಲಿ ಘೋಷಾದಲ್ಲಿರೋ ಹುಡುಗಿ ಇದ್ದಾಳೆಂಬ ಜ್ಞಾನ ಕೂಡ ಇಲ್ಲದಿದ್ದರೆ ಹೆಂಗೆ? ಆದರೂ ನಿನಗೆ ಏನು ಕೆಲಸ ಇರುತ್ತದೆ ಮನೆಗೂ, ಹೊರಗೂ ಹತ್ತು ಸಲ ಸುತ್ತೋದು ಬಿಟ್ಟು" ಜೋರು ದನಿಯಲ್ಲಿ ಅಮ್ಮ.

ಯಾವುದೋ ಯೋಚನೆಯಲ್ಲಿದ್ದ ಅಜ್ಜಿ ಬೆಚ್ಚಿ ಬಿದ್ದು ಹಿಂದಕ್ಕೆ ನೋಡಿದಳು. ಯಾವಾಗ ಬಂದಳೋ ಅಮ್ಮ ಹಿಂದೆಯೇ ಬಂದು ಬಾಗಿಲ ಪರದೆ ಸರಿ ಮಾಡುತ್ತಿದ್ದಳು.

"ಹಾಳು ಪರದೆ... ಎಲ್ಲಕ್ಕೂ ಅಡ್ಡ. ಬಂದಾಗಿನಿಂದ ಲಕ್ಷ ಸಲ ಬೈಯ್ಸಿದೆ. ಎಷ್ಟು ಜಾಗ್ರತೆಯಿಂದಿದ್ದರೂ, ಈ ಮುದಿ ಜೀವಕ್ಕೆ ಗ್ಯಾಪ್ಕನೇ ಇರುವುದಿಲ್ಲ" ಮನಸ್ಸಲ್ಲಿ ಅಂದುಕೊಳ್ಳುತ್ತಲೇ ಹೊರಗೆ ಅಂದುಬಿಟ್ಟಳು ಅಜ್ಜಿ.

ಅಮ್ಮ ಮತ್ತಷ್ಟು ಸಿಡಿದೆದ್ದಳು.

"ಗ್ಯಾಪ್ಕ ಇಲ್ಲ, ತಿನ್ನೋದಕ್ಕಾದರೆ ಎಲ್ಲ ನೆನಪಿರುತ್ತದೆ. ಇನ್ನೂ ಒಂಬತ್ತು ಆಗಿಲ್ಲ, ಆಗಲೇ ನಾಷ್ಟಾ ಅಂತ ಬಂದ್ಯಲ್ಲ... ಇದು ಕೂಡಾ ಹಂಗೆ ನೆನಪಿಟ್ಕೋಬೇಕು."

ಅಜ್ಜಿಯ ಹೊಟ್ಟೆ ಉರಿದುಹೋಯಿತು. ಮರಳಿ ವಾಪಸ್ ಏನೋ ಒಂದು ಹೇಳುತ್ತಾಳೆ, ಆದರೆ ಮನಸ್ಸು ಸಮಾಧಾನ ಮಾಡಿಕೊಂಡಳು. "ಈ ಪರದಾ ಒಂದನ್ನು ನೆನಪಿಟ್ಟುಕೊಂಡ್ರೆ ಸರಿ" ಎಂದುಕೊಂಡಳು.

ಈ ನಡುವೆ ಅಜ್ಜಿಗೆ ಹಸಿವೆ ಹೆಚ್ಚಾಗುತ್ತಿತ್ತು. ಏನೇನೋ ತಿನ್ನಬೇಕೆನಿಸುತ್ತಿತ್ತು. ವಯಸ್ಸಾದರೆ ಹೀಗೆಯೆ ಇರಬೇಕೆನಿಸುತ್ತೇನೊ. ಕುರುಕಲು ತಿಂಡಿಯನ್ನು ಕೈಯಲ್ಲಿಡುತ್ತಾರೇನೋ ಎಂದು ಆಕೆಯ ಆಸೆ. ತಿಂಡಿಗೆ ಬದಲಾಗಿ ಬೈಗಳೇ ಆಕೆ ಹೊಟ್ಟೆ ತುಂಬಿಸುತ್ತಿದ್ದವು.

ಮೆಲ್ಲಗೆ ಬಗ್ಗಿ ಮೊಗಸಾಲೆಯಲ್ಲಿ ಕುಳಿತು ಮತ್ತೊಮ್ಮೆ ಪರದೆ ಕಡೆ ನೋಡಿದಳು ಅಜ್ಜಿ. ಹೂವಿನ ಚಿತ್ತಾರದ ಪರದೆ. ಅದರ ನಡುವೆ ಮಕ್ಕಾ ಚಿತ್ರವಿತ್ತು. ಬಾಗಿಲು ಕಾಣಿಸದಂತೆ ನೇತುಹಾಕಲಾಗಿತ್ತು. ಅಜ್ಜಿಗೆ ಹಳ್ಳಿಯಲ್ಲಿ ಈ ಸಮಸ್ಯೆಯೇ ಇಲ್ಲ. ತನ್ನ ಎರಡಂಕಣದ ಗುಡಿಸಲಲ್ಲಿ ತಾನೇ ಮಹಾರಾಣಿಯಾಗಿ, ಮನೆಯೊಳಕ್ಕೂ ಹೊರಕ್ಕೂ ಎಷ್ಟು ಸಲವಾದರೂ ಅಡ್ಡಾಡಬಹುದು. ಯಾರೂ ತನಗೆ ಅಡ್ಡ ಬರುವುದಿಲ್ಲ.

"ಇಲ್ಲಿ ಈ ಪರದೆಗಳು, ಅಂತರಗಳು. ಬರಿ ಮುಚ್ಚುಮರೆಯ ಮನುಷ್ಯರು. ನಿಜಹೇಳಬೇಕೆಂದರೆ ತನಗೆ ಘೋಷಾ ಎಂಬ ಮಾತೇ ಗೊತ್ತಿಲ್ಲ. ಮುಟ್ಟಾದ ನಾಲ್ಕು ದಿನ ಹುಡುಗಿಯನ್ನು ಒಂದು ಮೂಲೆ ಕೂಡಿಸಿ, ಐದನೇ ದಿನ ಕೈಗೆ ಹುಣಸೆಬಾರಲು ಕೊಟ್ಟು ದನ ಕಾಯೋಕೆ ಕಳಿಸ್ತಿದ್ರು" ಗೊಣಗಿಕೊಂಡಳು ಅಜ್ಜಿ.

ಅಜ್ಜಿಗೆ ಅಕ್ಕನ ಮುಖ ನೆನಪಿಗೆ ಬಂತು.

"ಎಲ್ಲರೂ ಆಕೆಯನ್ನು ಕೆಂಪಗಿದ್ದಾಳೆ ಅಂತಾರೆ. ಅದು ಕೆಂಪಲ್ಲ ಬಿಳುಪು. ಬಿಸಿಲು ಗಾಳಿ ಸೋಕದೆ ಬಿಳುಚಿಕೊಂಡ ಬಿಳಿ ಮುಖ. ಊದು ಮುಖ" ಪರದೆಯ ಮೇಲಿನ ಸಿಟ್ಟು ಅಕ್ಕನ ಮೇಲೆ ಹೋಗಿ ಬೈದುಕೊಂಡಳು ಅಜ್ಜಿ.

"ಯಾವ ಕೆಲಸಕ್ಕೆ ಬರ್ತಾಳೆ ಈ ಹುಡುಗಿ. ನಾಳೆ ಮದ್ವೆಯಾಗಿ ಹೆರಿಗೆ ಆದ್ರೆ ಕಣ್ಣು ನೆಲಕ್ಕೆ ಹಾಕಿ ಜೀವಕಳೆ ಇಲ್ದಂಗಾಗ್ತಾಳೆ. ಅದೇ ನಮ್ಮ ಕಾಲದಲ್ಲಿ ಆಗಿದ್ರೆ ಆ ವಯಸ್ಸಿನಲ್ಲಿ ಮರ ಏರ್ತಿದ್ವಿ, ಹುಣಸೇ ಚಿಗುರನ್ನು ಜೋಳಿಗೆ ತುಂಬಾ ತರ್ತಿದ್ವಿ. ಕೊಡಲಿ ಏಟಿಗೆ ಚೆಟ್ಟು 'ಓ' ಅಂತ ಕೂಗ್ಬೇಕು. ಸಂಜೆಗೆಲ್ಲಾ ಕಟ್ಟಿಗೆ ಹೊರೆಕಟ್ಟಿ ತಲೆ ಮೇಲೆ ಹೊತ್ಕೊಂಡು ಊರಿಗೆ ಬಂದ್ರೆ ನೋಡ್ದೋರು ಅಬ್ಬ ಅಂತ ಬಾಯಿ ತೆರೆಯಬೇಕು. ಹಾಳು ಮಕ್ಕಳು...ಘೋಷಾ ಅಂತೆ ಘೋಷಾ... ಒಂದು ನೀರಿನ ಕೊಡ ಸರಿಯಾಗಿ ತರಕ್ಕಾಗಲ್ಲ. ನೈಸ್ ಹುಡುಗಿ...."

ಅಜ್ಜಿ ಒದರುತ್ತಾ ಇರಬೇಕಾದರೆ ಅಪ್ಪ ರಬ್ಬರ್ ಚಪ್ಪಲಿಗಳನ್ನು ಮೆಟ್ಟಿಕೊಂಡು ಸದ್ದು ಮಾಡುತ್ತಾ ಎಲ್ಲಿಂದಲೊ ಮನೆಗೆ ಬಂದ. ಚಪ್ಪಲಿ ಹೊರಗೆ ಬಿಟ್ಟು ಮಲಗಿದ್ದ ಮಗುವಿಗೆ ಹೊದಿಸಿದ್ದ ಬಟ್ಟೆಯನ್ನು ಸರಿಸಿದಂತೆ ಮೆಲ್ಲಗೆ ಬಾಗಿಲಿನ ಪರದೆ ಸರಿಸಿಕೊಂಡು ಒಳಗೆ ಹೋದ. ಅದು ಮೊದಲಿನ ಹಾಗೆ ಬಂದು ನಿಂತಿತು. ಮನೆಯೊಳಕ್ಕೆ ಬಗ್ಗಿ ನೋಡುತ್ತಿದ್ದ ಅಜ್ಜಿ ಕಣ್ಣುಗಳಿಗೆ ಅಡ್ಡ ಬಂತು.

ಅಜ್ಜಿಯ ಕೋಪ ಈ ಸಲ ಅಪ್ಪನ ಮೇಲೆ ಹೋಯ್ತು, "ಸಣ್ಣ ಹುಡುಗ ಇವನು ಉಟ್ಕೋಳ್ಳಕ್ಕೆ ಬಟ್ಟೆ ಕೂಡಾ ಇರಲಿಲ್ಲ. ಮೂದೇವಿಗೆ. ಸೆರಗು ಹಿಡ್ಕೊಂಡು ಹಿಂದಿನಿಂದಲೇ ತಿರುಗುತ್ತಿದ್ದ. ಎಂಥೋನು ಹೆಂಗಾಗಿ ಬಿಟ್ಟನಲ್ಲ"

ಅಜ್ಜಿ ಹಳೆಯದನ್ನೆಲ್ಲಾ ಕೆದಕುತ್ತಾ ಹೇಳುತ್ತಾ ಅಪ್ಪನನ್ನು ಬೆಳೆಸಿ ದೊಡ್ಡವನನ್ನಾಗಿ ಮಾಡಲು ಪಟ್ಟ ಕಷ್ಟಗಳನ್ನು ನೆನಪಿಗೆ ತಂದುಕೊಳ್ಳುತ್ತಿದ್ದಳು.

ನಮ್ಮ ತಾತನಿಗೆ ಎರಡನೇ ಹೆಂಡತಿ ನಮ್ಮಜ್ಜಿ. ಆ ಕಾಲದಲ್ಲಿ ಗಂಡನಿಗೆ ಹೆಣ್ಮಕ್ಕಳು ಹೆದರಿ ಸಾಯ್ತಿದ್ರು. ನಮ್ಮಜ್ಜಿ ಕೂಡ ಆ ಹೊಡೆತಕ್ಕೆ ಆಕೆಯ ತಾತನನ್ನು ನೆನಪು ಮಾಡಿಕೊಳ್ತಿದ್ದಳಂತೆ.

"ಲೇ ನನ್ನೀಬು" ಎಂದರೆ ನಡುಗುತ್ತಾ ಬಂದು ನಿಲ್ಲುತ್ತಿದ್ದಳಂತೆ.

ಗಂಡನೆಂದರೆ ಏನೆಂದು ಕೂಡಾ ಗೊತ್ತಿಲ್ಲದ ಚಿಕ್ಕ ವಯಸ್ಸಿನಲ್ಲೆ ಅಜ್ಜಿಗೆ ಮದುವೆ ಮಾಡಿದ್ದರು. ವರನಿಗೆ ಸಾಕಷ್ಟು ವಯಸ್ಸಾಗಿತ್ತು, ಅವನಿಗೆ ಇದು ಎರಡನೆಯ ಮದುವೆ. ಯಾವಾಗಲೂ ತವರುಮನೆ ಬಡತನವನ್ನು ಬೈದುಕೊಳ್ಳುತ್ತಿದ್ದಳು ಅಜ್ಜಿ "ಕುದುಕನಿಗೆ, ರೋಗಿಷ್ಟನಿಗೆ ಕೊಟ್ಟು ಮದುವೆ ಮಾಡಿದ್ದಾರೆ. ಮಗು ಹೆರಿಗೆ ಸಮಯದಲ್ಲೆ ನೆಲಕ್ಕೆ ಬಿದ್ದು ಸತ್ತೋದ. ಹಾಳಾದವ. ಅವತ್ತಿನಿಂದ ಕಷ್ಟಗಳು ತಪ್ಪಲಿಲ್ಲ" ಎಂದು ದುಃಖಿಸುತ್ತಿದ್ದಳು.

ಮುಖದ ಮೇಲೆ ನೊಣ ಕೂತಿತು. "ಅರೆ ಇವನವ್ವನ ಹೀಗೆ ಹೊಡಿತದೆ ಮುಖಕ್ಕೆ" ಗೊಣಗುತ್ತಾ ಎರಡು ಕೈಗಳನ್ನು ಮುಖದ ಮೇಲೆ ಟಪ್ ಎಂದು ಹೊಡೆದಳು. ಆ ಸದ್ದಿಗೆ ನೊಣ ಎಲ್ಲೋ ಪರಾರಿಯಾಯಿತು.

"ಕಟ್ಟೆ ಮೇಲೆ ಕುಂತ್ಕಂಡಿದ್ರೂ ನೋಡಿ ನೋಡದಂಗೆ ಹೋಗ್ತಾನೆ. ಏನಮ್ಮಾ ನಾಷ್ಟಾ ತಿಂದ್ಯಾ ಅಂತ ಕೂಡಾ ಕೇಳಲಿಲ್ಲ. ಹಾಳಾದ ನನ್ಮಗ" ಮತ್ತೆ ಅಪ್ಪನ ಮೇಲೆ ಬೈಗುಳ ಆರಂಭಿಸಿದಳು.

"ಹೆಣ್ಣು ಮುಂಡೆ, ಗಂಡ ಇಲ್ದಿರೋ ಹೆಣ್ಣು, ಇವನನ್ನು ಬೆಳೆಸಲು ನಾನು ಯಾವತ್ತೂ ಹೆದರಲಿಲ್ಲ. ಇವ್ನು ಈಗ ಹೆದರ್ಕೋತಿದ್ದಾನೆ. ಇಷ್ಟಿಷ್ಟು ಮೀಸೆ ಬಿಟ್ಕೊಂಡು, ಈಗ ಹುಡುಗಿಗೆ ಮದ್ವೆ ಮಾಡಲು ನಡುಗ್ತಿದಾನೆ ಷಂಡ ನನ್ಮಗ."

"ಹುಡುಗೀನ ಯಾಕೋ ಘೋಷಾ ಇಟ್ಟಿದಿ" ಎಂದು ಅಜ್ಜಿ ಒಮ್ಮೆ ಅಪ್ಪನನ್ನು ಕೇಳಿದಳು. "ಎಲ್ಲಿಂದ ತರ್ತಿಯಾ ಲಕ್ಷ, ಲಕ್ಷದೊಂದಿಗೆ ಕೆಲಸ. ಘೋಷಾ ಇಲ್ದಂಗೆ ಇದ್ರೆ ನಮ್ಮಿಂದ ಆಗುತ್ತಾ, ಅಸಲು ತಡ್ಕೊಳ್ತಿವಾ? ಹುಡ್ಗಿ ಮದ್ವೆ ಅಂದ್ರೆ ತಮಾಶೇನಾ? ಮನೆಯಲ್ಲಿ ಕೂಡಿಹಾಕಿ ನಾಲ್ಕು ಉರ್ದು ಪದಗಳನ್ನು ಕಲಿಸಿದ್ರೆ ಯಾರೋ ಒಬ್ರು ಮಾಡ್ಕೋತಾರೆ. ರೊಕ್ಕಾ ಜಾಸ್ತಿ ಕೊಡದಿದ್ರೂ ಪರ್ವಾಗಿಲ್ಲ. ಹುಡುಗೀನ ಗೌರವದಿಂದ ಬೆಳೆಸಿದ್ದಾರೆ ಅಂದ್ಕೋತಾರೆ" ಎಂದ ಅಪ್ಪ.

ಅಜ್ಜಿಗೆ ಅಪ್ಪನ ಉದ್ದೇಶ ಅರ್ಥವಾಯಿತು. ವರದಕ್ಷಿಣೆಗೆ ಹೆದರಿಕೊಂಡು ಹುಡುಗಿಯನ್ನು ಘೋಷಾ ಇಟ್ಟು ಬೀದಿಯಲ್ಲಿ ದೊಡ್ಡ ಗೌರವಾನ್ವಿತನೆಂದು ಅನಿಸ್ಕೊಂತಿದ್ದಾನೆಂದು.

"ಇರೋ ಒಬ್ಬಳನ್ನು ಘೋಷಾ ಇಡೋದ್ರಲ್ಲಿನ ಶ್ರದ್ಧೆ ಬೇರೆ ಯಾವುದರಲ್ಲೂ ಇಲ್ಲ. ಹೆತ್ತ ತಾಯಿನ ಹೇಗೆ ನೋಡಿಕೋಬೇಕು. ಹೇಗೆ ಮರ್ಯಾದೆಯಿಂದ ಮಾತಾಡಿಸಬೇಕು ಗೊತ್ತಿಲ್ಲ. ನನ್ಮಗನಿಗೆ ಎಲ್ಲೂ ಕೆಲಸಕ್ಕೆ ಬಾರದ ಪ್ರತಿಷ್ಠೆ ಮಗಳನ್ನ ಘೋಷಾ ಇಡೋದ್ರಲ್ಲಿ ಬಂತು...."

ನೊಣ ಮತ್ತೆ ಬಂದು ಮುಖಕ್ಕೆ ಹೊಡೆಯಿತು. ಏನೋ ಕೆಡಕು ನಡೆಯಬಹುದೆಂದು ಹೆದರಿದಳು ಅಜ್ಜಿ.

"ಇದರ ಬಾಯಲ್ಲಿ ಮಣ್ಣು ಬೀಳ. ಇದಕ್ಕೆ ಭಯನೇ ಇಲ್ಲ" ಎಂದು ಕೈ ಬೀಸಿ ಗಾಳಿಯಲ್ಲಿ ಹಾರುತ್ತಿದ್ದ ನೊಣವನ್ನು ಗಟ್ಟಿಯಾಗಿ ಹಿಡಿದುಕೊಂಡು ಹೊಸಕಿ ಮನೆ ಅಂಗಳಕ್ಕೆ ಒಗೆದಳು. ನೊಣ ಕಣ್ಣು ತೇಲಿ ಬಿಟ್ಟು ಅಂಗಾತ ಬಿತ್ತು.

ಅಜ್ಜಿ ಅಲ್ಲಿಂದ ಎದ್ದು ನಿಧಾನವಾಗಿ ಸರಕಾರಿ ದವಾಖಾನೆ ದಾರಿ ಹಿಡಿದಳು. ಎದೆಯಲ್ಲಿ ನೋವು ಎಂದು ಎಷ್ಟೋ ಸಲ ಹೇಳಿದ್ದಳು. ಅಪ್ಪ ಒಂದೆರಡು ಸಲ ಔಷಧಿ ತಂದು ಕೊಟ್ಟಿದ್ದ. ಆಮೇಲೆ ಹಚ್ಚಿಕೊಳ್ಳಲೇ ಇಲ್ಲ. ಅಜ್ಜಿ ಏನೂ ತಲೆ ಕೆಡಿಸಿಕೊಳ್ಳದೇ ದವಾಖಾನೆಗಾದರೂ ಹೋಗಿ ಬರೋಣವೆಂದು ಎದ್ದು ನಿಂತಳು.

ಅಜ್ಜಿ ದುಪ್ಪಟಿ ಹೊದ್ದುಕೊಳ್ಳುವುದಿಲ್ಲ. ಭುಜದ ಮೇಲೆ ಬಿಳಿಯ ಹಳೆ ಬಟ್ಟೆಯನ್ನು ಟವಲ್‌ನಂತೆ ಹಾಕಿಕೊಂಡು ನಡೆಯುತ್ತಾಳೆ. ಹಳ್ಳಿಯಲ್ಲೂ ಹೀಗೆನೇ.

ಆ ದುಪ್ಪಟಿಯನ್ನು ತೆಗೆದುಕೊಳ್ಳಲು ಮೆಲ್ಲನೆ ಪರದಾ ಸರಿಸಿ ಮನೆಯೊಳಕ್ಕೆ ಹೊರಟಳು. ಮತ್ತೆ ದುಪ್ಪಟಿ ಹೊರಗೆ ಗೂಡಿನಲ್ಲೇ ಇದೆ ಎಂಬ ವಿಷಯ ನೆನಪಿಗೆ ಬಂದು ಸುಮ್ಮನಾದಳು.

ಪರದೆ ಹಾಕದೇ ತಿರುಗುತ್ತಾಳೆಂದು ಕೋಪದಿಂದ ಅಮ್ಮ ಅಜ್ಜಿಗೆ ಸಂಬಂಧಿಸಿದ ವಸ್ತುಗಳನ್ನೆಲ್ಲಾ ಹೊರಗೆ ಹಾಕಿದ್ದಳು. ತನ್ನ ಮೇಲೆ ಸೊಸೆಗಿದ್ದ ನಿರ್ಲಕ್ಷ್ಯವನ್ನು ಬೈದುಕೊಳ್ಳುತ್ತಾ ಅಜ್ಜಿ ದುಪ್ಪಟಿಯನ್ನು ತೆಗೆದುಕೊಂಡಳು. ಅದನ್ನು ಕಂಕುಳಲ್ಲಿ ಇಟ್ಟುಕೊಂಡು ಕಟ್ಟೆಯ ಮೆಟ್ಟಲಿಳಿದು ರಸ್ತೆಗೆ ಬಂದಳು. ಆ ದಿನ ಆಕೆಗೆ ಏಕೋ ದುಪ್ಪಟಿಯನ್ನು ಭುಜದ ಮೇಲೆ ಹಾಕಿಕೊಳ್ಳಲು ಮನಸ್ಸು ಬರಲಿಲ್ಲ. 'ಮುದುಕಿ ಏನಾಗುತ್ತದೆ ಬಿಡು' ಎಂದುಕೊಂಡಳೇನೊ.


ಸಾಕಷ್ಟು ಸವೆದು, ಪಟ್ಟಿ ಹರಿದಿದ್ದ ಚಪ್ಪಲಿಗೆ ಪಿನ್ ತಗುಲಿಸಿಕೊಂಡಳು. ಎದೆನೋವು ಆ ಸಮಯದಲ್ಲಿ ಜಾಸ್ತಿಯಾಗಿತ್ತೇನೋ ಮುಲುಗುತ್ತಾ ಆಸ್ಪತ್ರೆ ಸೇರಿಕೊಂಡಳು. ಅಜ್ಜಿ ಹೊರಗೆ ಹೋಗುವುದನ್ನು ಬೀದಿಯಲ್ಲಿನ ಪಕ್ಕದ ಮನೆಯ ಕಾರ್ಪೆಂಟರ್ ಬಾಷಾ ನೋಡಿದ.

ಅವನ ಸಂಬಂಧಿಕರ ಹುಡುಗನಿಗೆ ನಮ್ಮಕ್ಕನನ್ನು ಕೇಳುತ್ತಿದ್ದರು. ಆಯಪ್ಪನಿಗೆ ನಮ್ಮ ಮನೆಯ ಕುರಿತು ಚೆನ್ನಾಗಿ ಗೊತ್ತು. ನಿನ್ನೆ ಸಂಬಂಧದ ಕುರಿತು ಮಾತನಾಡಲು ಮನೆಗೆ ಬಂದಾಗ ಅಜ್ಜಿಯನ್ನು ನೋಡಿದ್ದ.

ಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ
ಶುದ್ಧ ಆಜ್ಞೆ ಎಂದೆಂಬರು.
ಈ ಆರ ಬಲ್ಲಡೆ ನೀವು ಹೇಳಿರೆ:
ಯನುಳ್ಳಡೆ ಆಧಾರ;
ಧಾರವ ಕೂಡಿಪ್ಪುದೆ ಸ್ವಾಧಿಷ್ಠಾನ;
ಮಣಿಯ ಬೆಳಗಿನಲ್ಲಿಪ್ಪುದೆ ಮಣಿಪೂರಕ;
ಸಿಯಿಲ್ಲದುದೆ ಅನಾಹತ.
ಲ್ಲಿ ಅಹುದೆಂಬುದನತಿಗಳೆಯದಿಹುದೆ ವಿಶುದ್ಧಿ.
ರ್ವಜೀವಂಗಳಲ್ಲಿ ದಯವನುಳ್ಳಡೆ ಆಜ್ಞೆ.
ಂತಿಪ್ಪುದೀಗ ಶಿವಯೋಗ.
ಳಿದ ಅಭ್ಯಾಸಯೋಗಿಗಳ ಕಂಡು ನಗುತಿರ್ದೆನಯ್ಯಾ
ಸಿದ್ಧಮಲ್ಲಿಕಾರ್ಜುನಯ್ಯಾ.

-ಸಿದ್ಧರಾಮ

ಇಷ್ಟಲಿಂಗದ ವಿವಿಧ ಆಯಾಮಗಳು



...ರ್ಗ, ನರಕ ಮತ್ತು ಕರ್ಮಸಿದ್ಧಾಂತದ ಮೇಲೆ ನಿಂತ ... ಸಹಜವಾಗಿಯೇ ವರ್ಗ, ವರ್ಣ, ಜಾತಿವಿಜಾತಿಗಳಲ್ಲಿ ... ಹೋಗಿದ್ದನ್ನು ಕಂಡುಕೊಂಡ ಬಸವಣ್ಣನವರು ...ವನ್ನು ಸಾಮಾಜೀಕರಣಗೊಳಿಸುವ ಮೂಲಕ ...ಮಾಜದ ನಿರ್ಮಾಣ ಮಾಡಿದರು. ಈ ನವಸಮಾಜ ...ಣಕ್ಕಾಗಿ ನಡೆಸಿದ ವಚನ ಚಳವಳಿಯ ಮಂಥನದಲ್ಲಿ ... ಜೀವನವಿಧಾನವೊಂದು ಜನ್ಮತಾಳಿತು. ಅದಕ್ಕೆ ...ವಂತ, ಲಿಂಗಾಯತ, ಕಾಯಕ, ಶರಣ ಮತ್ತು ...ಧರ್ಮ ಎಂದು ಕರೆಯಲಾಯಿತು.

ಈ ಶರಣಧರ್ಮದಲ್ಲಿ ಸ್ವರ್ಗ, ನರಕ, ಪುಣ್ಯ, ಪಾಪ, ... ಪುನರ್ಜನ್ಮ, ಸಂಚಿತ-ಪ್ರಾರಬ್ಧ-ಆಗಾಮಿ ಕರ್ಮಗಳು ... ಅವುಗಳಿಂದ ಉತ್ಪತ್ತಿಯಾಗುವ ವರ್ಗ ಮತ್ತು ...ವ್ಯವಸ್ಥೆ ಮುಂತಾದವು ಮಾನಸಿಕವಾದವುಗಳು. ನಿಜದ ...ಲ್ಲಿ ಅವುಗಳಿಗೆ ಬೆಲೆ ಇಲ್ಲ. ಆಶ್ಚರ್ಯವೆಂದರೆ ವೈದಿಕರಂತೆ ಪೂಜೆ ಮಾಡುವ ವಿಧಾನವೂ ಇಲ್ಲ. ...ನೊಳಗಿನ ಕಲ್ಮಷಗಳನ್ನು ತೆಗೆದುಹಾಕಲು ...ನೊಳಗೇ ಹೋಗಬೇಕು. ನಮ್ಮನ್ನು ನಾವು ...ಳಗಿನ ಅಂತಃಸಾಕ್ಷಿಯ ಜೊತೆ ಪೂಜೆ (ಶೂನ್ಯ) ...ಕೊಳ್ಳಬೇಕು ಎಂಬುದು ಈ ಲಿಂಗವಂತ ಧರ್ಮದ ...ವಾಗಿದೆ. ಅಂತೆಯೆ ಬಲ್ಲವರು 'ಇಷ್ಟಲಿಂಗ ಪೂಜೆ ...' ಎಂದು ಹೇಳುವುದಿಲ್ಲ. ಅವರು ಹೇಳುವುದು ...ಲಿಂಗ ಪೂಜೆ ಮಾಡಿಕೊಳ್ಳಿ' ಎಂದು. ನಿಜವಾದ ...ದಲ್ಲಿ ಈ ಧರ್ಮದಲ್ಲಿ ಪೂಜೆ ಮಾಡುವಂತಿಲ್ಲ. ...ರೂ ಪೂಜೆ ಮಾಡಿಕೊಳ್ಳುವಂಥದ್ದಿದೆ.

... ಹೀಗೆ ನಾವು ನಮ್ಮ ಅಂತಃಸಾಕ್ಷಿಯ ಜೊತೆ ...ಗುವುದರ ಮೂಲಕ ಲಿಂಗಭೇದ, ವರ್ಣಭೇದ ... ವರ್ಗಭೇದಗಳ ಕ್ರೌರ್ಯದ ಅರಿವಾಗುವುದು ...ಬುದನ್ನು ಬಸವಣ್ಣನವರು ಅನೇಕ ವಚನಗಳಲ್ಲಿ ...ಸಿದ್ದಾರೆ. ಸಮರತಿ, ಸಮಕಳೆ ಮತ್ತು ಸಮಸುಖ ... ಅನುಭವ ಮತ್ತು ಅನುಭಾವದ ಈ ಅರಿವೇ ...ಲಿಂಗಪೂಜೆ ಮಾಡಿಕೊಳ್ಳುವುದರ ಫಲ ಎಂದು ...ದ್ದಾರೆ. ಲಿಂಗಪೂಜೆ ಮಾಡಿಕೊಳ್ಳುವುದರಿಂದ 'ನದಿಯೊಳಗೆ ನದಿ ಬೆರೆಸಿದ ಹಾಗೆ' ಇಡೀ ಮಾನವಕುಲ ಒಂದಾಗಿಹೋಗುವುದು ಎಂದು ತಿಳಿಸಿದ್ದಾರೆ. ಇಷ್ಟಲಿಂಗಪೂಜೆಯಿಂದ ಎಲ್ಲ ಅಸಮಾನತೆಗಳಿಗೆ ಕಾರಣವಾದ ಕರ್ಮಸಿದ್ಧಾಂತವೆಂಬ ಮಹಾಮೋಸದ ಅರಿವಾಗುವುದು ಎಂಬುದನ್ನು ಒತ್ತಿ ಹೇಳಿದ್ದಾರೆ. 'ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆ ಅದೇತಕೊ' ಎಂದು ಬಸವಣ್ಣನವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಬಸವಣ್ಣನವರು ಅನೇಕ ಗುರಿಗಳ ಸಾಧನೆಗಾಗಿ ಇಷ್ಟಲಿಂಗದ ಸೃಷ್ಟಿ ಮಾಡಿದರು. ಕಾಯಕಜೀವಿಗಳನ್ನು ಮಂದಿರ ವ್ಯವಸ್ಥೆಯಿಂದಾಗುವ ಶೋಷಣೆಯಿಂದ ವಿಮೋಚನೆಗೊಳಿಸುವುದು, ಮೂಢನಂಬಿಕೆಗಳಿಂದ ಹೊರತರುವುದು, ಕರ್ಮಸಿದ್ಧಾಂತದ ತೊಡಕುಗಳಿಂದ ಬಿಡಿಸಿಕೊಳ್ಳುವುದು, ಅಸ್ಪೃಶ್ಯತೆ, ಜಾತೀಯತೆ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಶೋಷಣೆಯನ್ನು ತಡೆಗಟ್ಟುವುದು ಇಷ್ಟಲಿಂಗಯೋಗದ ಮುಖ್ಯ ಉದ್ದೇಶವಾಗಿತ್ತು. ಈ ಎಲ್ಲ ವೈರುಧ್ಯಗಳನ್ನು ಎದುರಿಸಲು ಬೇಕಾದ ಮಾನಸಿಕ ಸ್ಥಿರತೆ ಮತ್ತು ವೈಚಾರಿಕ ಶಕ್ತಿಯನ್ನು ಇಷ್ಟಲಿಂಗಯೋಗದ ಅರಿವಿನಿಂದ ಪಡೆಯಬೇಕೆಂಬುದು ಬಸವಣ್ಣನವರ ಆಶಯವಾಗಿತ್ತು. ಅವರ ಈ ಆಶಯವನ್ನು ಸಿದ್ಧರಾಮರು ಮೇಲಿನ ವಚನದಲ್ಲಿ ಎತ್ತಿ ಹಿಡಿದಿದ್ದಾರೆ.

ಇಷ್ಟಲಿಂಗಯೋಗವು ಎಲ್ಲ ಯೋಗಗಳಿಗಿಂತ ಮಹತ್ವದ್ದು. ಏಕೆಂದರೆ ಆತ್ಮ ಮತ್ತು ಪರಮಾತ್ಮನ ಮಧ್ಯೆ ಇರುವ ಸಕಲಜೀವರಾಶಿಯನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಸಕಲಜೀವಾತ್ಮರಿಗೆ ಲೇಸನ್ನು ಬಯಸುವ ವಿಧಾನವನ್ನು ತಿಳಿಸುತ್ತದೆ. ಆ ಸಕಲಜೀವಾತ್ಮರೊಳಗೆ ಮಾತ್ರ ಬದುಕು ಅರ್ಥಪೂರ್ಣವಾಗುವುದು ಎಂಬ ಸಂದೇಶವನ್ನು ಸಾರುತ್ತದೆ.

ಈ ಕಾರಣದಿಂದಲೇ ಸಿದ್ಧರಾಮರು, ಶಿವಯೋಗ ಎಂಬ ಇಷ್ಟಲಿಂಗಯೋಗ, ಅಂದರೆ ನಾವು ಇಡೀ ಜೀವಸಂಕುಲದ ಪ್ರಜ್ಞೆಯೊಂದಿಗೆ ಅಂತಃಸಾಕ್ಷಿಯ ಜೊತೆ ಒಂದಾಗುವ ಪ್ರಕ್ರಿಯೆ ಎಂಬುದನ್ನು ಮೇಲಿನ ವಚನದಲ್ಲಿ ಸೂಚಿಸಿದ್ದಾರೆ.

ಆಧಾರ, ಸ್ವಾಧಿಷ್ಠಾನ, ಮಣಿಪೂರಕ, ಅನಾಹತ, ವಿಶುದ್ಧ ಮತ್ತು ಆಜ್ಞೆ ಎಂಬ ಯೋಗಚಕ್ರಗಳನ್ನೂ ಸಿದ್ಧರಾಮರು ಸಾಮಾಜೀಕ[illegible]ಗೊಳಿಸುತ್ತಾರೆ! ಸರ್ವಜೀವಗಳ ಬಗ್ಗೆ ದಯೆ ಸೃಷ್ಟಿಸುವ[illegible]ಡೆಗೇ ಅವರ ಗಮನವಿದೆ. ಇದುವೇ ಲಿಂಗಗಮನ.

ದಯೆ ಮತ್ತು ಶೋಷಣೆ ಒಂದೆಡೆ ಇರಲಾರವು. ಶೋಷಕರು ಬಡವರಿಗೆ ಅನ್ನ ಬಟ್ಟೆ ಹಂಚುವುದು ದಯೆ ಅಲ್ಲ. ಶೋಷಣೆಯಿಲ್ಲದ ಸಮಾಜವೇ ದಯಾಸಮಾಜ. ಹೀಗೆ 'ದಯೆ' ಎಂಬ ಶಬ್ದದ ಮೇಲೆ ಶರಣಧರ್ಮ ನಿಂತಿದೆ. ದಯೆ ಇಲ್ಲದ ವಿದ್ಯೆ ಮತ್ತು ಜ್ಞಾನ ನಿರರ್ಥಕ. ಅಂತೆಯೆ ಬಸವಣ್ಣನವರು ದಯಾಪೂರ್ಣವಾದ ಲಿಂಗತತ್ತ್ವವನ್ನು ಸೃಷ್ಟಿಸಿದರು. ಈ ತತ್ತ್ವಾಚರಣೆಯ ಮೂಲಕ ದೇವರಿಗೆ ಹರಕೆ ಹೊರಬೇಕಿಲ್ಲ. ಒಂದು ಪೈಸೆ ಕೂಡ ದೇವರ ಪೂಜೆಗಾಗಿ ಖರ್ಚು ಮಾಡಬೇಕಿಲ್ಲ. ದೇಹವೇ ದೇವಾಲಯವಾಗಿರುವುದರಿಂದ ದೊಡ್ಡ ಮಂದಿರಗಳನ್ನು ಕಟ್ಟಿ ಶೋಷಣೆ ಮತ್ತು ಮೂಢನಂಬಿಕೆಗಳಿಗೆ ಅವಕಾಶ ಕಲ್ಪಿಸಬೇಕಿಲ್ಲ.

ಸಾಮಾಜಿಕ ಮೇಲುಕೀಳು ಎತ್ತಿಹಿಡಿಯುವ ಮನುವಾದಿ ವೈದಿಕ ವ್ಯವಸ್ಥೆಯನ್ನು ಎಲ್ಲ ರೀತಿಯಿಂದಲೂ ಬಗ್ಗುಬಡಿಯುವಂಥ ಲಿಂಗಸೂತ್ರವನ್ನು ಬಸವಣ್ಣನವರು ಕಂಡುಹಿಡಿದರು.

ವೈದಿಕ ವ್ಯವಸ್ಥೆ ನಿರಂತರವಾದ ಮಾನಸಿಕ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸುಲಿಗೆಯ ಮೇಲೆ ನಿಂತಿದೆ. ಈ ಎಲ್ಲ ತೆರನಾದ ಶೋಷಣೆಯನ್ನು ತಡೆಯುವ ಶಕ್ತಿ ಇಷ್ಟಲಿಂಗಕ್ಕಿದೆ. ಇಷ್ಟಲಿಂಗಯೋಗದಿಂದ ಮನೋಧೈರ್ಯ ಪಡೆದ ದಲಿತ ಮೂಲದ ಶರಣೆ ಸತ್ಯಕ್ಕ ಕಸಗುಡಿಸುವ ಕಾಯಕದ ಮೂಲಕವೇ ಸದುಗೆಲ್ಲ ಬದುಕಿನ ಪಾಠ ಕಲಿಸುತ್ತಾಳೆ. ಹುಲ್ಲು ಮಾರುವ ಸೋಮಣ್ಣ, ಮಡಿವಾಳ ಮಾಚಿದೇವ, ಅಂಬಿಗರ ಚೌಡಯ್ಯ, ಮಾದಾರ ಚನ್ನಯ್ಯ ಮುಂತಾದ ಶರಣರು ಇಂಥ ಇಷ್ಟಲಿಂಗಯೋಗದಿಂದ ಪಡೆದ ಮನೋದಾರ್ಢ್ಯದಿಂದಲೇ ಸುಲಿಗೆ ವ್ಯವಸ್ಥೆಯನ್ನು ಎದುರಿಸುವ ಸಾಮರ್ಥ್ಯ ಪಡೆದರು. ಕ್ರಿಯಾಶೀಲರಾಗಿ ಉತ್ಪಾದನೆಯಲ್ಲಿ ತೊಡಗಿದರು ಮತ್ತು ವಚನ ರಚನೆ ಮಾಡಿದರು. ಈ ಇಷ್ಟಲಿಂಗಯೋಗ ಶಕ್ತಿಯ ಅರಿವಾದ ನಂತರವೇ ಸಿದ್ಧರಾಮರು ಹಿಮಾಲಯದ ಕಡೆಗೆ ಮತ್ತು ಗುಹೆಗಳ ಬಳಿಗೆ ಕರೆದೊಯ್ಯುವ ಯೋಗಾಭ್ಯಾಸಿಗಳನ್ನು ಕಂಡು ನಗುತ್ತಾರೆ ಮತ್ತು ಇಷ್ಟಲಿಂಗಯೋಗದ ಸಾಮಾಜಿಕ ಶಕ್ತಿಯ ಮಹತ್ವವನ್ನು ಅರಹುತ್ತಾರೆ.

ಇಷ್ಟಲಿಂಗವು ಜಾತಿ ಮತ್ತು ವರ್ಗದ ಎಲ್ಲೆಗಳನ್ನು ನಿರ್ನಾಮಮಾಡಿ ಸಕಲ ಕಾಯಕಜೀವಿಗಳನ್ನು ಒಂದು ಮಾಡಿತು. ಮಂದಿರ ಮತ್ತು ಮೂಢನಂಬಿಕೆ ಮುಂತಾದ ಶೋಷಣೆಗಳಿಂದ ಮುಕ್ತಗೊಳಿಸಿತು ಎಂಬುದನ್ನು ಜಗತ್ತಿಗೆ ಸಾರಿ ಹೇಳುವ ಕಾಲ ಇದಾಗಿದೆ.

ಇಂದು ಭಾರತದ ಬಹುಜನರ ಬಡತನಕ್ಕೆ ಕಣ್ಣಿಗೆ ಕಾಣುವ ದೇವರುಗಳು ಮತ್ತು ಅವುಗಳ ಮೂಲಕ ಮೂಢನಂಬಿಕೆಗಳನ್ನು ಜನಮನದಲ್ಲಿ ಬಿತ್ತುವ ಪಂಚಾಂಗಪಟುಗಳು, ಭವಿಷ್ಯಕಾರರು ಮತ್ತು ಪುರೋಹಿತಶಾಹಿಗಳು ಕಾರಣರಾಗಿದ್ದಾರೆ. ದೇಶದ ಪಂಚವಾರ್ಷಿಕ ಯೋಜನೆಗಳಿಗೆ ತಗಲುವ ಹಣಕ್ಕಿಂತಲೂ ಹೆಚ್ಚಿನ ಹಣವನ್ನು ಈ ದೇಶದ ಜನ ಮೂಢನಂಬಿಕೆಗಳಿಗಾಗಿ ಖರ್ಚು ಮಾಡುತ್ತಿದ್ದಾರೆ. ಅಂತೆಯೆ ಬಸವಣ್ಣನವರು ಮಠಗಳಿಲ್ಲದ, ಸ್ವಾಮಿಗಳಿಲ್ಲದ, ಗುಡಿಗಳಿಲ್ಲದ, ಮೂರ್ತಿಪೂಜೆ ಇಲ್ಲದ, ಕರ್ಮಸಿದ್ಧಾಂತವಿಲ್ಲದ, ಪಂಚಾಂಗಗಳಿಲ್ಲದ, ವರ್ಗ, ವರ್ಣ ಮತ್ತು ಲಿಂಗಭೇದಗಳಿಲ್ಲದ ಲಿಂಗವಂತ ಧರ್ಮ ಎಂಬ ಜೀವನವಿಧಾನವನ್ನು ಕಂಡುಹಿಡಿದರು.

ವ್ಯಕ್ತಿ, ಕುಟುಂಬ, ಸಮಾಜ ಮತ್ತು ಚರಾಚರವನ್ನೆಲ್ಲ ಒಳಗೊಂಡ ಜೀವಜಾಲ ಸಂರಕ್ಷಣೆಯ ಜೀವನ ವಿಧಾನ ಇದಾಗಿದೆ. ಇಲ್ಲಿ ರಕ್ತಸಂಬಂಧದವರಿಗಿಂತ ತತ್ವಸಂಬಂಧದವರೇ ಹೆಚ್ಚಿನ ಅಣ್ಣ, ಅಕ್ಕ, ಅಪ್ಪ, ಬೊಪ್ಪ ಆಗುತ್ತಾರೆ. ಇದು ಅತ್ಯಂತ ನವೀನವಾದ ವಿಶ್ವಕುಟುಂಬ ಧರ್ಮವಾಗಿದೆ. ಈ ಧರ್ಮದಲ್ಲಿ ಮಠಗಳ ಜಾಗದಲ್ಲಿ ಮಹಾಮನೆ ಇದೆ. ಸ್ವಾಮಿಗಳ ಜಾಗದಲ್ಲಿ ತತ್ತ್ವಜಂಗಮರಿದ್ದಾರೆ. ಮಂದಿರದ ಜಾಗದಲ್ಲಿ ಅರಿವಿನ ಮನೆ ಇದೆ. ದಾನದ ಬದಲಿಗೆ ದಾಸೋಹ ಇದೆ. ಸ್ಥಾವರದ ಬದಲಿಗೆ ಇಷ್ಟಲಿಂಗವಿದೆ.

ಕರ್ಮಸಿದ್ಧಾಂತವನ್ನು ಅಲ್ಲಗಳೆಯುವ ಕಾಯಕಸಿದ್ಧಾಂತವಿದೆ. ಇಡೀ ಮಾನವಕುಲವನ್ನು ಒಂದುಮಾಡುವ ಗುರಿ ಇದೆ.



■ ರಂಜಾನ್ ದರ್ಗಾ



...ಈಗ ಅಜ್ಜಿ ಹೀಗೆ ಆಸ್ಪತ್ರೆಗೆ ಹೋಗುತ್ತಾ ಆಯಪ್ಪನ ... ಬಿದ್ದಳು. ಆಯಪ್ಪ ಸುಮ್ಮನಿರದೇ "ಏನಮ್ಮಾ ...ಲೇ ಹೋಗ್ತಾ ಇದ್ದಿ" ಎಂದು ಮಾತನಾಡಿಸಿದ. ... ಅವನನ್ನು ಕಂಡುಹಿಡಿದು ದಾರಿಯಲ್ಲೇ ಮಾತಿಗೆ ...ಬಿಟ್ಟಳು.

...ಸರ್ಕಾರಿ ಆಸ್ಪತ್ರೆಗೆ ಹೋಗ್ತಾ ಇದೀನಿ. ಮಗ ...ಸಿಲ್ಲ, ಆಸ್ಪತ್ರೆಗೆ ಹೋಗಿ ಸೂಜಿ ಹಾಕಿಸಿಕೊಂಡು ...ಣ ಅಂತ ಹೋಗ್ತಿದ್ದೀನಿ" ಎಂದಳು.

...ತ ಏನಂದುಕೊಂಡನೊ ಏನೊ 'ಆಸ್ಪತ್ರೆಗೆ ಯಾಕೆ?' ... ಕೂಡಾ ಕೇಳದೇ ನೇರವಾಗಿ ಮನೆಗೆ ಬಂದು ...ನಿಗೆ, ಅಪ್ಪನಿಗೆ ಆವೇಶದಿಂದ ಏನೋ ಹೇಳಿದ.

...ಪ್ಪ ಸಿಡಿದು ಹೋದ. ಅಮ್ಮ ಉರಿದುಹೋದಳು. ...ಹೊತ್ತಿಗೆ ಅಜ್ಜಿ ಹಾಗೆಯೇ ಕಂಕುಳಲ್ಲಿ ದುಪ್ಪಟಿ ...ಕೊಂಡು ಮನೆಗೆ ಬಂದಳು. ಅಜ್ಜಿಯನ್ನು ನೋಡುತ್ತಲೇ ...ಕೆಂಡಾಮಂಡಲವಾದ.

"...ಸಸಮ್ಮಾ... ಎಲ್ಲಿಗೆ ಹೋಗಿದ್ದೆ" ಎಂದು ಮಗ ...ಕೊಂಡೂ, ತನಗೆ ಬಂದ ಕಾಯಿಲೆ ಕುರಿತು ...ಕೊಂಡೂ ಆಸೆ ಪಟ್ಟಿದ್ದ ಅಜ್ಜಿಗೆ ನಿರಾಶೆಯಾಯಿತು.

...ನಿಗೆ ಬರುತ್ತಿದ್ದಂತೆಯೇ ಅಜ್ಜಿ ಮೇಲೆ ಹಾರಿ ಬಿದ್ದ. "ಶಿವಾಜಿ ಎಕ್ಸ್ಟೆನ್ಶನ್ ಥರ ರಸ್ತೆ ಮೇಲೆ ಹಂಗೆ "...ಜ್ಜಿ ಮಾಡುಗಿಗೆ ಮದ್ವೆ ಆಗೋವರೆಗೆ ಮುಚ್ಚುಟ ...ಕೊಂಡೂಂದು ಸಾಯಬಾರದಾ?" ಎಂದ. ಅಜ್ಜಿಗೆ ... ತೋಚಲಿಲ್ಲ, ಮೈಯೊಳಗಿನ ಶಕ್ತಿಯನ್ನೆಲ್ಲಾ ಸೇರಿಸಿಕೊಂಡು, ಸಿಟ್ಟನ್ನೆಲ್ಲಾ ಹೊರಹಾಕಿದಳು. "ಮದು ಮಗಳನ್ನು ಮಾಡ್ತೀರೋದು ನನ್ನನ್ನಾ... ನಿನ್ನ ಮಗಳನ್ನಾ, ಮಗನೇ ನನ್ನ ಹಿಂದೆ ಬಿದ್ದಿದ್ದೀಯಾ. ಈಗಲೇ ಮೈಯೆಲ್ಲಾ ಹೈರಾಣಾಗಿ ಸಾಯ್ತಿದೀನಿ. ಡಾಕ್ಟರ್ ಇಷ್ಟಿಷ್ಟು ಸೂಜಿ ಹಾಕಿ, ಮಾತ್ರೆ ಬರ್ಕೋಟ್ಟಿದ್ದಾರೆ. ಏನು ಮಾಡ್ಬೇಕು. ದೇವ್ರೆ ಅಂತ ನಾನಿದ್ರೆ.... ನಿಂದೇನೋ ಈಗ? ನನಗೆ ಸರಿಯಾಗಿ ಶಾಸ್ತಿ ಆಯ್ತು ಇಲ್ಲಿ ಬಂದು. ಸರಿಯಾಗಿ ಓಡಾಡೋಕೆ ಬಿಡಲ್ಲ, ಮಾತಾಡೋಕೆ ಬಿಡಲ್ಲ... ಏನ್ರಲೇ ನೀವು ಬದುಕ್ತಾ ಇರೋದು? ಈಗೀಗ್ಲೇ ಮೊಲೆ ಬಂದ ಹುಡುಗಿರ ಥರ ಮುಚ್ಚುಟ ಹೊದ್ಕೊಂಡು ತಿರುಗಬೇಕಾ... ಹೇಳಿದ್ರೆ ಸ್ವಲ್ಪನಾದ್ರೂ ನಾಚ್ಕೆ ಇರ್ಬೇಕು. ಯಾರಾದ್ರೂ ಕೇಳಿಸ್ಕೊಂಡರೆ ಉಗಿತಾರೆ. ನನ್ನಗನೇ..." ಎಂದು ಮುಖದ ಮೇಲೆ "ಥೂ" ಎಂದು ಕ್ಯಾಕರಿಸಿ ಉಗಿದೇಬಿಟ್ಟಳು ಅಜ್ಜಿ.

ಅಪ್ಪ ಮತ್ತಷ್ಟು ಉರಿದುಹೋದ. ಕುಳಿತಿದ್ದವ ಧಡಾರನೇ ಎದ್ದು ಸಿಟ್ಟಿನಿಂದ ಮುಷ್ಟಿ ಬಿಗಿದು ಅಜ್ಜಿಯನ್ನು ಬಗ್ಗಿಸಿ, ಒಂದು ಗುದ್ದು ಗುದ್ದುವಷ್ಟರಲ್ಲಿ "ಅಯ್ಯಮ್ಮ....ಸಾಯ್ಸಿತಿದ್ದಾನೆ ಮುಂದುಕಿನಾ" ಎಂದು ಅಜ್ಜಿ ಭೂಮಿ ಆಕಾಶ ಒಂದಾಗುವಂತೆ ಬಾಯಿ ಮಾಡುವಷ್ಟರಲ್ಲಿ ಬಿಟ್ಟುಬಿಟ್ಟ.

ಅಜ್ಜಿಯ ಚೀರಾಟ ನಿಲ್ಲಲಿಲ್ಲ "ಹಾಳಾದೋಳೆ...ಯಾಕಂಗೆ ಕೂಗ್ತೀಯಾ. ನಿನ್ನ ಯಾವನಾದ್ರೂ ತಿವಿದ್ನಾ... ಬಾಯ್ಮುಚ್ಚು" ಗಟ್ಟಿಯಾಗಿ ಕೂಗಿದ ಅಪ್ಪ.

ಆದರೂ ಅಜ್ಜಿ ಸುಮ್ಮನಾಗಲಿಲ್ಲ. ಜೋರಾಗಿ "ತಿವಿತಿಯಾ ತಿವಿಯೋ" ಎಂದು ಜೋರು ಮಾಡಿದಳು. ಇನ್ನು ಅಪ್ಪನ ಆವೇಶವನ್ನು ನಿಲ್ಲಿಸೋದು ಯಾರಿಂದಲೂ ಸಾಧ್ಯವಿಲ್ಲ. ಹಲ್ಲು ಕಟಕಟನೆ ಕಡಿಯುತ್ತಾ ಅಜ್ಜಿಯನ್ನು ನೋಡತೊಡಗಿದ. ಇನ್ನು ಸ್ವಲ್ಪ ಹೊತ್ತು ಅಲ್ಲಿದ್ದರೆ ಮುದುಕಿಯನ್ನು ಸಾಯ್ಸೋದು ಗ್ಯಾರಂಟಿ ಅಂದುಕೊಂಡೆವು. ಚಕಚಕನೆ ಪಂಚೆ ಮೇಲಕ್ಕೆತ್ತಿ ಕಟ್ಟಿ ಹೊರಗೆ ಬಂದು ನಿಂತ ಅಪ್ಪ.

ಚಪ್ಪಲಿ ಮೆಟ್ಟಿಕೊಂಡು ರಸ್ತೆ ಕಡೆ ಹೋಗುತ್ತಾ "ಲೇ ತಮ್ಮ ಇನ್ನೊಂದು ಸಲ ಈ ಮುದುಕಿ ದುಪ್ಪಟಿ ಇಲ್ದಂಗೆ ಹೊರಗೆ ಬಂದ್ರೆ ಹೇಳಲೇ... ಆಗ ಹೇಳ್ತೀನಿ ಇದರ ಕಥೆ" ಎಂದು ವಾರ್ನಿಂಗ್ ಕೊಟ್ಟ.

ಅಜ್ಜಿ ನಡುಗಿಹೋದಳು.

"ಇದೇನು ಕರ್ಮ ದೇವರೇ" ಎಂದು ಅತ್ತುಬಿಟ್ಟಳು.

"ಇವ್ನ ಚಿಕ್ಕೋನಿದ್ದಾಗ ಊರಲ್ಲಿ ಗುಡಿಸ್ಲು ಸುಟ್ಟು ಹೋದ್ರೆ ನನ್ನ ಮಗ ಉಪವಾಸ ಇರ್ತಾನಂತ ಮನೆ ಮನೆ ತಿರುಗಿ ಭಿಕ್ಷೆ ಬೇಡಿದೆ. ಆಗ ಥೋಥಾ, ಪರದಾ ಅಂದ್ಕೊಂಡಿದ್ರೆ ಈ ನನ್ಮಗ ಇವತ್ತು ಹಿಂಗಿರ್ತಿದ್ನಾ? ಎಂದು ರೋದಿಸತೊಡಗಿದಳು.


"ಮತ್ತೆ ನಾಲ್ಕು ಮನೆ ಭಿಕ್ಷೆ ಬೇಡಿದ್ರೂ ಪರವಾ ಇಲ್ಲ. ನಾನಿಲ್ಲಿ ಇರಲ್ಲ. ಹೋಗ್ತೇನೆ" ಎಂದು ಬಟ್ಟೆ ಜೋಡಿಸಿಕೊಳ್ಳಲಾರಂಭಿಸಿದಳು. ನಾನು ಬಾಗಿಲಿಗಿದ್ದ ಪರದೆಯನ್ನು ಸರಿ ಮಾಡುತ್ತಾ ನೀರು ತುಂಬಿದ ಕಣ್ಣುಗಳಿಂದ ಅಜ್ಜಿಯನ್ನು ನೋಡುತ್ತಾ ನಿಂತೆ ಅಸಹಾಯಕತೆಯಿಂದ

ತೆಲುಗಿನಲ್ಲಿ: ವೇಂಪಲ್ಲಿ ಶರೀಫ್

ಕನ್ನಡಕ್ಕೆ: ಸ್ವಿವನ್

'ಗುಜರಾತ್ ಮಾದರಿ ಅಭಿವೃದ್ಧಿ'ಯ ಮತ್ತೊಂದು ಬಲಿಪಶು: ಮಕ್ಕಳ





ಪ್ರಜಾಸತ್ತಾತ್ಮಕ ಸರಕಾರವೊಂದು ಸತ್ಯಯುತವಾಗಿ ಕಾರ್ಯಾಚರಿಸುತ್ತಿದೆ ಮತ್ತು ಜನಸಾಮಾನ್ಯರ ಒಳಿತಿಗಾಗಿ ಶ್ರಮಿಸುತ್ತಿದೆ ಎಂದಾಗಬೇಕಿದ್ದರೆ ಅದರ ವಿವಿಧ ಸಂಸ್ಥೆಗಳು ಸಂವೇದನಾಶೀಲವಾಗಿ, ಕ್ರಿಯಾತ್ಮಕವಾಗಿ, ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು. ಆದರೆ ಕಳೆದ ಒಂದು ವರ್ಷದಲ್ಲಿ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳಲ್ಲಾದ ವಿದ್ಯಮಾನಗಳನ್ನು ಗಮನವಿಟ್ಟು ನೋಡಿದರೆ ಪ್ರಜಾಸತ್ತೆಯ ಶವಪೆಟ್ಟಿಗೆ ಸಿದ್ಧವಾಗುತ್ತಿದೆ ಎಂದೇ ಅನಿಸುತ್ತದೆ. ಸದ್ಯ ಕಾರ್ಯಾಂಗವೊಂದನ್ನೇ ತೆಗೆದುಕೊಂಡರೆ ಅದರ ಮಾನವ ಹಕ್ಕು ಆಯೋಗ, ಮಹಿಳಾ ಆಯೋಗ, ಅಲ್ಪಸಂಖ್ಯಾತರ ಆಯೋಗ, ಲೋಕಪಾಲ, ಕೇಂದ್ರ ವಿಚಕ್ಷಣಾ ದಳ, ಮಾಹಿತಿ ಹಕ್ಕು ಆಯೋಗ, ರಾಷ್ಟ್ರೀಯ ಮಕ್ಕಳ ಹಕ್ಕು ಆಯೋಗದಂತಹ ಜನಹಿತಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಇದ್ದೂ ಇಲ್ಲದಂತಿವೆ. ಕೊನೆಯ ಮೂರು ಸಂಸ್ಥೆಗಳಿಗಂತೂ ಇದುವರೆಗೂ ಮುಖ್ಯಸ್ಥರ ನೇಮಕಾತಿಯೇ ಆಗಿಲ್ಲ ಮಾತ್ರವಲ್ಲ ಸಾಕಷ್ಟು ಪ್ರಮಾಣದಲ್ಲಿ ಸಿಬ್ಬಂದಿ, ಸೌಕರ್ಯಗಳನ್ನೂ ಒದಗಿಸಲಾಗಿಲ್ಲ.


ರಾಷ್ಟ್ರೀಯ ಮಕ್ಕಳ ಹಕ್ಕು ಆಯೋಗ ನಿಶ್ಚೇಷ್ಟಿತವಾಗಿ ಬಿಟ್ಟಿದೆ. ಏಕೆಂದರೆ ಅದರ ಅಧ್ಯಕ್ಷರು ಮತ್ತು ಆರು ಮಂದಿ ಸದಸ್ಯರ ಕುರ್ಚಿಗಳು ಕಳೆದ ಸುಮಾರು ಏಳು ತಿಂಗಳುಗಳಿಂದ ಖಾಲಿ ಬಿದ್ದಿವೆ! ಪರಿಣಾಮವಾಗಿ ಪಾಕ್ಸೊ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯ ಅನುಷ್ಠಾನ ಸರಿಯಾಗಿ ಆಗುತ್ತಿದೆಯೇ ಇಲ್ಲವೇ ಎಂದು ನೋಡಲು ಯಾರೂ ಇಲ್ಲವಾಗಿದೆ. ಮಕ್ಕಳ ಬಿಸಿಯೂಟದ ದುಡ್ಡನ್ನು ಕಸಿದುಕೊಂಡಿರುವ ಸರ್ಕಾರದ ವಿರುದ್ಧ ದೂರು ಕೊಡೋಣ ಅಂದರೆ ಅದೂ ಸಾಧ್ಯವಾಗುತ್ತಿಲ್ಲ. ಪರಿಣಾಮವಾಗಿ ದೂರುಗಳ ಮೇಲೆ ದೂರುಗಳು ಗುಡ್ಡೆ ಬೀಳುತ್ತಿವೆ. ಈಗಾಗಲೇ ಜಗಜ್ಜಾಹೀರಾಗಿರುವಂತೆ ಇಂದು ಯಾವ ಹುದ್ದೆಗೆ ಯಾರನ್ನು ನೇಮಿಸಬೇಕೆಂದು ನಿರ್ಧರಿಸುವ ಅಧಿಕಾರವೆಲ್ಲ ಪ್ರಧಾನಿಯ ಆಪ್ತ ಕಚೇರಿಯಲ್ಲಿ ಕೇಂದ್ರೀಕೃತವಾಗಿದೆ. ಸಚಿವ ಖಾತೆಯೇನೋ ತನ್ನ ಕೆಲಸ ನಿಭಾಯಿಸಿ ಕೆಲವು ಹೆಸರುಗಳನ್ನು ಸೂಚಿಸಿದೆ. ಆದರೆ ಅದು ಕಳುಹಿಸಿದ್ದ ಹೆಸರುಗಳು ಎರಡೆರಡು ಬಾರಿ ತಿರಸ್ಕರಿಸಲ್ಪಟ್ಟಿವೆ. ಇಂತಹ ಸನ್ನಿವೇಶದಲ್ಲಿ ಮೋದಿ ಸರ್ಕಾರ ಇತ್ತೀಚೆಗಷ್ಟೆ ಬಾಲನ್ಯಾಯ ಮತ್ತು ಬಾಲಕಾರ್ಮಿಕ ಕಾಯ್ದೆಗಳಿಗೆ ಕೆಲವೊಂದು ತಿರೋಗಾಮಿ ತಿದ್ದುಪಾಡುಗಳನ್ನು ತಂದಿದೆ. ಬಾಲಾಪರಾಧಿಗಳ ವಯೋಮಿತಿಯನ್ನು 18ರಿಂದ 16ಕ್ಕೆ ಇಳಿಸಲಾಗಿದೆ. ಮಕ್ಕಳನ್ನು ಕ್ರೀಡೆ, ಮನರಂಜನೆ ಮತ್ತು ಕೌಟುಂಬಿಕ ಉದ್ದಿಮೆಗಳಲ್ಲಿ ನೇಮಿಸಿಕೊಳ್ಳಲು ಅನುವು ಮಾಡಿಕೊಡಲಾಗಿದೆ. ಬಾಲಕಾರ್ಮಿಕ ಕಾಯ್ದೆಗೆ ತಂದಿರುವ ತಿದ್ದುಪಡಿಗಳು ಸ್ಪಷ್ಟವಾಗಿ ಶಿಕ್ಷಣ ಹಕ್ಕು ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸುತ್ತವೆ. 'ಘೋಷಣೆಗಳ ಸರ್ಕಾರ'ದ ಸೋಗಲಾಡಿತನ ಹೇಗಿದೆಯೆಂದರೆ ಮುಂದಿನಿಂದ "ಬೇಟಿ ಬಚಾವೊ ಬೇಟಿ ಪಡಾವೊ", "ಸುಕನ್ಯಾ ಸಮೃದ್ಧಿ" ಎನ್ನುತ್ತಾ ಹಿಂದಿನಿಂದ ಹೆಣ್ಣುಮಕ್ಕಳನ್ನು ಕೆಲಸಕ್ಕೆ ದೂಡಿ ಅವರ ಶಿಕ್ಷಣದ ಹಕ್ಕನ್ನು ಕಸಿಯುತ್ತಿದೆ! ಅಸಲಿಗೆ ನೂತನ ಬಾಲಕಾರ್ಮಿಕ ಕಾಯ್ದೆ ಲಿಂಗ ಅಸಮಾನತೆ, ಜಾತಿಪದ್ಧತಿ, ಆರ್ಥಿಕ ಅಸಮಾನತೆಗಳಂತಹ ಅನಿಷ್ಟಗಳ ಮುಂದುವರಿಕೆಯನ್ನು ಪ್ರೋತ್ಸಾಹಿಸುತ್ತದೆ. ಇನ್ನೊಂದು ವಿಧದಲ್ಲಿ ಹೇಳುವುದಾದರೆ ಸಾಮಾಜಿಕ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳಲು ಒತ್ತಾಸೆ ನೀಡುತ್ತದೆ; ಸಾಮಾಜಿಕ ಮೇಲ್ಚಲನೆಗೆ ಅವಕಾಶಗಳನ್ನು ಕುಗ್ಗಿಸುತ್ತದೆ. ಅರ್ಥಾತ್ ಪೌರಕಾರ್ಮಿಕರ ಮಕ್ಕಳು ಪೌರಕಾರ್ಮಿಕರಾಗಿ, ಹೆಣ್ಣುಮಕ್ಕಳು ಮನೆಗೆ ಸೀಮಿತರಾಗಿ, ಬಡವರ್ಗಗಳು ಬಡವರಾಗಿ ಉಳಿದು ಸದಾಕಾಲವೂ ಮಧ್ಯಮ ಮತ್ತು ಮೇಲ್ವರ್ಗಗಳ ಸೇವೆ ಮಾಡುತ್ತಿರಬೇಕು!

ದೇಶದಲ್ಲಿ 5ರಿಂದ 14 ವರ್ಷ ವಯಸ್ಸಿನ ಬಾಲಕಾರ್ಮಿಕರ ಸಂಖ್ಯೆ 2011ರಲ್ಲಿ 40 ಲಕ್ಷದಷ್ಟಿತ್ತೆಂದು ಜನಗಣತಿಯ ಅಂಕಿಅಂಶಗಳು ಹೇಳುತ್ತವೆ. ಹೀಗಿರುವಾಗ ನೂತನ ಬಾಲಕಾರ್ಮಿಕ ಕಾಯ್ದೆ ದುಡಿಯುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವ ಬದಲು ಉದ್ದಿಮೆಗಳಿಗೆ ಮಕ್ಕಳನ್ನು ದುಡಿಸಿಕೊಳ್ಳಲು ಮತ್ತಷ್ಟು ಸುಲಭ ಮಾಡಿಕೊಡುತ್ತದೆ. ಅದರ ಪ್ರಕಾರ ಮಕ್ಕಳು ಇನ್ನು ಮುಂದೆ ಶಾಲೆ ಮುಗಿದ ಬಳಿಕ ಅಥವಾ ರಜಾಕಾಲದಲ್ಲಿ ಹೊಲಗಳಲ್ಲಿ, ಕಾಡುಗಳಲ್ಲಿ ಮತ್ತು ಮನೆಗಳಲ್ಲಿ ದುಡಿಯಬಹುದಾಗಿದೆ. ಈ ಕಾಯ್ದೆ ಮಕ್ಕಳನ್ನು ಕ್ರೀಡೆ, ಮನರಂಜನೆ ಮತ್ತು ನಿರಪಾಯಕಾರಿ ಕೌಟುಂಬಿಕ ಸಂಸ್ಥೆಗಳಲ್ಲಿ ದುಡಿಸಲು ಅನುವು ಮಾಡಿಕೊಡುತ್ತದೆ. ವಾಸ್ತವವಾಗಿ ಇಂತಹ ಅನೇಕ ಕೌಟುಂಬಿಕ ಸಂಸ್ಥೆಗಳು ಅಪಾಯಕಾರಿ ಗೃಹಕೈಗಾರಿಕೆಗಳ ಪಟ್ಟಿಗೆ ಸೇರುತ್ತವೆ. ಇದು ಹೇಗೆಂದರೆ ದೊಡ್ಡ ದೊಡ್ಡ ಅಪಾಯಕಾರಿ ಉದ್ದಿಮೆಗಳು ಹಳ್ಳಿಗಳಲ್ಲಿರುವ ಗೃಹಕೈಗಾರಿಕೆಗಳಿಗೆ ಹೊರಗುತ್ತಿಗೆ ನೀಡುತ್ತವೆ. ಅಲ್ಲೆಲ್ಲಾ ಮಕ್ಕಳ ದುಡಿಮೆ ವ್ಯಾಪಕವಾಗಿದೆ. ಉದಾಹರಣೆಗೆ ಕ್ರೀಡಾ ಸಾಮಗ್ರಿ, ಬೀಗ, ಜಮಖಾನೆ, ಜರಿ, ಗಾಜಿನ ಬಳೆ, ಬೀಡಿ, ಪಟಾಕಿ ಮುಂತಾದ ಉತ್ಪನ್ನಗಳು. ಫುಟ್‌ಬಾಲ್ ಉದ್ದಿಮೆಯಲ್ಲಿ ಶೇಕಡಾ 27ರಷ್ಟು ಬಾಲಕಾರ್ಮಿಕ[illegible] ಮತ್ತು ಅವರಲ್ಲಿ ಶೇಕಡಾ 67ರಷ್ಟು ಹೆಣ್ಮಕ್ಕಳು. ಸೂ[illegible] ಲೇಪಿತ ನೂಲುಗಳು ಮತ್ತು ಮಂದ ಬ[illegible] ಬಳಕೆಯಿಂದಾಗಿ ಇದೊಂದು ಅಪಾಯಕಾರಿ ಉದ್ದಿಮೆ[illegible] ಆಗಿದೆ. ಇನ್ನು ಜಮಖಾನೆ, ಜರಿ, ಗಾಜಿನ ಬಳೆ, [illegible] ಪಟಾಕಿ ತಯಾರಿಯಲ್ಲಿ ನಾನಾ ಬಗೆಯ ವಿ[illegible] ರಾಸಾಯನಿಕಗಳು ಬಳಕೆಯಾಗುತ್ತವೆ. ಹತ್ತಿ, [illegible] ತಂಬಾಕಿನ ಧೂಳಿನಲ್ಲಿ ಕೆಲಸ ಮಾಡುವ ಮ[illegible] ಬಹುಬೇಗನೆ ಅನೀಮಿಯ, ಅಸ್ತಮಾ ಮೊದ[illegible] ಕಾಯಿಲೆಗಳಿಗೆ ತುತ್ತಾಗುತ್ತಾರೆ. ಇಂತಹ ಕೌಟ[illegible] ಸಂಸ್ಥೆಗಳಲ್ಲಿ ದುಡಿಯುವವರು ಅಸಂಘ[illegible] ವಲಯದಲ್ಲಿರುವುದರಿಂದ ಅವರು ಕನಿಷ್ಠ ವೇತನ, ಸಾ[illegible] ಭದ್ರತೆ, ವೈದ್ಯಕೀಯ ನೆರವುಗಳಂತಹ ಸೌಲಭ್ಯ[illegible] ವಂಚಿತರು. ಸಾಲದ್ದಕ್ಕೆ ಜೀತ ಪದ್ಧತಿಯೂ ವ್ಯಾಪಕವ[illegible]

ಮೋದಿ ಸರ್ಕಾರ ಯಾಕೆ ತಜ್ಞರ ಅಭಿಪ್[illegible] ಎಚ್ಚರಿಕೆಗಳನ್ನೆಲ್ಲ ಕಡೆಗಣಿಸಿ ಬಾಲನ್ಯಾಯ ಕಾಯ್ದೆಗೆ ತಿ[illegible] ಮಾಡಲು ಹೊರಟಿದೆ ಎಂಬುದು ಬಹಳ ಸ್ಪ[illegible] ಅದರ ಹೊಸ ಬಾಲಕಾರ್ಮಿಕ ಕಾಯ್ದೆಯಷ್ಟೆ [illegible] ಭೂಸ್ವಾಧೀನ ಕಾಯ್ದೆ, ಕಾರ್ಮಿಕ ಕಾಯ್ದೆ, ಮ[illegible] ಕಾರ್ಯಕ್ರಮದ ಕತ್ತು ಹಿಸುಕುವಿಕೆ ಮುಂತಾದ ಕ್ರ[illegible] ಹಿಂದೆ ಕಾರ್ಪೋರೇಟ್ ಕಂಪನಿಗಳ ತುಷ್ಟೀಕರಣ [illegible] ಅಡಗಿದೆ. ಘೋಷಣೆಗಳ ಸರದಾರನ 'ಮೇಕ್ [illegible] ಇಂಡಿಯ' ಉದ್ದಿಮೆಗಳಿಗೆ ಅಗ್ಗದ ಕೂಲಿಯಾಳು[illegible] ಲಿರುವವರು ಇನ್ನಾರೂ ಅಲ್ಲ, ಭೂಮಿ ಕಳೆದುಕೊಳ್ಳ[illegible] ರೈತರು, ಹಕ್ಕುಗಳಿಲ್ಲದ ಕಾರ್ಮಿಕರು, ಕೆಲಸ [illegible] ಕೊಳ್ಳಲಿರುವ ಹಳ್ಳಿಗಳ ಬಡವರು ಮತ್ತು ಬಾಲಕಾರ್ಮಿ[illegible] ದೇಶದ ಜನತೆ ಈ ಸತ್ಯವನ್ನು ಎಷ್ಟು [illegible] ಅರಿತುಕೊಳ್ಳುತ್ತಾರೋ ಅಷ್ಟೂ ಒಳ್ಳೆಯದು.

(ಆಧಾರ: ತೆಹೆಲ್ಕಾ, 29-5-2[illegible])

ಯಾಗ ಎಂಬ ಸೇಫ್ಟಿ ಜೋನು



ಕ್ರಿಕೆಟ್ ಜ್ವರ ಬಂದಿತ್ತು.

ಪರೀಕ್ಷೆಗಳೂ ಹತ್ತಿರವಾಗುತ್ತಿತ್ತು.

ಪೋಷಕರಿಗೆ ಒಂದೇ ಆತಂಕ- ಮಕ್ಕಳ ಭವಿಷ್ಯದ ಗತಿ ಏನು?

ಈ ಆತಂಕಕ್ಕೆ ಕಾರಣ ಇತ್ತು. ಕ್ರಿಕೆಟ್ ಪಂದ್ಯಾವಳಿ ಆರಂಭವಾದರೆ ಸಾಕು ಮಕ್ಕಳು ಪುಸ್ತಕ ಮರೀತವೆ. ಟಿವಿ ಮುಂದೆ ಕೂರ್ತವೆ.

ಪ್ರೇಕ್ಷಕರ ಈ ಮಾನಸಿಕ ತೊಳಲಾಟ ಸುದ್ದಿ ಮಾಧ್ಯಮದವರಿಗೆ ಮನವರಿಕೆ ಆಯಿತು. ಅವರ ಅಳಲನ್ನು ಮನ ಕರಗುವಂತೆ ಬಿಂಬಿಸಿದವು.

ಇದು ಮಾಧ್ಯಮದ ಒಂದು ಮುಖ ಆಯಿತು. ಇದಕ್ಕೆ ಇನ್ನೊಂದು ಮುಖವೂ ಇದೆ. ಅದು ಇದು:

ಕ್ರಿಕೆಟ್ ಪಂದ್ಯಾವಳಿ ಪ್ರಾರಂಭ ಆಗುವುದಕ್ಕೆ ಒಂದು ಹತ್ತು ಹದಿನೈದು ದಿವಸಗಳು ಇರುವಾಗಲೇ ಪ್ರಾರಂಭ ಆಯಿತು ಅವುಗಳ ವರಸೆ. ರೋಚಕ ಪಂದ್ಯಕ್ಕೆ ಇನ್ನು... ಬಾಕಿ. ಹೀಗೆ ಪ್ರತಿನಿತ್ಯ ಪ್ರಚಾರ ಕೊಡುತ್ತಾ ಬಂದವು. ಪಂದ್ಯ ಪ್ರಾರಂಭ ಆಗುವಷ್ಟರಲ್ಲಿ ಕ್ರಿಕೆಟ್ ಪಂದ್ಯಾವಳಿ ಕುರಿತು ಕುತೂಹಲ ಕೆರಳಿಸಿದವು. ಆ ದಿವಸಕ್ಕಾಗಿ ತುದಿಗಾಲ ಮೇಲೆ ನಿಲ್ಲುವಂತೆ ಮಾಡಿದವು.

ಇದರಲ್ಲಿ ಏನೂ ವಿಶೇಷ ಇಲ್ಲ. ಕ್ರಿಕೆಟ್ ಬಗೆಗೆ ಕುತೂಹಲ ಕೆರಳಿಸುವುದು ವ್ಯವಹಾರ. ಪೋಷಕರ ಅಳಲನ್ನು ಬಿಂಬಿಸುವುದು ಬದ್ಧತೆ! ಎರಡೂ ಕಡೆ ನುಡಿಸುವ ಡೋಲು ಇದ್ದಂತೆ!

ಮಾಧ್ಯಮದ ವಿಳ್ಗೆ ಇದು ದಾರಿ ಇರಬಹುದು. ಪರಿಹಾರ ಆಯ್ತೆ ಪೋಷಕರ ಆತಂಕ?

ಎಲ್ಲ ಸಮಸ್ಯೆಗಳಿಗೂ ಪರಿಹಾರ ಇದೆ. ಇದಕ್ಕೂ ಇದೆ.

ಏನು ಅದು?

'ಮಹಾಸರಸ್ವತಿ ಯಾಗ!'

ಇದನ್ನು ಮಾಡಿದರೆ ದೊರೆಯುವುದೇ ಉತ್ತಮ ಅಂಕ?

ಖಂಡಿತವಾಗಿ. ಸರಸ್ವತಿ ಅಂದರೆ ಯಾರು? ವಿದ್ಯೆಯ ಅಧಿದೇವತೆ. ಆಕೆ ಒಲಿದರೆ ಒಲಿಯುದೇ ವಿದ್ಯೆ?

ದಾವಣಗೆರೆಯಲ್ಲಿ ನಡೆಯಿತು- 'ಮಹಾಸರಸ್ವತಿ ಯಾಗ!'

ಉತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಬೇಕೆಂಬ ಆಸೆ ಯಾರಿಗೆ ಇರಲ್ಲ? ಮಕ್ಕಳ ಜೊತೆ ಪೋಷಕರೂ ಸೇರಿ ಭಯಭಕ್ತಿಯಿಂದ ಯಾಗದಲ್ಲಿ ಪಾಲ್ಗೊಂಡರು.

ನಿರ್ವಿಘ್ನವಾಗಿ ನಡೆಯಿತೆ ಯಾಗ?

ಪುರಾಣಯುಗದಲ್ಲಿ ಯಾಗಗಳಿಗೆ ರಾಕ್ಷಸರು ಅಡ್ಡಿಪಡಿಸುತ್ತಿದ್ದರು. ಈಗ ಪ್ರಗತಿಪರರು ವಿರೋಧಿಸಿದರು. ಮಂತ್ರಕ್ಕೆ ಮಾವಿನಕಾಯಿ ಉದುರುವುದಿಲ್ಲ, ಯಾಗಕ್ಕೆ ಅಂಕಗಳು ಮೂಡುವುದಿಲ್ಲ ಎಂಬುದು ಅವರ ಆಕ್ಷೇಪಣೆ.

ಈ ಪ್ರತಿಭಟನೆಯಿಂದ ಆಯಿತೆ ಪ್ರಯೋಜನ?

ಮಾಧ್ಯಮಗಳಲ್ಲಿ ಪ್ರಚಾರ ಸಿಕ್ಕಿತು. ಯಾಗ ಸಾಂಗವಾಗಿ ನೆರವೇರಿತು!

'ಮಹಾ ಸರಸ್ವತಿ ಯಾಗ'ದಿಂದ ಲಭಿಸಿತೆ ಫಲ?


ಆದರ ಒರೆ ಹಚ್ಚಲು ಇದು ಸಕಾಲ.

ಪರೀಕ್ಷೆಗಳ ಫಲಿತಾಂಶ ಹೊರಬಿದ್ದಿದೆ. ಯಾಗದಲ್ಲಿ ಭಾಗವಹಿಸಿದವರ ಜಾತಕ ದಾಖಲೆಗಳಲ್ಲಿರಬೇಕು. ಒರೆ ಹಚ್ಚಿ ನೋಡಬಹುದಲ್ಲ?

'ಇದರಿಂದ ಏನೂ ಪ್ರಯೋಜನ ಇಲ್ಲ' ಎಂಬುದು ಅನುಭವಸ್ಥರೊಬ್ಬರ ಖಡಾಖಂಡಿತ ನುಡಿ. 'ಯಾಕೆ?' ಎಂದು ಕೇಳಿದರೆ ಅವರು 'ಒರೆ ಹಚ್ಚಿ ನೋಡ್ತಿರಿ ಅನ್ನಿ. ಹೆಚ್ಚು ಅಂಕ ಗಳಿಸಿ ಪಾಸಾಗಿದ್ದರೆ ಇದು ಯಾಗದ ಫಲ ಅನ್ನುತ್ತಾರೆ. ಫೇಲಾಗಿದ್ದರೆ, ಈಗ ಹೇಗಿದ್ದರೂ ಫಲಿತಾಂಶದ ಬಗ್ಗೆ ಅನುಮಾನ ವ್ಯಕ್ತವಾಗಿ ಗಲಾಟೆ ನಡೆಯುತ್ತಿದೆಯಲ್ಲ, ವ್ಯಾಲ್ಯುಯೇಷನ್ ಮಿಸ್ಟೇಕ್ ಅಂತಾರೆ' ಅಂದ್ರು.

ಹೌದಲ್ವಾ... ಯಾಗ ಅನ್ನೋದು ಸೇಫ್ಟಿ ಜೋನು!

■ ಎಚ್ಚೆಲ್ಕೆ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧದೇವ

...ರ ಬುಡಕಟ್ಟು, ಬುದ್ಧನ ಬುಡಕಟ್ಟಿನ ಮೂಲ. ...ರನ್ನು ಸಮ್ಮೋಹನಗೊಳಿಸಲು ವಿಷ್ಣು ಬುದ್ಧನಾಗಿ ...ದ ಕಥೆ ಇತ್ಯಾದಿಗಳೆಲ್ಲಾ ಒಂದು ಪಕ್ಕಕ್ಕೆ ಇರಲಿ.

...ಅಂತರ್ಜಾಲಗಳಲ್ಲಿ ದೇವರು, ಧರ್ಮ, ತತ್ವ ಮತ್ತು ...ತಗಳ ಬಗ್ಗೆ ಅಪಾರವಾದಂತಹ ಚರ್ಚೆಗಳು ...ಯುತ್ತಿರುತ್ತವೆ. ಬಹಳ ವಿವೇಚನೆಯಿಂದ, ಸಾಕಷ್ಟು ...ರಗಳನ್ನು ಇಟ್ಟುಕೊಂಡು ವಿಷಯ ಮಂಡನೆ ...ವವರದು ಒಂದು ಗುಂಪಾದರೆ, ತಮ್ಮ ಒಳಗಣ್ಣಿಗೆ ...ಕೊಂಡಂತಹ ವಿಚಾರಗಳನ್ನು ಯಾವ ಹಿಂಜರಿಕೆಯೂ ...ಲ್ಲದೇ ಪ್ರತಿಪಾದಿಸುವವರದು ಇನ್ನೊಂದು ಗುಂಪು. ಅಲ್ಲೂ ...ವು ಹಂತದ ಲಾಜಿಕ್ ಇರುತ್ತದೆ. ಮತ್ತೊಂದು ...ರೋಧಿಸುವುದಕ್ಕಾಗಿಯೇ ಅಥವಾ ಸಮರ್ಥಿಸುವು...ಗಾಗಿಯೇ ಹುಟ್ಟಿಬಂದವರು. ಅವರು ವಿರೋಧಿಸಬೇಕು ...ವಾ ಸಮರ್ಥಿಸಬೇಕು ಎಂದು ಅವರ ಜನ್ಮಪೂರ್ವ...ದಲ್ಲೇ ನಿರ್ಧರಿತವಾಗಿರುವ ಕಾರಣದಿಂದ ಸುಖಾಸುಮ್ಮನೆ ...ರೋಧಿಸುತ್ತಾರೆ ಅಥವಾ ಸಮರ್ಥಿಸುತ್ತಾರೆ. ಅದೇನು ...ಇದೆ ಎಂದೂ ನೋಡಲಾಗದವರು, ಅರಿತುಕೊಳ್ಳಲಾ...ಗದವರು.

...ಎಂದೂ ಧರ್ಮವನ್ನು ಶಿವಸೇನೆ, ಶ್ರೀ ರಾಮಸೇನೆ, ...ಬಜರಂಗದಳ ಅಥವಾ ಸಂಘ ಪರಿವಾರದವರ ಸುಪರ್ದಿಗೆ ... ಸುಮ್ಮನಾಗಿರುವಂತಹ ನಿಷ್ಕರೇ ಎಲ್ಲಾ ಹಿಂದೂ...ಗಳೇನಲ್ಲ. ಅವರಿಗೂ ಈ ಸೇನೆಗಳ ಮೂರ್ಖ...ತ್ವ ಮೊಂಡುತನದ ದಾಳಿಗಳು ಸರಿಹೋಗುವುದಿಲ್ಲ. ...ವು ಹಿಂದೂ ಧರ್ಮವೆಂಬುದು ಒಂದು ಸಾಂಸ್ಥಿಕ ...ಧರ್ಮವಲ್ಲ, ಅದೊಂದು ಜೀವನ ಪದ್ಧತಿ ಎಂದು ಒಪ್ಪುತ್ತಾರೆ. ...ಯೋಗ, ತಂತ್ರ, ಪ್ರಾಣಾಯಾಮ, ಉಪನಿಷತ್ತು, ವೇದ...ಗಳನ್ನೂ, ದರ್ಶನ, ಮೀಮಾಂಸೆ, ಗೀತೆಗಳು (ಅಷ್ಟಾವಕ್ರ ಗೀತೆ, ಭಗವದ್ಗೀತೆ), ಸೂತ್ರಗಳು (ಬ್ರಹ್ಮಸೂತ್ರ, ...ದನ ಭಕ್ತಿಸೂತ್ರ, ಪತಂಜಲಿಯ ಯೋಗಸೂತ್ರಗಳು ...ಇತ್ಯಾದಿ); ಎಲ್ಲವನ್ನೂ ಗಂಭೀರವಾಗಿ ಪರಿಗಣಿಸಿಕೊಂಡು, ...ಗಳಲ್ಲಿ ಹುದುಗಿರುವಂತಹ ಮೌಲ್ಯಗಳನ್ನು ಹೆಕ್ಕಿ...ವಾಗಿ ಪ್ರಸ್ತುತಪಡಿಸುತ್ತಾ ಹಿಂದೂ ಧರ್ಮದ ...ಯನ್ನು ಎತ್ತಿ ಹಿಡಿಯಲು ಪ್ರಯತ್ನಿಸುವ ಮನಸ್ಸುಗಳೂ ... ಅಂತಹವರಲ್ಲಿ ಕೆಲವರು ಪ್ರಸ್ತುತಪಡಿಸುವ ವಿಚಾರವನ್ನು ...ನೋಡಿ.

ನವಿರು ಹಿಂದೂವಾದಿಗಳು

...ವಿಷ್ಣುವೇ ಧರ್ಮ ಸಂಸ್ಥಾಪನೆಗೆ ಧರೆಗಿಳಿದು ಬುದ್ಧನ ...ಅವತಾರವಾಗಿರುವುದನ್ನು ಒಪ್ಪುವ ಮನಸ್ಥಿತಿ ಅವರದು.

"ಕಾಡುಗಳಲ್ಲಿ, ಜನರಹಿತ ಪ್ರದೇಶಗಳಲ್ಲಿ ವಸತಿಗಳನ್ನು ...ಮಾಡಿಕೊಂಡು, ಅಲ್ಲಿ ಧ್ಯಾನಾದಿ ಧಾರಣಗಳಿಂದ ...ಜ್ಞಾನೋದಯವಾದಮೇಲೆ ಊರುಗಳನ್ನು ಪ್ರವೇಶಿಸಿ, ...ರಿಗೆ ಮತ್ತು ಎದುರಾದಂತಹ ರಾಜರುಗಳಿಗೆ ಆಳವಾದ ...ದ ಮತ್ತು ಸತ್ಯದ ಬೆಳಕನ್ನು ಮುಟ್ಟಿಸುತ್ತಾ, ಉಪನಿಷತ್ತಿನ ...ಧಾರೆಯನ್ನು ಎಲ್ಲೆಡೆಗೂ ಪಸರಿಸುತ್ತಾ ಬರುತ್ತಿದ್ದ ...ನಿಷತ್ತಿನ ಜ್ಞಾನಿಗಳನ್ನು ಬ್ರಾಹ್ಮಣ ಪುರೋಹಿತರು ...ಬಿಟ್ಟುಬಿಟ್ಟರು ಅಥವಾ ಬೇಕೆಂದೇ ಕಡೆಗಣಿಸಿದರು. ...ಕ್ಕೂ ಮುಖ್ಯ ಕಾರಣವೆಂದರೆ, ಇಂತಹ ಜ್ಞಾನಗಳು ...ಮಾನ್ಯರಿಗೆ ದೊರಕಬಾರದೆಂದು ಬ್ರಾಹ್ಮಣರು ಮುಚ್ಚಿಟ್ಟಿದ್ದರು. ಆದರೆ ಈ ಬ್ರಹ್ಮಜ್ಞಾನಿಗಳು ಅವನ್ನೆಲ್ಲವನ್ನೂ ...ಮುಕ್ತವಾಗಿ ಬಯಲಿಗೆ ತಂದುಬಿಟ್ಟಿದ್ದರು. ಇದರಿಂದ ...ಪುರೋಹಿತ ವರ್ಗಕ್ಕೆ ಅಪಾರವಾದ ಕೋಪವೂ ಇತ್ತು."

"ಆದರೆ, ಬುದ್ಧ ಉಪನಿಷತ್ತುಗಳನ್ನು ಓದಿ ಅವುಗಳನ್ನು ...ನ ಮಾಡಿಕೊಂಡು ಉಪನಿಷತ್ತನ್ನೇ ಪ್ರಚಾರ ...ಮಾಡಬೇಕೆಂದಿಲ್ಲದಿದ್ದರೂ, ತನ್ನದೇ ಆದಂತಹ ಆಳವಾದ ...ನ, ಧಾರಣ ಮತ್ತು ಸಮಾಧಿಗಳಲ್ಲಿ ತೊಡಗಿಕೊಂಡು ...ಜ್ಞಾನೋದಯಹೊಂದಿದನು. ಆ ಜ್ಞಾನವು ಉಲ್ಲೇಖಿಸಲಿ ...ವಾ ಉಲ್ಲೇಖಿಸದಿರಲಿ, ಉಪನಿಷತ್ತಿನ ಋಷಿಗಳಿಗೆ ...ಸಮಾನಾಗಿರುವಂತಹವೇ ಆಗಿವೆ. ಬುದ್ಧನಿಗೆ ಹೊಸ ...ಧರ್ಮವನ್ನು ಸ್ಥಾಪಿಸಬೇಕೆಂಬುದೇನೂ ಇರಲಿಲ್ಲ, ತಾನು ...ಜ್ಞಾನ ಮತ್ತು ಪ್ರಜ್ಞೆಯನ್ನು ಹರಡಿಸುವುದರಲ್ಲಿ ...ಹೊಂದಿದಂತಹ ಸಂಘವನ್ನು ಶಿಸ್ತಿನಿಂದ ...ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಇತ್ತು, ಬುದ್ಧನು ...ರುವಂತಹ ಕರ್ಮ, ಜನ್ಮಾಂತರ ಮತ್ತು ಧರ್ಮವೆಲ್ಲವೂ ...ನ ಧರ್ಮದವೇ ಆಗಿದ್ದು, ಅದನ್ನು ಸಮಾಜದ ... ವರ್ಗ ಮತ್ತು ಶ್ರೇಣಿಯ ಜನಕ್ಕೆ ತಲುಪಿಸುವಂತೆ ...ಮಾಡಿದನು."

"ಬುದ್ಧ ಜನಸಾಮಾನ್ಯರಿಗೆ ನಿಲುಕದಂತಹ ಸಂಸ್ಕೃತದಲ್ಲಿ ...ದೆ, ಪಾಲಿಯಂತಹ ಆಡುನುಡಿಯಲ್ಲಿ ಮಹತ್ತರ ...ಬೋಧೆ ಮಾಡತೊಡಗಿದ್ದು ಜನರಲ್ಲಿ ...ಬಹಳ ಸುಲಭವಾಗಿ ಜ್ಞಾನಸಿದ್ಧಿ ಮತ್ತು ಸತ್ಯದರ್ಶನವಾಗತೊಡಗಿತು. ಜೊತೆಗೆ ಬಡವರಿಗೆ


ಸುಲಭವಾಗಿ ಜ್ಞಾನಸಿದ್ಧಿ ಮತ್ತು ಸತ್ಯದರ್ಶನವಾಗತೊಡಗಿತು. ಜನ್ಮಾಂತರದ ಕರ್ಮಗಳನ್ನು ಹೋಗಲಾಡಿಸಿಕೊಳ್ಳಲು ಬುದ್ಧ ಬಹಳ ಸ್ಪಷ್ಟವಾದ ಮಾರ್ಗ ತೋರಿದ. ಆದರೆ ಈ ಮೊದಲು ಇವಕ್ಕೆಲ್ಲಾ ಬಹಳ ದುಬಾರಿಯಾದ ಸಾಂಪ್ರದಾಯಿಕ ಆಚರಣೆಗಳು ಮತ್ತು ಆಚಾರಗಳು ಬ್ರಾಹ್ಮಣರಿಂದ ಮಾಡಿಸಲ್ಪಡುತ್ತಿದ್ದವು. ಹೀಗಾಗಿ ಬುದ್ಧನನ್ನು ಅನುಸರಿಸಲು ಸಾಮಾನ್ಯ ಜನರಿಗೆ ಮತ್ತಷ್ಟು ಆಕರ್ಷಣೆಯೆನಿಸತೊಡಗಿತು."

"ಹೊರಗಿನಿಂದ ದೇವರನ್ನು ಒಲಿಸಿಕೊಳ್ಳುವ ಬದಲಾಗಿ, ಮನಸ್ಸನ್ನು ಒಳಮುಖವಾಗಿಸಿಕೊಳ್ಳುವ ಬಗೆಯನ್ನು ಜನರು ಕಂಡುಕೊಳ್ಳತೊಡಗಿದರು. ಎಲ್ಲವೂ ನಿನ್ನ ಮನಸ್ಸಿನಲ್ಲಿದೆ, ಅದನ್ನು ನಿಯಂತ್ರಣದಲ್ಲಿಡು ಎಂಬ ವಾಕ್ಯ ಅವರಿಗೆ ನಿಜವೆಂಬ ಅರಿವಿಗೆ ಬರತೊಡಗಿತ್ತು."

ಉದಾರ ಹಿಂದೂವಾದಿಗಳ ಪ್ರಕಾರ, ಬುದ್ಧನು ಹೇಳುವುದೆಲ್ಲಾ ಉಪನಿಷತ್ತಿನ ವಿಷಯಗಳೇ. ಅವರ ವಿಚಾರಸರಣಿ ಹೀಗೇ ಮುಂದುವರಿಯುತ್ತದೆ.

"ಯಾವುದೇ ಧರ್ಮದ ಒಂದು ಅಂಶವೆಂದರೆ, ತನ್ನಿಂದ ದೇವರನ್ನು ಹೊರಗಿರಿಸಿಕೊಂಡು ನೋಡುವುದು, ಅವನಿಗೆ ವಿಧೇಯಕನಾಗಿ ಶರಣಾಗಿರುವುದು. ಕರುಣೆ ಮತ್ತು ಮಮತೆಯಿಂದ ಕೂಡಿರುವ ದೇವರಲ್ಲಿ ಶರಣುಹೋಗುವುದು. ಆದರೆ, ಬುದ್ಧನಲ್ಲಿ ಅದಾಗಲಿಲ್ಲ, ಬದಲಿಗೆ ಕರುಣಾಳು ದೇವರನ್ನು ಹೊರಗಿಟ್ಟು ನೋಡುವ ಬದಲು, ಆ ಕರುಣಾಳು ದೇವರ ಗುಣವನ್ನೇ ತನ್ನ ಗುಣವಾಗಿಸಿಕೊಳ್ಳುವುದರ ಮೂಲಕ 'ಕರುಣಾಮಯಿ' ಆಗುವುದರ ಮೂಲಕ ತಾನೇ 'ಅದು'





ಆಗುವುದು. ಮಾನಸಿಕವಾಗಿಯೂ ಇದು ಸರಳ ಮತ್ತು ಮುದಕರ. ಅಲ್ಲದೇ ಅಲೆಗಳಿಂದ ತುಂಬಿತುಳುಕುತ್ತಿರುವ ಸಂಸಾರ ಸಾಗರದಲ್ಲಿ ಮುಳುಗಿ, ಅದರಲ್ಲಿ ನರಳುತ್ತಾ ಕರುಣೆಗಾಗಿ ಅಂಗಲಾಚುವ ಬದಲು, ದಂಡೆಯಲ್ಲಿ ನಿಂತು ಸಂಸಾರವನ್ನು ಸಾಕ್ಷೀಕರಿಸುತ್ತಾ 'ನೋಡುವುದು'."

ಹೀಗೆ ಮುಂದುವರಿಯುತ್ತಾ ಅವರ ವಿಚಾರಸರಣಿಯು ಕೊನೆಗೆ ಹೇಳುವುದೇನೆಂದರೆ, ಬ್ರಾಹ್ಮಣ ಪುರೋಹಿತ ವರ್ಗವು ನಡೆಸಿದಂತ ಸ್ವಾರ್ಥಪರ ಆಚರಣೆ ಮತ್ತು ಒಡಂಬಡಿಕೆಗಳಿಂದಾಗಿ ಜನರಲ್ಲಿ ನಂಬಿಕೆಯನ್ನು ಉಳಿಸಿಕೊಳ್ಳಲಾಗದೇ ಹೋದ ದೇವರ ಪರಿಕಲ್ಪನೆಯನ್ನು ಬೇರೊಂದು ರೀತಿಯಲ್ಲಿ ಮರುಸ್ಥಾಪನೆ ಮಾಡುವ ಅಗತ್ಯವಿತ್ತು, ತಾನೇ 'ಕರ್ಮ' ಮಾಡುವವನಾದ್ದರಿಂದ, ತನ್ನ ಕರ್ಮದ ಜವಾಬ್ದಾರಿಯನ್ನು ತಾನೇ ಹೊರುವಂತಹ ಹೊಣೆಗಾರಿಕೆ ಉಳ್ಳ ಮನುಷ್ಯನನ್ನಾಗಿ ಬುದ್ಧ ಮಾಡಲು ಯತ್ನಿಸಿದನು. 'ಗಾಡ್ ಈಸ್ ನೋವೇರ್' ಎಂದು ಹೇಳುತ್ತಾ, ಗಾಡ್ ಈಸ್ ನೌ ಹಿಯರ್ ಎಂದು ಮಾಡಿದನೆಂದು ಅವರ ಲಹರಿ.

ಇದನ್ನು ಬಹಳಷ್ಟು ಮಂದಿ ಪ್ರಗತಿಪರ ಹಿಂದೂ ಧರ್ಮಪ್ರೇಮಿಗಳು ಹಂಚಿಕೊಂಡಿರುವುದನ್ನು ನಾನು ಅಂತರ್ಜಾಲದಲ್ಲಿ ಕಂಡೆ.

ಅವರಿಗಿರುವ ಸಮಸ್ಯೆ ಎಂದರೆ, ಬುದ್ಧನ ಮೇಲೆ ಪ್ರೇಮ, ಅವನ ವಿಚಾರಗಳ ಮೇಲೂ ಒಲವು ಆದರೆ ಹಿಂದೂ ಧರ್ಮದ ಮೇಲೂ ಅಭಿಮಾನ. ಆದ್ದರಿಂದ ಬುದ್ಧನ ವಿಚಾರಗಳನ್ನು ಹಿಂದೂ ಧರ್ಮದ ಕಂಸಗಳಲ್ಲಿ ಬರುವಂತಹ ವಿಚಾರಗಳಿಗೆ ತಾಳೆ ಮಾಡುವ ಅಥವಾ ಹೊಂದಿಸುವ ಪ್ರಯತ್ನಗಳು ಇಲ್ಲಿ ಆಗುತ್ತವೆ. ಅದಕ್ಕೂ ಮಿಗಿಲಾಗಿ ಜನಸಾಮಾನ್ಯರಲ್ಲಿ ರೂಢಿಯಲ್ಲಿದ್ದ ವಿಚಾರಗಳು ಮತ್ತು ನಡಾವಳಿಗಳನ್ನೇ ಬುದ್ಧನೇ ಆಗಲಿ ಇತರರೇ ಆಗಲಿ ಮಾತಾಡಿರುತ್ತಾರೆ. ಹಾಗಾಗಿ ರೂಢಿಗತವಾಗಿರುವಂತಹ ಎಲ್ಲಾ ವಿಚಾರಗಳನ್ನು ಒಂದು ಧಾರ್ಮಿಕ ಚೌಕಟ್ಟಿನಲ್ಲಿ ಬಂಧಿಸುವ ಅಗತ್ಯವೇನಿರುವುದಿಲ್ಲ.

ಇಂತಹ ಲೇಖನಗಳ ಜೊತೆಯಲ್ಲಿ ಮತ್ತೊಂದು ಸಾಲನ್ನೂ ನಾನು ನೋಡಿದೆ.

"ಸ್ವಯಂ ದೇವರಲ್ಲದೇ ಮತ್ತಿನ್ನಾರು ಹೇಳಲು ಸಾಧ್ಯ ದೇವರಿಲ್ಲವೆಂದು. ಆದ್ದರಿಂದಲೇ ನಾನು ಹೇಳುವುದೇನೆಂದರೆ, ಬುದ್ಧದೇವನಿಗೆ ನವಿರಾದ ಮತ್ತು ಪರಿಣಾಮಕಾರಿಯಾದಂತಹ ಹಾಸ್ಯಪ್ರಜ್ಞೆ ಇತ್ತು ಎಂದು."

ಬುದ್ಧನೆಂಬ ಗುರು

ಬುದ್ಧನು ನಾಸ್ತಿಕನಲ್ಲ, ದೈವ ವಿರೋಧಿಯಲ್ಲ, ಬುದ್ಧನೇ ಸ್ವಯಂದೇವ. ಬುದ್ಧನು ಹಿಂದೂ ಧರ್ಮವನ್ನು ವಿರೋಧಿಸಲು ಪ್ರಜ್ಞಾವಂತಿಕೆಯ, ವೈಚಾರಿಕತೆಯ ದಂಡಯಾತ್ರೆಗೆಂದು ಹೊರಟವನಲ್ಲ. ಹಿಂದೂ ಧರ್ಮದಲ್ಲಿರುವ ಸೂಕ್ಷ್ಮತೆಗಳನ್ನು ಜನಸಾಮಾನ್ಯರಿಗೆ ತಲುಪಿಸಲೆಂದು ಅವತಾರವೆತ್ತಿದ ಮಹಾವಿಷ್ಣುವೇ ಅವನು! ದೇವರ ಮತ್ತು ಜನರ ಮಧ್ಯೆ ಏಜೆಂಟರ ಹಾಗೆ ವರ್ತಿಸುತ್ತಿದ್ದ ಬ್ರಾಹ್ಮಣ ಪುರೋಹಿತರ ಅಹಂಕಾರವನ್ನು ಬಗ್ಗು ಬಡಿಯಲು, ಜನರಿಗೆ ಜ್ಞಾನವನ್ನು ನೀಡಲು ಬ್ರಾಹ್ಮಣರ ದೈವವಾದ ವಿಷ್ಣುವೇ ಧರ್ಮವನ್ನು ಉಳಿಸಲು ಬುದ್ಧನ ಅವತಾರವನ್ನೆತ್ತಿ ಬರಬೇಕಾಯಿತು. ದೇವರು ನೇರವಾಗಿ ಮಾತನಾಡಲಾರ, ದೇವರ ಸಂಕೇತ ಭಾಷೆಯನ್ನು ವಿವರಿಸಲು, ಅದನ್ನು ಬಲ್ಲ ಮಧ್ಯವರ್ತಿಗಳು ಬೇಕು ಎಂದು ಜನರನ್ನು ಮೋಸಗೊಳಿಸುತ್ತಿದ್ದ ಪುರೋಹಿತರಿಂದ ಧರ್ಮವನ್ನು ವಿಷ್ಣು ಉಳಿಸಲೇಬೇಕಾಗಿತ್ತು, ಧರ್ಮ ಎಂಬ ಪಾಂಡಿತ್ಯದ, ಪುರೋಹಿತರ ಶಬ್ದವನ್ನು ಬಿಟ್ಟು, ಜನಸಾಮಾನ್ಯರ ಭಾಷೆಯಲ್ಲಿ ಧಮ್ಮ ಎಂದ ಬುದ್ಧ.

ಹೀಗೆ ಬ್ಲಾಗ್ ಒಂದರಲ್ಲಿ ಸಂಜಯ್ ರಾವ್ ಎಂಬುವವರ ವಾದಸರಣಿ ಮುಂದುವರಿಯುತ್ತದೆ. ಅವರ ಮುಖ್ಯ ಉದ್ದೇಶ; ಬುದ್ಧನು ವಿಷ್ಣುವಿನ ಅವತಾರವೇ ಎಂಬುದು.

ನಂತರ ಪುರೋಹಿತಶಾಹಿ ವರ್ಗವು ಬುದ್ಧನನ್ನು ಹೊಸ ಧರ್ಮದ ಸ್ಥಾಪಕನೆಂದು, ಅವನ ಸಂಘವನ್ನು ಹೊಸ ಧಾರ್ಮಿಕರನ್ನಾಗಿ ವರ್ಗೀಕರಣಗೊಳಿಸಿದರು. ಏಕೆಂದರೆ, ಅವನನ್ನೂ ತಮ್ಮಲ್ಲೇ ಇರಿಸಿಕೊಂಡುಬಿಟ್ಟರೆ ತಮ್ಮ ವ್ಯಾಪಾರ ವ್ಯವಹಾರ ನಡೆಯಲಾಗುವುದಿಲ್ಲ ಎಂದೂ, ಅವನಿಂದ ಮತ್ತೆ ತಮಗೆ ಇನ್ನಾವ ತೊಂದರೆಯೂ ಆಗಬಾರದೆಂದು ವಿಭಜನೆ ಮಾಡಿದರು.

ಇದಕ್ಕೆ ಅವರು ಓಶೋ ಹೇಳಿರುವ ಕಥೆಯೊಂದನ್ನು ಪೋಣಿಸುತ್ತಾರೆ.

ಬುದ್ಧನೊಮ್ಮೆ ಹಳ್ಳಿಯೊಂದನ್ನು ಪ್ರವೇಶಿಸಿದ. ಒಬ್ಬ ಹಳ್ಳಿಗ ಅವನನ್ನು ಕೇಳಿದ: "ದೇವರಿದ್ದಾನೆಯೇ?"

"ಇಲ್ಲ, ಖಂಡಿತವಾಗಿ ಇಲ್ಲ" ಎಂದು ಬುದ್ಧ ಉತ್ತರಿಸಿದ.

ಮಧ್ಯಾಹ್ನ ಮತ್ತೊಬ್ಬ ಮನುಷ್ಯ ಬಂದು ಬುದ್ಧನನ್ನು ಪ್ರಶ್ನಿಸಿದ.

"ದೇವರಿದ್ದಾನೆಯೇ?"

"ಹೌದು, ಖಂಡಿತವಾಗಿ ಇದ್ದಾನೆ" ಎಂದನಂತೆ ಬುದ್ಧ.

ಸಂಜೆಯ ಹೊತ್ತಿಗೆ ಮತ್ತೊಬ್ಬ ಮನುಷ್ಯ ಬಂದು ಕೇಳಿದನಂತೆ, "ದೇವರಿದ್ದಾನೆಯೇ?" ಎಂದು. ಆಗ ಬುದ್ಧ ಏನೊಂದೂ ಉತ್ತರಿಸದೇ ತನ್ನ ಕಣ್ಣುಗಳನ್ನು ಮುಚ್ಚಿಕೊಂಡು ಸುಮ್ಮನೆ ಹಾಗೆಯೇ ಕುಳಿತುಕೊಂಡನಂತೆ. ಪ್ರಶ್ನೆಯನ್ನು ಕೇಳಲು ಬಂದವನೂ ಹಾಗೆಯೇ ಕುಳಿತುಕೊಂಡನಂತೆ. ಇಬ್ಬರ ನಡುವೆಯೂ ಮೌನ ಸುಳಿಯಿತು. ಆ ನಿಶ್ಶಬ್ಧವಾದ ತರಂಗಗಳಲ್ಲಿ ಅದ್ಲೇನೋ ಸಂವಹನವಾಯಿತು.

ಆಗ ಆ ವ್ಯಕ್ತಿ ಬುದ್ಧನ ಕಾಲುಗಳಿಗೆರಗಿ ಹೇಳಿದನಂತೆ, "ನೀನೊಬ್ಬನೇ ನನ್ನ ಪ್ರಶ್ನೆಗಳಿಗೆ ಉತ್ತರಿಸಿದ್ದು" ಎಂದು.

ಬುದ್ಧನ ಆಪ್ತನಾದ ಅನುಯಾಯಿ ಆನಂದನಿಗೆ ಬಹಳ ಗೊಂದಲವಾಯಿತು.

"ಬೆಳಗ್ಗೆ ನೀನು ದೇವರಿಲ್ಲ ಎಂದು ಹೇಳಿದೆ. ಮಧ್ಯಾಹ್ನ ಇದ್ದಾನೆಂದು ಹೇಳಿದೆ. ಸಂಜೆ ಏನನ್ನೂ ಉತ್ತರಿಸಲೇ ಇಲ್ಲವಲ್ಲ! ಇದು ಹೇಗೆ? ಏನು ವಿಷಯ? ವಾಸ್ತವದಲ್ಲಿ ನಿಜವಾಗಿರುವುದೇನು?" ಎಂದು ಆನಂದ ಕೇಳಿದನಂತೆ.

ಅದಕ್ಕೂ ಬುದ್ಧ ಉತ್ತರಿಸಲಿಲ್ಲವಂತೆ. ಹಾಗೆಯೇ ನಿದ್ರೆಗೆಂದು ಹೋಗುವಾಗ ಬಿಡದೇ ಆನಂದ ಒತ್ತಾಯಿಸಿದನಂತೆ.


"ಮೊದಲು ನನ್ನ ಪ್ರಶ್ನೆಗೆ ಉತ್ತರವನ್ನು ನೀಡು. ಇಲ್ಲದಿದ್ದರೆ ನನಗೆ ನಿದ್ರೆ ಹೋಗಲು ಆಗುವುದಿಲ್ಲ. ನಾನು ಇಡೀ ದಿನ ನಿನ್ನ ಜೊತೆಗಿದ್ದೇನೆ. ಆ ಮೂವರಿಗೂ ಅವರಿಗೇ ಆದಂತಹ ಉತ್ತರಗಳು ಸಿಕ್ಕಿಬಿಟ್ಟವು. ಆದರೆ ಮೂರು ಉತ್ತರಗಳನ್ನು ಪಡೆದ ನನ್ನ ಗತಿಯೇನು? ನನಗೆ ನೀನು ಸರಿಯಾಗಿ ಉತ್ತರಿಸಬೇಕು" ಎಂದು ಹಟ ಹಿಡಿದ ಆನಂದ.

ಬುದ್ಧ, "ನಾನು ನಿನ್ನೊಡನೆ ಮಾತಾಡಲೇ ಇಲ್ಲ. ನೀನು ನನ್ನ ಕೇಳಲೇ ಇಲ್ಲ. ನಾನು ನಿನಗೆ ಉತ್ತರ ಕೊಟ್ಟಿದ್ದಲ್ಲ. ಮೊದಲ ವ್ಯಕ್ತಿ ನನ್ನ ಬಳಿಗೆ ಬಂದವನು ದೇವರನ್ನು ನಂಬುವವನು; ಆಸ್ತಿಕ, ಎರಡನೇ ಬಾರಿ ಬಂದವನು ನಾಸ್ತಿಕ; ದೇವರನ್ನು ನಂಬದವನು, ಮೂರನೆಯವರು ಜಿಜ್ಞಾಸು; ಓರ್ವ ಸತ್ಯಾನ್ವೇಷಕ. ದೇವರ ಕುರಿತಾಗಿ ನನ್ನ ಉತ್ತರಗಳೇನೂ ಇಲ್ಲ. ನನ್ನ ಉತ್ತರಗಳೇನಿದ್ದರೂ ಅದು ಪ್ರಶ್ನಿಸುವವನಿಗಾಗಿ. ನನ್ನ ಗಮನ ಮತ್ತು ಗಮ್ಯ ದೇವರಲ್ಲ, ಪ್ರಶ್ನಿಸುವ ವ್ಯಕ್ತಿ" ಎಂದು ಉತ್ತರಿಸಿದನಂತೆ.

ಇಲ್ಲಿಯೂ ಅದೇ ಆಗುತ್ತದೆ.

ಇಲ್ಲಿನ ನಿಜವಾದ ವಿಷಯಗಳು ದೇವರು, ಧರ್ಮ, ಬುದ್ಧ ಆಚಾರ್ಯರಿಗೆ ಸಂಬಂಧಪಡದೇ ಅವುಗಳ ಪರಿಕಲ್ಪನೆ ಅಥವಾ ಶ್ರದ್ಧೆಗಳಲ್ಲಿ ಬಂಧಿತರಾದವರ ಕುರಿತಾಗಿರುತ್ತದೆ. ■

ಗ್ರಾಮಗಳನ್ನು ಭ್ರಷ್ಟಗೊಳಿಸಿರುವ ಪಂಚಾಯತ್ ರಾಜ್



ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದ ಮೂಲ ಉದ್ದೇಶ ಅಧಿಕಾರದ ವಿಕೇಂದ್ರೀಕರಣ ಹಾಗೂ ಹುಲ್ಲು-ಬೇರು ಮಟ್ಟಕ್ಕೆ ಆಡಳಿತ ವ್ಯವಸ್ಥೆಯನ್ನು ದಾಟಿಸುವುದು. ಅಂದರೆ ಗ್ರಾಮದ ಜನರು ತಮ್ಮ ಅಭಿವೃದ್ಧಿ ತಾವೇ ಮಾಡಿಕೊಳ್ಳಲಿ ಎಂಬ ಘನ ಉದ್ದೇಶ ಅದರ ಹಿಂದಿತ್ತು. ಆದರೆ ನಿಜದಲ್ಲಿ ಆಗಿದ್ದು ಅಧಿಕಾರ ವಿಕೇಂದ್ರೀಕರಣದ ಜೊತೆಗೆ ಭ್ರಷ್ಟಾಚಾರದ ವಿಕೇಂದ್ರೀಕರಣ ಅಷ್ಟೇ! ಜತೆಗೆ ಈ ಪಂಚಾಯತ್ ರಾಜ್ ವ್ಯವಸ್ಥೆ ಎಲ್ಲಾ



ಮುಗ್ಧ ಹಳ್ಳಿಗರನ್ನೂ ಕುಟಿಲ ರಾಜಕಾರಣಿಗಳನ್ನಾಗಿ ಪರಿವರ್ತಿಸಿದೆ. ಹಿಂದೆಲ್ಲಾ ಕೇವಲ ಐದು ವರ್ಷಕ್ಕೊಮ್ಮೆ ವೋಟು ಹಾಕಿ ಆನಂತರ ತಮ್ಮ ಪಾಡಿಗೆ ತಾವು ಇರುತ್ತಿದ್ದ ಅಮಾಯಕ ಹಳ್ಳಿಗರು ಈಗ ತಮ್ಮ ವ್ಯವಸಾಯ ಬದಿಗಿಟ್ಟು ಫುಲ್‌ಟೈಮ್ ರಾಜಕೀಯಕ್ಕಿಳಿದಿದ್ದಾರೆ. ಈಗ ಪಟ್ಟಣಕ್ಕಿಂತ ಹೆಚ್ಚು ಕೀಳು ರಾಜಕೀಯ ಹಳ್ಳಿಯಲ್ಲಿ ನಡೆಯುತ್ತದೆ. ಪಟ್ಟಣದಲ್ಲಿ ಒಬ್ಬ ಬೇಕಾದರೆ ನಿರ್ಲಿಪ್ತ-ನಿಷ್ಪಕ್ಷವಾಗಿ ಇರಬಹುದು ಯಾರೂ ಅವನನ್ನು ಪೀಡಿಸುವುದಿಲ್ಲ, ಆದರೆ ಹಳ್ಳಿಯಲ್ಲಿ ಯಾವನೇ ಒಬ್ಬ ನಿರ್ಲಿಪ್ತ-ನಿಷ್ಪಕ್ಷವಾಗಿ ಇರಲು ಸಾಧ್ಯವಿಲ್ಲ, ಯಾವುದಾದರೂ ಒಂದು ರಾಜಕೀಯ ಗುಂಪಿನಲ್ಲಿ ಸೇರಿಕೊಳ್ಳಲೇಬೇಕಾಗುತ್ತದೆ. ಆಮೇಲೆ ವಿರೋಧಿ ಗುಂಪಿನಿಂದ ಕಿರುಕುಳ ಎದುರಿಸುವುದು ಹಳ್ಳಿಯಲ್ಲಿ ಅನಿವಾರ್ಯ. ಹಳ್ಳಿಯವರಿಗೆ ಇನತ್ತಿಗೂ ಹುಲ್ಲು-ಬೇರು ಮಟ್ಟಕ್ಕೆ ಬಂದಿರುವ ಅಧಿಕಾರ ಉಪಯೋಗಿಸಿ ತಮ್ಮ ಗ್ರಾಮದ ಅಭಿವೃದ್ಧಿ ತಾವೇ ಮಾಡಿಕೊಳ್ಳಬೇಕೆಂಬ ಹಠ ಹುಟ್ಟಿಯೇ ಇಲ್ಲ. ಸರಕಾರದ ಯೋಜನೆಗಳನ್ನು ದುರುಪಯೋಗಪಡಿಸಿ ತಮ್ಮ ಸ್ವಂತ ಅಭಿವೃದ್ಧಿ ಮಾಡಿಕೊಳ್ಳುವ ಹಪಾಹಪಿ ಮಾತ್ರ ಹಳ್ಳಿಗಳ ಮನೆಮನೆಗೆ ಮುಟ್ಟಿ ಹಳ್ಳಿಗರ ಮುಗ್ಧತೆಯನ್ನು ನಾಶ ಮಾಡಿದೆ. ಗೌತಮ ಬುದ್ಧನ ಸಾವಿಲ್ಲದ ಮನೆಯ ಸಾಸಿವೆಯಂತೆ ಭ್ರಷ್ಟಾಚಾರವಿಲ್ಲದ ಗ್ರಾಮ ಪಂಚಾಯತಿ ಇಂದು ಸಿಗುವುದು ಸಾಧ್ಯವಿಲ್ಲ. ಗ್ರಾಮ ಪಂಚಾಯತಿ ಮೂಲಕ ಮಾಡಿದ ಎಲ್ಲ ಸಾರ್ವಜನಿಕ ಕೆಲಸಗಳೂ ಅತಿ ಕಳಪೆಯಾಗಿದ್ದರೂ ಇದು ಹೀಗೇಕೆ ಎಂದು ಪ್ರಶ್ನಿಸಬೇಕಾದ ಪ್ರಜ್ಞಾವಂತರು ತಮ್ಮ ಹಳ್ಳಿಯ ವಾತಾವರಣ, ಕುಟುಂಬ- ಕುಟುಂಬಗಳೊಳಗಿನ ಸಂಬಂಧ ಹಾಗೂ ಜಾತಿ-ಜಾತಿಗಳೊಳಗಿನ ಸಾಮರಸ್ಯ ಕೆಡದಿರಲೆಂದು ಎಲ್ಲವನ್ನೂ ಸಹಿಸಿಕೊಂಡು ಸುಮ್ಮನಿದ್ದಾರೆ. ಹಳ್ಳಿಯ ಸಾಮಾಜಿಕ ಚೌಕಟ್ಟು ಸಣ್ಣದಾಗಿದ್ದು ಅಲ್ಲಿ ವೈಯಕ್ತಿಕ ವೈರತ್ವ ತಪ್ಪಿಸಬೇಕಾದ ಅನಿವಾರ್ಯತೆ ಇರುವುದರಿಂದ ಭ್ರಷ್ಟಾಚಾರಿಗಳನ್ನು ಪ್ರಶ್ನಿಸುವವರೇ ಇಲ್ಲವಾಗಿ ಭ್ರಷ್ಟಾಚಾರಕ್ಕೆ ಕಡಿವಾಣವೇ ಇಲ್ಲದಾಗಿದೆ. ನೀನೂ ತಿನ್ನು ನಾನೂ ತಿನ್ನುತ್ತೇನೆ, ಒಬ್ಬರ ಕಾಲು ಇನ್ನೊಬ್ಬರು ಎಳೆಯುವುದು ಬೇಡ, ಒಬ್ಬರ ಕಳ್ಳತನವನ್ನು ಇನ್ನೊಬ್ಬರು ಮುಚ್ಚಿ ಹಾಕೋಣ, ಕಾಗೆಯಂತೆ ಎಲ್ಲರೂ ಕೂಡಿತಿನ್ನೋಣ, ಗ್ರಾಮದ ಅಭಿವೃದ್ಧಿ ಸರಕಾರವೇ ಬೇಕಾದರೆ ಮಾಡಿಕೊಳ್ಳಲಿ ಎಂಬುದೇ ಇವತ್ತು ಪಂಚಾಯತ್ ರಾಜ್ ವ್ಯವಸ್ಥೆಯ ಒಳನೀತಿಯಾಗಿ ಬಿಟ್ಟಿದೆ.

ಚುನಾವಣಾ ಆಯೋಗವು ಗ್ರಾ.ಪ. ಚುನಾವಣೆಗೆ ನಿಂತಿರುವ ಅಭ್ಯರ್ಥಿಗಳಿಗೆ 84 ಬಗೆಯ ಬೇರೆ ಬೇರೆ ಚಿಹ್ನೆಗಳಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳುವಂತೆ ಸೂಚಿಸಿತ್ತು, ಕೆಲವರಿಗೆ ಮಚ್ಚು, ಕತ್ತಿ, ಚಾಕು, ಕತ್ತರಿ,. ರೇಜರ್ ಬ್ಲೇಡು, ಚಪ್ಪಲಿ ಮುಂತಾದ ಚಿಹ್ನೆಗಳು ಸಿಕ್ಕಿದ್ದು ಅಂತಹ ಅಭ್ಯರ್ಥಿಗಳು ಜನರಲ್ಲಿ ವೋಟು ಕೇಳುವಾಗ ಮುಜುಗರಪಡುತ್ತಿದ್ದಾರೆ. ಇನ್ನು ಕೆಲವೆಡೆ ಅಭ್ಯರ್ಥಿಯ ಕರಾಳ ಹಿನ್ನೆಲೆ ನೋಡಿ ಅವರಿಗೆ ಸರಿಯಾದ ಚಿಹ್ನೆಯನ್ನೇ ಚುನಾವಣಾ ಆಯೋಗ ನೀಡಿದೆ ಎಂದು ಹಳ್ಳಿಗರೇ ಕುಹಕವಾಡುತ್ತಿದ್ದಾರೆ. ಇದು ಹಳ್ಳಿಗಳಲ್ಲಿ ಹಾಸ್ಯ ತಮಾಷೆ ಉಕ್ಕಿಸುತ್ತಿದೆ ಎಂಬುದಷ್ಟೇ ಸಮಾಧಾನ.

- ಗಿರೀಶ್ ಟಿ ಕುಂಟೆ, ಬೆಳಗಾವಿ

ರಾಮಮಂದಿರಕ್ಕೂ ಮುನ್ನ ಜೈನ ಬಸದಿ ಮತ್ತು ಬೌದ್ಧ ವಿಹಾರಗಳನ್ನು ಹಿಂದಿರುಗಿಸಲಿ

ನರೇಂದ್ರ ಮೋದಿಯವರು ಪ್ರಧಾನಿಯಾಗಿ ಒಂದು ವರ್ಷವಾದ ಸಂದರ್ಭದಲ್ಲಿ ಅವರನ್ನು ಸಂಘ ಪರಿವಾರದವರು ಅಭಿನಂದಿಸಿದರಾದರೂ ರಾಮ ಮಂದಿರ ಸಾಕಾರಗೊಳಿಸುವ ನಿಟ್ಟಿನಲ್ಲಿ ಮೋದಿಯವರು ಕ್ರಮ ಕೈಗೊಳ್ಳದಿರುವ ಬಗ್ಗೆ ಖೇದ ವ್ಯಕ್ತಪಡಿಸಿದ್ದಾರೆ. ಬಾಬ್ರಿ ಮಸೀದಿಯ ಸ್ಥಳದಲ್ಲಿ ರಾಮ ಮಂದಿರ ಕಟ್ಟುವ ಬೇಡಿಕೆ ಇಡುವವರು ಇದೇ ನೀತಿ ಹಲವು ಹಿಂದೂ ಮಂದಿರಗಳಿಗೆ ಮೊದಲು ಅನ್ವಯಿಸಿ ಮೇಲ್ಪಂಕ್ತಿ ಹಾಕಿ ನಂತರ ಅಯೋಧ್ಯೆ ರಾಮಮಂದಿರದ ಬೇಡಿಕೆ ಇಡಬೇಕಿತ್ತು, ಅಂದರೆ ಬೌದ್ಧ ವಿಹಾರಗಳನ್ನು ಹಾಗೂ ಜೈನ ಬಸದಿಗಳನ್ನು ಹಿಂದೂ ವೈದಿಕ ದೇವಾಲಯಗಳಾಗಿ ಬಲಾತ್ಕಾರದಿಂದ ಅಥವಾ ಕುತಂತ್ರದಿಂದ ಪರಿವರ್ತಿಸಿರುವ ಬಗ್ಗೆ ಸಂಶೋಧನೆ ನಡೆಸಿ ಅವುಗಳನ್ನು ಮರಳಿ ಬೌದ್ಧ-ಜೈನ ಮತಸ್ಥರಿಗೆ ಕೊಡಬೇಕಾದುದು ಸಹ ಮೋದಿ ಸರಕಾರದ ಕರ್ತವ್ಯ ತಾನೇ.

ನಮ್ಮ ಕರಾವಳಿಯ ಕೋಟಿಗಟ್ಟಲೆ ಆದಾಯವುಳ್ಳ ಹಿಂದೂ ಕ್ಷೇತ್ರಗಳನ್ನೇ ತೆಗೆದುಕೊಳ್ಳಿ. ಧರ್ಮಸ್ಥಳ ಮತ್ತು ಕದ್ರಿ ದೇವಳಗಳು ಮಂಜುಶ್ರೀ ಎಂಬ ಬೋಧಿಸತ್ವವನ್ನು ಪೂಜಿಸುವ ವಿಹಾರವಾಗಿತ್ತು, ಮಂಜುಶ್ರೀಯೇ ನಂತರ ಮಂಜುನಾಥ ಆಗಿ ಮತಾಂತರ ಹೊಂದಿದ್ದು, ಉಡುಪಿಯಲ್ಲಿ ಚಂದ್ರನಾಥ ಮತ್ತು ಆದಿನಾಥ ಬಸದಿಗಳು ಚಂದ್ರಮೌಳೀಶ್ವರ ಮತ್ತು ಅನಂತೇಶ್ವರ ದೇವಳಗಳಾದವು. ಕಟೀಲು ದುರ್ಗಾಪರಮೇಶ್ವರಿ ಕ್ಷೇತ್ರ ಜೈನರ ಪದ್ಮಾವತಿಯೆಂಬ ನಾಗ-ಯಕ್ಷಿಯ ಬಸದಿಯಾಗಿತ್ತು, ಕೊಲ್ಲೂರು ಸಹ ಅಂಬಿಕಾ ಎಂಬ ಜೈನ ಯಕ್ಷಿಯ ಬಸದಿಯಾಗಿತ್ತು. ಒಂದು ವೇಳೆ ಈ ಹಿಂದೂ ಕ್ಷೇತ್ರಗಳಲ್ಲಿ ಈಗಲೂ ದೈವಿ ಮಹಿಮೆ ಇರುವುದು ನಿಜವೇ ಆಗಿದ್ದರೆ ತಾರ್ಕಿಕವಾಗಿ ಅದು ಅಲ್ಲಿಯ ಮೂಲ ದೈವೀಶಕ್ತಿಗಳಾದ ಜೈನ-ಬೌದ್ಧ ಯಕ್ಷ-ಯಕ್ಷಿಯರ ಮಹಿಮೆ ಆಗಿರಬೇಕೇ ಹೊರತು ವೈದಿಕ ದೇವ-ದೇವಿಯರ ಮಹಿಮೆ ಆಗಿರಲು ಸಾಧ್ಯವೇ ಇಲ್ಲ. ತಿರುಪತಿ ಬಾಲಾಜಿಯೂ ಬೌದ್ಧರ ಬಲಿಜೀ (ಬಲಿ ಚಕ್ರವರ್ತಿ) ವಿಹಾರ ಆಗಿತ್ತಂತೆ. ಹಾಗಾದರೆ ತಿರುಪತಿಯಲ್ಲಿ ಮಂಡೆ ಬೋಳಿಸಿ ನಾಮ ಹಾಕಿ ನಾವು ಮಾಡಿದ ಪೂಜೆ ಮುಟ್ಟುವುದು ಬೌದ್ಧರ ಬಲೀಂದ್ರನಿಗೆ ಹಾಗೂ ಅವನ ಹೆಂಡತಿಯರಾದ ಸಿರಿ ಮತ್ತು ಪದ್ಮಾವತಿಗೆ. ಈ ಬೌದ್ಧ ಶಕ್ತಿಗಳ ಕೃಪೆಯಿಂದಲೇ ತಿರುಪತಿಯಲ್ಲಿ ಹಿಂದೂ ಭಕ್ತರ ಇಷ್ಟಾರ್ಥ ಸಿದ್ಧಿಸುವುದು ಎಂದು ಒಪ್ಪಿಕೊಳ್ಳುವುದು ವೈದೀಕರಿಗೆ ಅನಿವಾರ್ಯ. ಹಾಗಾಗಿ ಕೋಟ್ಯಾಂತರ ಆದಾಯ ಇರುವ ಈ ಎಲ್ಲ ಕ್ಷೇತ್ರಗಳನ್ನು ಮರಳಿ ಜೈನ-ಬೌದ್ಧ ಧರ್ಮದವರಿಗೆ ಕೊಡಬೇಕಾದುದು ನ್ಯಾಯ ತಾನೇ. ಈ ಘನ ಕೆಲಸ ಮೊದಲು ಮಾಡಿ ಆನಂತರ ಬಾಬ್ರಿ ಮಸೀದಿಯ ಬಗ್ಗೆ ಮಾತನಾಡಿದರೆ ಅದಕ್ಕೊಂದು ತರ್ಕವಿರುತ್ತದೆ.

ಪೂಜ್ಯ ಪಾರ್ಶ್ವನಾಥ ತೀರ್ಥಂಕರರ ತಲೆಯ ಮೇಲೆ ನೆರಳಾಗಿದ್ದ ಧರಣೇಂದ್ರನೆಂಬ ನಾಗರಾಜ ಹಾಗೂ ಪದ್ಮಾವತಿ ಎಂಬ ನಾಗರಾಣಿಯ ಪೂಜೆಗೆ ಹಾಕುತ್ತಿದ್ದ ಬೃಹತ್ ಮಂಡಲ (ರಂಗೋಲಿ) ನಂತರ ಹಿಂದೂಗಳ ನಾಗಮಂಡಲವಾಗಿ ಪರಿವರ್ತನೆಗೊಂಡು ಈಗ ಒಂದೇ ಏಟಿಗೆ ಐವತ್ತು ಲಕ್ಷ ರೂಪಾಯಿ ಕಬಳಿಸುವ ದುಬಾರಿ ಪೂಜೆಯಾಯಿತು. ಮೂಲದಲ್ಲಿ ಹಿಂದೂಗಳಲ್ಲಿ ಮಂಡಲ (ರಂಗೋಲಿ) ಪೂಜೆ ಇರಲೇ ಇಲ್ಲ, ಅದನ್ನು ಅವರು ಜೈನರಿಂದ ಎರವಲು ಪಡೆದಿದ್ದು ಎಂದು ಈಗಿನ ಹಿಂದೂಗಳಿಗೆ ಗೊತ್ತಿಲ್ಲ, ಕರಾವಳಿಯ ಹಿರಿಯ ಜಾನಪದ ಸಂಶೋಧಕರಾದ ಪೆರೂರು ಜಾರು ಇವರು ಹೇಳುವಂತೆ, ಯುದ್ಧದಲ್ಲಿ ಮೃತನಾದ ಯೋಧನ ಪತ್ನಿಯನ್ನು ಚಿತೆಯಲ್ಲಿ ಬಲಾತ್ಕಾರದಿಂದ ಜೀವಂತ ಸುಟ್ಟಿದ್ದಕ್ಕೆ ಸಾಕ್ಷಿಯಾದ ಘೋರ ಸ್ಮಶಾನದ ಕಲ್ಲು (ಮಾಸ್ತಿ ಕಲ್ಲು) ಸಹ ಉಡುಪಿಯ ಹತ್ತಿರದ ಕೆಲವು ಹಳ್ಳಿಗಳಲ್ಲಿ ವೈದಿಕರ ಸತ್ಯದೇವತೆ ಅಥವಾ ದುರ್ಗಾದೇವಿಯ ದೇಗುಲಗಳಾಗಿ ಪರಿವರ್ತನೆ ಹೊಂದಿದಂತಹ ಅಸಹ್ಯ ಸಂಗತಿಗಳೂ ನಡೆದಿವೆ. ಒಬ್ಬ ಅಸಹಾಯಕ ವಿಧವೆಯನ್ನು ಅಮಾನವೀಯವಾಗಿ ಸುಟ್ಟು ಕೊಂದಂತಹ ಅನಿಷ್ಟ ಸತಿ ವಿಧಿಗೆ ಸಾಕ್ಷಿಯಾದ ಅಪವಿತ್ರ ಕಲ್ಲನ್ನು ತಾವು ಪೂಜಿಸುತ್ತಿದ್ದೇವೆ ಎಂಬುದೇ ಈಗಿನ ಭಕ್ತರಿಗೆ ಗೊತ್ತಿಲ್ಲ! ಘೋರ ಸಾಮಾಜಿಕ ಅನಿಷ್ಟದ ಸಂಕೇತವಾದ ಈ ಸ್ಮಶಾನದ ಕಲ್ಲು ಯಾವಾಗಲೂ ಹೂವಿನಿಂದ ಮುಚ್ಚಿರುವುದರಿಂದ ಭಕ್ತರಿಗೆ ತಾವು ಪೂಜಿಸುತ್ತಿರುವುದು ಏನನ್ನು ಎಂಬುದೇ ಗೊತ್ತಿರುವುದಿಲ್ಲ, ದೇವರ ಹೆಸರಲ್ಲಿ ಜನರನ್ನು ಬೋಳಿಸಲು ಎಂತೆಂತಹ ಅಪವಿತ್ರ ಕರ್ಮಕಾಂಡ ಹಿಂದೂ ಸಮಾಜದಲ್ಲಿ ನಡೆದಿದೆ!

- ಅಭಿಷೇಕ್ ಪಡಿವಾಳ್ ಜೈನ್, ಸುಳ್ಯ

'ಮ್ಯಾಗಿ' ತಂದಿಟ್ಟ ಅಪಾಯಗಳು



ಹಲವು ವರ್ಷಗಳಿಂದಲೂ ಇಂತಹದ್ದೊಂದು ಅನುಮಾನ ಜನರಲ್ಲಿತ್ತು, ಇಲ್ಲಿನ ಕೆಲವೊಂದು 'ಫಾಸ್ಟ್'ಫುಡ್ ಹಾಗೂ ತಂಪು ಪಾನೀಯಗಳಲ್ಲಿ ಅನಾರೋಗ್ಯಕರ ಅಂಶಗಳು ಅದರಲ್ಲಿ ಪಾಲು ಪಡೆದುಕೊಳ್ಳುತ್ತಿದೆ ಎಂದು. ಆದರೆ ಇದೀಗ ಇದನ್ನು ಸಾಬೀತುಪಡಿಸುವಂತೆ ಉತ್ತರ ಪ್ರದೇಶದ ಆಹಾರ ಸಂಸ್ಕರಣ ಹಾಗೂ ಔಷಧ ನಿಯಂತ್ರಣ ಮಂಡಳಿಯು ಮಕ್ಕಳ ಅಚ್ಚುಮೆಚ್ಚಿನ, ಹೆತ್ತವರ ಕೆಲಸದ ಭಾರ ಕಡಿಮೆಗೊಳಿಸುವ ಮ್ಯಾಗಿಯಲ್ಲಿ ವಿಷಪೂರಿತ ಅಂಶವಿರುವುದಾಗಿ ಪತ್ತೆ ಹಚ್ಚಿದೆ. ಅಲ್ಲದೇ ಮ್ಯಾಗಿಯ ಪೋಷಕ ಸಂಸ್ಥೆ ಹೆಸರಾಂತ ನೆಸ್ಲೆ ಇಂಡಿಯಾ ಕಂಪನಿಯ ಮೇಲೆ ಕೇಸನ್ನೂ ದಾಖಲಿಸಿದೆ. ಮಾರುಕಟ್ಟೆಗೆ ಬಿಡುಗಡೆ ಗೊಳಿಸಿದ ಮ್ಯಾಗಿ ಉತ್ಪನ್ನವನ್ನು ಹಿಂಪಡೆಯುವಂತೆ ಎಚ್ಚರಿಸಿದೆ. ಇಷ್ಟೆಲ್ಲಾ ಆಗಿದ್ದರೂ ಅದನ್ನು ಸೇವಿಸುವ ಜನರಿಗೇನು ಕೊರತೆಯಿಲ್ಲ, ಹೆತ್ತವರು ತಮ್ಮ ಮಕ್ಕಳಿಗೆ ಈ ರೀತಿಯ ವಿಷಪೂರಿತ ಆಹಾರವನ್ನು ನೀಡುವುದಕ್ಕೂ ಇಲ್ಲವೇ ನೇರವಾಗಿ ಅನ್ನಕ್ಕೆ ವಿಷಹಾಕಿ ಉಣಿಸುವುದಕ್ಕೂ ಯಾವುದೇ ವ್ಯತ್ಯಾಸ ಇರಲಾರದು....

- ಇರ್ಷಾದ್ ಮುಹಮ್ಮದ್, ಕಿನ್ನಿಗೋಳಿ

ಮೋದಿಯೆಂಬ ಅಳಿಯನ ಕುರುಡು?

ಬಿಜೆಪಿಯನ್ನು ಖಡಾಖಂಡಿತವಾಗಿ ವಿರೋಧಿಸುವವರೆಲ್ಲ ಕಾಂಗ್ರೆಸನ್ನ ಪ್ರೀತಿಸುತ್ತಾರೆಂದೇನಿಲ್ಲ, ಆ ಕೋಮುಭೂತದ ಬದಲು ಈ ಭ್ರಷ್ಟಭೂತ ಸ್ವಲ್ಪಮಟ್ಟಿಗಾದರೂ ಸಹ್ಯ ಎಂದು ಅನಿವಾರ್ಯವಾಗಿ ಅರೆಮನಸ್ಸಿನಿಂದ ಒಪ್ಪಿದಂತೆ ತೋರುತ್ತಾರೆಯೇ ವಿನಃ ಇವರ್‍ಯಾರೂ ಕಾಂಗ್ರೆಸ್ ಹಿಂಬಾಲಕರಲ್ಲ. ಅಲ್ಲದೇ ಇಂಥವರೇ ಅತ್ತಿಂದಿತ್ತ ಇತ್ತಿಂದತ್ತ ತಮ್ಮ ಒಲವನ್ನು ಸಂದರ್ಭಕ್ಕೆ ತಕ್ಕಂತೆ ಬದಲಿಸಿಕೊಳ್ಳುವ (ನಿಜವಾದ ಪ್ರಜಾಪ್ರಭುತ್ವವನ್ನು ನಿರ್ಧರಿಸುವಂತಹ) ಮತಗಳೇ ವಿನಃ ಬಿಜೆಪಿಯ ಪಕ್ಕಾ ಬೆಂಬಲಿಗರಂತೆ 'ಸ್ಥಿರ'ವಾದವುಗಳಲ್ಲ. ಆರೇಳು ದಶಕಗಳಲ್ಲಿ ಕಾಂಗ್ರೆಸ್ ಏನು ಮಾಡಿವೆ ಅನ್ನುವುದಕ್ಕೂ ಮೊದಲು ಭಾರತದ ಮೊದಲ ಪ್ರಧಾನಿ ನೆಹರೂ ಬದಲು ಮೋದಿಯಂತಹ ಮನುವಾದಿಗಳ ಗುಲಾಮನೊಬ್ಬ ಆಗಿದ್ದರೆ ಇಡೀ ದೇಶವೇ ಸನಾತನವಾದಿಗಳ ರಂಗಸ್ಥಳವಾಗಿ ಮಾರ್ಪಾಟಾಗುತ್ತಿತ್ತೆಂಬುವದನ್ನ ಅಲ್ಲಗಳೆಯಲಾದೀತೆ? ಎಷ್ಟೇ ಭ್ರಷ್ಟತೆಯಿಂದ ಕೂಡಿದ್ದರೂ (ಬೆರಳೆಣಿಕೆಯ ಕೆಲವರನ್ನು ಬಿಟ್ಟರೆ ಬಹುತೇಕ ರಾಜಕಾರಣಿಗಳು ಅಖಾಡಕ್ಕಿಳಿಯುವುದೇ ಸ್ವಾರ್ಥ ಉದ್ದೇಶದಿಂದ; ದೇಶಸೇವೆಗಿಲ್ಲ) ದ್ವಿತೀಯ ಅಥವ ಕೊನೆಯ ಸ್ಥಾನ) ದೇಶಕ್ಕೆ ಕಾಂಗ್ರೆಸ್ಸಿನ ಕೊಡುಗೆ ಇದ್ದೇ ... ಮೋದಿಯಂತಹವರ ಪ್ರಕಾರ ಇಲ್ಲವೇ ಇಲ್ಲ ಎಂ... ದೇಶವನ್ನಾಳಿದ ರಾಷ್ಟ್ರೀಯ ಪಕ್ಷವೊಂದರ ಕುರಿತು ... 'ಕಾಂಗ್ರೆಸ್‌ಮುಕ್ತ' ದೇಶವನ್ನಾಗಿಸುವ ಘೋಷಣೆ ... ಹಾಗು ಮೋದಿ ಭಂಜಕರ ಸರ್ವಾಧಿಕಾರೀ ಅಥವ ... ಗುಣವನ್ನು ಎತ್ತಿ ತೋರಿಸುತ್ತದಲ್ಲದೇ ಬೇರೇನಲ್ಲ, ... 'ಅಳಿಯುವ' ಕಾಯಕದ ಅಳಿಯನ ಕುರುಡು ಜನಸ್ಕೀಗ... ಅರ್ಥವಾಗತೊಡಗಿದ್ದು ತಾವೆಂತಹ ಹಳ್ಳಕ್ಕೆ ಬಿದ್ದಿದ್ದೇ... ಜನಸಾಮಾನ್ಯರು ಪೇಚಾಡತೊಡಗಿದ್ದಾರೆ.

ನಿಜಹೇಳಬೇಕೆಂದರೆ ಮೋದಿಯಂತಹ ಅದೃಷ್... ಪ್ರಧಾನಿ ಮತ್ತೊಬ್ಬನಿಲ್ಲ, ಜನರ ಮೇಲೆ ಅತೀ ಭರವಸೆ... ಹೇರಿ ಅಧಿಕಾರಕ್ಕೇರಿದ ತತ್‌ಕ್ಷಣದಲ್ಲೇ ಪವಾಡವ... ಜರುಗಿತ್ತು, ಆಧುನಿಕ ಜಗತ್ತು ಇದೀಗ ನಿಂತಿರು... ಪೆಟ್ರೋಲ್, ಹಾಗು ಪೆಟ್ರೋಲ್ ಉತ್ಪನ್ನಗಳ ... ಪೆಟ್ರೋಲ್ ಬೆಲೆ ಏರಿದಂತೆ ಅದು ಇನ್ನಿತರ ... ಸಂಗತಿಗಳ ಮೇಲೂ ಪ್ರಭಾವ ಬೀರುತ್ತದೆ. ಹ... ಸದ್ಯದ ಜಗತ್ತಿಗೆ ಇದೀಗ ಇದೇ ಆಧಾರ. ... ಪೆಟ್ರೋಲ್ ಬೆಲೆ ಜಾಗತಿಕಮಟ್ಟದಲ್ಲಿ ಕುಸಿತ ... ಮೋದಿ ಒಂದಲ್ಲ ಎರಡಲ್ಲ ಐದಾರು ಬಾರಿ ... ಏರುಗತಿಯಲ್ಲಿ ಸಾಗುತ್ತಿದ್ದ 'ಜೀವನಾಡಿ' ಪೆಟ್... ಬೆಲೆಯನ್ನು ಇಳಿಸುತ್ತಾ ಅದು ತಾನು ಮಾ... ಮಾಡಬಹುದಾದ ತನ್ನದೇ ಸಾಧನೆ ಎಂಬಂತೆ ಬ... ಇಟ್ಟಿದ್ದ ಜನರ ಮನದಲ್ಲಿ ಮಾತಿಗೆ ತಪ್ಪದವನೆಂ... ಕಂಗೊಳಿಸಿದ್ದ, ಆದರೆ ನಂತರ ಆತ ಮಾಡಿದ್ದು...

ಮೋದಿ ಬಂದರೆ ಪಾಕಿಸ್ತಾನ ಚೀನಾಗಳು ... ಮುದುಡಿಕೊಳ್ಳುತ್ತವೆ ಎಂದು ಭಾವಿಸಿದವರಿಗೆ ... ಹಳಸಲು ಎಚ್ಚರಿಕೆಯನ್ನು ಮೋದಿ ಸರಕಾರ ಕೊ... ವಿನಃ ಏನೂ ಮಾಡಲಾಗಲಿಲ್ಲ, ಪಾಕಿಸ್ತಾನ ತಿಂಗಳೊಂ... ಏಳೆಂಟು ಬಾರಿ ಗಡಿಯಲ್ಲಿ ರಂಪಾಟ ಮುಂದುವ... ಚೀನಾದ ಕಥೆಯೂ ಇದಕ್ಕಿಂತ ಭಿನ್ನವಿರಲಿಲ್ಲ, ... ರಾಷ್ಟ್ರವನ್ನು ನಡುಗಿಸಿ ಹೆಡೆಮುರಿ ಕಟ್ಟುತ್ತಾನೆ ... ಪಾಕಿಸ್ತಾನವನ್ನೇ ಭಾರತದೊಂದಿಗೆ ವಿಲೀನಗೊಳಿಸುತ್ತಾ... ಕನಸು ಕಂಡವರಿಗೆ ಮೋದಿ ಪುಕ್ಕಲನಂತೆ ಪಾಕ್ ... ಚೈನಾದ ಕೈಕುಲುಕಲು ಹಾತೊರೆದದ್ದು ಮಹಾ ಭ... ಉತ್ತರಕುಮಾರನ ಕಥೆಯನ್ನು ನೆನಪಿಸಿದ್ದಂತೂ ... ಇನ್ನು ಕಪ್ಪು ಹಣದ ವಿಚಾರ ಬಂದಾಗಲಂತೂ ... ಮಾಡಿದ್ದೇವೆ, ವಿಚಾರ ನ್ಯಾಯಾಲಯದಲ್ಲಿದೆ' ಹಾ... ಎನ್ನುವ ಸಾಲ ತಗೊಂಡು ತಪ್ಪಿಸಿ ತಿರುಗಾಡುವ... ಸಬೂಬುಗಳು ಬರುತ್ತಿವೆಯೇ ಹೊರತು ಚುನಾ... ಪೂರ್ವದ ರೋಷಾವೇಷ ಮೋದಿ ಹಾಗು ... ಪಟಾಲಮ್‌ಗೆ ಇಲ್ಲ, ಕುರ್ಚಿಯೇರಿದ ಮೇಲೆ ... ಬೇಕಾಗಿಯೂ ಇಲ್ಲ. ರಾಮನ ಹೆಸರಲ್ಲಿ ಕುರ್ಚಿ... ರಾಮನನ್ನು ಮರೆತ ಚಾಳಿಯ ಮುಂದುವರಿಕೆ ...

ಅಂತೂ ಮೋದಿಯೆಂಬ ಅಳಿಯನ ಕು... ದಿನಕಳೆದಂತೆ ಜನರಿಗೆ ಹೆಚ್ಚೆಚ್ಚು ಅರ್ಥವಾಗತೊ... ಆತನ ಒಂದು ವರ್ಷದ ಸಾಧನೆಯಲ್ಲಿ ಆತ ಮಾಡಿ... ಕುಬೇರ ಉದ್ಯಮಿಗಳ ಪಾದ ನೆಕ್ಕಿದ್ದು. ಅವ... ಆಸ್ಟ್ರೇಲಿಯಾ ಮೊದಲಾದೆಡೆ ಶ್ರೀಮಂತ ಅ... ಭಾರತೀಯರು ಆಯೋಜಿಸುವ ಕಾರ್ಯಕ್ರಮದಲ್ಲಿ ... ದೇಶವೊಂದರ ಪ್ರಧಾನಿಯಂತೆ ಭಾಗವಹಿಸದೇ ಯಾ... ಪಾಪ್ ಸಿಂಗರ್ ತರಹ ಭಾಗವಹಿಸಿ ಅಲ್ಲಿ ಮೋದಿ... ಭಾರತವನ್ನು ಹಾಗು ತನಗೆ ಮುಳ್ಳಾಗಿರುವ ವಿ... ಪಕ್ಷವನ್ನು ಕೆಟ್ಟದಾಗಿ ಟೀಕಿಸುತ್ತಾ ಭಾರತದಲ್ಲಿ ಹು... ತಪ್ಪಾಯ್ತು ತರಹದ ಮಾತನ್ನಾಡುತ್ತಾ ಭಾರತದ ಮ... ಅನ್ಯರೆದುರು ಹರಾಜು ಹಾಕಿದ್ದು ಬಿಟ್ಟರೆ ಮು... ತೋರಲೇ ಇಲ್ಲ.

ಅದಕ್ಕೂ ಹೆಚ್ಚಾಗಿ ಹಿಂದೆ ಮೋದಿ ಭಜನೆ ಮಾ... ಪಕ್ಕಾ ಸನಾತನವಾದಿಗಳೂ ಮೋದಿ ಹಾಗು ... ಪಟಾಲಮ್ ಬಗ್ಗೆ ಇದೀಗ ಇನ್ನಿಲ್ಲದಂತೆ ಕಿಡಿ ಕಾರು... ಕಾಂಗ್ರೆಸ್ ಬಗ್ಗೆ ಮಾತುಮಾತಿಗೆ ಅಲ್ಪಸಂಖ್ಯಾತರ ತು... ಎಂದು ಕಿಡಿಕಾರುತ್ತಿದ್ದ ಇವರುಗಳು ಓಟ್ ಬ್ಯಾ...

ಮೋದಿಯೂ ಕೂಡ ಇದೇ ತಂತ್ರಕ್ಕಿಳಿದಿರುವುದು ಅವರ ಕಣ್ಣನ್ನು ಕೆಂಪಾಗಿಸಿವೆ. ಮೊನ್ನೆ ಮೋದಿಯೇ ವಿದೇಶಿ ಮಾಧ್ಯಮದ ಸಂದರ್ಶನವೊಂದರಲ್ಲಿ ಎಲ್ಲ ಧರ್ಮೀಯರನ್ನೂ ಗೌರವಿಸಬೇಕು ಅವರ ಮೇಲಾಗುವ ದಾಳಿ ಖಂಡನೀಯ ಎಂದು ಸುಭಗನಂತೆ ಮಾತನಾಡಿದ್ದ. ಆತನ ಕ್ರಿಮಿನಲ್ ಚೇಲಾ ಅಮಿತ್ ಷಾನಂತೂ ಮತ್ತೂ ಮುಂದೆ ಹೋಗಿ ಭಾರತದಲ್ಲಿ ಗೋಹತ್ಯೆ ನಿಷೇಧ ಜಾರಿ ಸಾಧ್ಯವೇ ಇಲ್ಲ ಎಂದು ಇತ್ತೀಚೆಗೆ ಹೇಳಿಕೆ ಕೊಟ್ಟು ಎಡಪಂಥೀಯರನ್ನೇ ಅಚ್ಚರಿಗೆ ಕೆಡವಿದ್ದ. ಅಂತೂ ವಿಪರೀತ ಆತ್ಮರತಿಯ ರೋಗವುಳ್ಳ ಮೋದಿಯ ಟೊಳ್ಳುತನ ಜನರೆದುರು ಇಷ್ಟು ಬೇಗ ಅನಾವರಣಗೊಳ್ಳುವುದೆಂದು ಯಾರೂ ನಿರೀಕ್ಷಿಸಿರಲಿಲ್ಲ. ಮೋದಿ ಹಾಗು ಆತನ ಚೇಲಾಗಳು ತೋರಿದ್ದ ಹುಸಿ ಭರವಸೆಗಳ ಖೆಡ್ಡಾಕ್ಕೆ ದೇಶವಾಸಿಗಳು ಬಿದ್ದಂತೂ ಆಯಿತು. ಇನ್ನು ನಾಲ್ಕು ವರ್ಷ ಈತ ದೇಶವನ್ನು ಪರದೇಸಿಗಳಿಗೆ ಇಂಚಿಂಚಾಗಿ ಮಾರುವುದನ್ನು ನೋಡುವುದಷ್ಟೇ ನಮಗಿನ್ನುಳಿದಿರುವುದು.

- ಅವಿನಾಶ್ ಎಮ್.ಎಸ್., ನೆಲ್ಲಿಕಾರ್

ಎಚ್.ಆನಂದರಾಮ ಶಾಸ್ತ್ರಿಯವರು ಮೋದಿಯ ಒಂದು ವರ್ಷವನ್ನು ವಾಸ್ತವಿಕ ನೆಲೆಗಟ್ಟಿನಲ್ಲಿ ಚರ್ಚಿಸಿರುವುದು ಪತ್ರಿಕೆಗೆ ಮೆರಗು ತರುವಂತಿದೆ. "ಸ್ವಪ್ರತಿಷ್ಠೆಯ ಅಹಂಕಾರಿ ನಾಜೂಕಯ್ಯ ಮೋದಿಯಿಂದ ಏನು ಸಾಧ್ಯ?" ಎಂಬ ಲೇಖನದಲ್ಲಿ ಮೋದಿಯ ಒಂದು ವರ್ಷ ಅವಧಿಯಲ್ಲಿ ಬರೀ ಭೂಸ ಮಾತ್ರ ಕಾಣಲು ಸಾಧ್ಯವಾಯಿತು ಎಂಬುದು ಎಷ್ಟು ಸತ್ಯವೋ, ಮೋದಿಯ ನಾಯಕತ್ವ ಬೆಂಬಲಿಸಿರುವ ಜನಗಳ ಶೇಕಡ 31ರಲ್ಲಿ ಬಹಳ ಮಂದಿಗೆ ಈ ಭೂಸವೇ ಬೇಕಾಗಿರುವುದು ಕೂಡ ಅಷ್ಟೇ ಸತ್ಯ. ಇವರಿಗೆ ದೇಶದ ಸರ್ವತೋಮುಖ ಅಭಿವೃದ್ಧಿಯಾಗಲಿ, ಜನಗಳ ನೆಮ್ಮದಿಯ ಜೀವನವಾಗಲಿ ಬೇಕಾಗಿಯೇ ಇಲ್ಲ. ಹೊಡಿ-ಬಡಿ ಸಂಸ್ಕೃತಿಯಲ್ಲೇ ಇವರ ನಂಬಿಕೆ. ಇವರ ಅಸಹನೆಗೆ ಮೂಲಕಾರಣ ಸ್ವಾತಂತ್ರ್ಯ ಬಂದಾಗಿನಿಂದ ಕೆಳವರ್ಗದ ಜನರು ಹಿಂದುಳಿದ ಜನಾಂಗ, ಅಲ್ಪಸಂಖ್ಯಾತರು ಸರ್ಕಾರಿ ಆಡಳಿತದ ಹಾದಿಲ್ಲಿ ಕಾಣಿಸಿಕೊಳ್ಳುತ್ತಿರುವುದು, ಜೀವನಮಟ್ಟ ಸುಧಾರಣೆ ಮಾಡಿಕೊಳ್ಳುತ್ತಿರುವುದು. ಇದರಿಂದ ಪಟ್ಟಭದ್ರ ಹಿತಾಸಕ್ತಿಗಳ ಮೂಲಭೂತವಾದಿಗಳ ತಳಹದಿ ಅಲ್ಲಾಡಿದಂತೆ ಭಾಸವಾಗಿ ತಳಮಳ ಉಂಟಂತಾಗಿದೆ. ಸಮಾಜದಲ್ಲಿ ಇವರ ಸ್ಥಾನಮಾನಗಳು ಪಲ್ಲಟವಾಗುತ್ತಿರುವುದು ಇವರಿಗೆ ಸಹಿಸಲಾಗುತ್ತಿಲ್ಲ ಮತ್ತು ಬದಲಾಗುತ್ತಿರುವ ನಿಜಸ್ಥಿತಿಯನ್ನು ಒಪ್ಪಿಕೊಳ್ಳಲಾಗುತ್ತಿಲ್ಲ. ಈ ಬದಲಾವಣೆ ಜಾರಿಯಲ್ಲಿರುವ ಸಂವಿಧಾನದಲ್ಲಿ ಅಳವಡಿಸಿರುವ ಅಂಗಗಳಿಂದ ಎನ್ನುವುದಕ್ಕಿಂತಲೂ, ಬಹುಕಾಲ ಆಡಳಿತ ನಡೆಸಿರುವ ಕಾಂಗ್ರೆಸ್ ಪಕ್ಷದಿಂದಲೇ ಎಂದು ಈ ಯಥಾಸ್ಥಿತಿಯ ಮೂಲಭೂತವಾದಿಗಳು ತಪ್ಪು ತಿಳಿದುಕೊಂಡಿರುವಂತಿದೆ. ಇದಕ್ಕಾಗಿಯೇ ಕಾಂಗ್ರೆಸ್‌ನ ನಿರ್ಮೂಲನೆ ಬಯಸುತ್ತಾರೆ.

ಸ್ವಾತಂತ್ರ್ಯ ಬಂದಾಗಿನಿಂದ ಮೀಸಲಾತಿಯಲ್ಲಿ ಕೇವಲ ಶೇಕಡ 1 ರಿಂದ 2ರಷ್ಟನ್ನೇ ಮಾತ್ರ ಜಾರಿಗೊಳಿಸಿದಕ್ಕೆ ಇಷ್ಟು ಪ್ರಮಾಣದಲ್ಲಿ ವಿರೋಧ ಉಂಟಾದರೇ, ಇನ್ನು ಸಂವಿಧಾನದಲ್ಲಿ ತಿಳಿಸಿರುವಂತೆ ಶೇಕಡ 18ರಷ್ಟನ್ನು ಪೂರ್ಣವಾಗಿ ಎಲ್ಲಾ ರಂಗಗಳಲ್ಲೂ ಜಾರಿಗೊಳಿಸಿದ್ದರೆ? ಈ ಕಾರಣಗಳಿಗಾಗಿಯೇ ಪ್ರತಿಗಾಮಿಗಳು ಈ ನರೇಂದ್ರ ಮೋದಿಯ ಮುಖಾಂತರ ತಮ್ಮ ಅಸಹನೆಯನ್ನು ಹೊರಹಾಕುತ್ತಿದ್ದಾರೆ. ಸಂವಿಧಾನವನ್ನೇ ಬುಡಮೇಲು ಮಾಡಲು ಹೊರಟಿದ್ದಾರೆ. ಇಂತಹ ಸಂವಿಧಾನ ವಿರೋಧಿ ಕ್ರಮಗಳೇ ಮೋದಿಯ ಆದ್ಯತೆಗಳಾಗಿವೆ ಎಂದು ಎಚ್.ಆನಂದ ರಾಮಶಾಸ್ತ್ರಿ ತಮ್ಮ ಲೇಖನದಲ್ಲಿ ಪಟ್ಟಿ ಮಾಡಿರುತ್ತಾರೆ. ಹಾಗೆಯೇ ಇವರೇ ತಿಳಿಸಿರುವಂತೆ ಇವರ ಕೆಲವು ವಿದ್ಯಾಸಂಪನ್ನ ಮಿತ್ರರು ಸಹ ಮೋದಿಯವರ ಸಂವಿಧಾನ ವಿರೋಧಿ ಕ್ರಮಗಳನ್ನೇ ಸಮರ್ಥಿಸುತ್ತಾರೆಂಬುವವರೇ ಪಟ್ಟಭದ್ರ ಹಿತಾಸಕ್ತಿಗಳು, ಮೂಲಭೂತವಾದಿಗಳು. ಆದರೆ ಈ ದೇಶದ ಶೇಕಡ 69ರಷ್ಟು ಬೃಹತ್ ಜನಸಂಖ್ಯೆ ಉದಾರವಾದಿಗಳು ಮತ್ತು ಸಂವಿಧಾನ ಪಾಲಿಸುವರಾಗಿರುವುದರಿಂದ ನರೇಂದ್ರ ಮೋದಿಯ ಅಸಂವಿಧಾನಿಕ ಕ್ರಮಗಳನ್ನು ಜಾರಿಗೊಳಿಸಲಿ ಕ್ಕಾಗದು. ಇವರ ನಡೆ-ನುಡಿಯ ವ್ಯತ್ಯಾಸದ ಬಗ್ಗೆ ಈಗಾಗಲೇ ದೇಶದ ಜನ ತೀರ್ಪಿತ್ತಿದ್ದಾರೆ. ಮುಂಬರುವ ಎಲ್ಲಾ ಚುನಾವಣೆಯಲ್ಲೂ ಶೇಕಡ 69ರಷ್ಟು ಜನರ ಕೈಮೇಲಾಗುತ್ತದೆಂಬುದರಲ್ಲಿ ಸಂಶಯವಿಲ್ಲ. ಆದುದರಿಂದ ಇನ್ನುಳಿದ 4 ವರ್ಷ ಅವಧಿಯಲ್ಲಿ ಎಲ್ಲಾ ರೀತಿಯ ಭ್ರಷ್ಟಾಚಾರಕ್ಕೂ ಈ ಮೂಲಭೂತವಾದಿಗಳು ಕುಮ್ಮಕ್ಕು ನೀಡಿ ದೇಶವನ್ನು ಅಧೋಗತಿಗೆ ತಳ್ಳುವುದಲ್ಲದೇ, ನರೇಂದ್ರ ಮೋದಿಯನ್ನು ಹರಕೆಯ ಕುರಿಯನ್ನಾಗಿ ಮಾಡಲುಬಹುದು.

- ಹೆಚ್.ಕೆ. ಈರಪ್ಪ, ಬೆಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಂಚಂಚೆ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರಿಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ಖಾನ್ ತ್ರಿಮೂರ್ತಿಗಳಿಗೆ ಸೆಡ್ಡು ಹೊಡೆದಿರುವ ಕಂಗನಾ



ಭಾಂಬ್ಲ ಎಂಬುದು ಹಿಮಾಚಲ ಪ್ರದೇಶ ರಾಜ್ಯದ ಒಂದು ಚಿಕ್ಕ ಊರು. ಪ್ರಾಯಶಃ ನಮ್ಮ ವಿರಾಜಪೇಟೆ ಅಥವಾ ತಿಪಟೂರು ತರಹದ್ದು. ಅಂತಹ ಒಂದು ಚಿಕ್ಕ ಪೇಟೆಯಲ್ಲಿ ಹುಟ್ಟಿ, ಬೆಳೆದ ಈ ಯುವತಿ ಇವತ್ತು ಇಡೀ ಬಾಲಿವುಡ್ ಬೆಕ್ಕಸಬೆರಗಾಗುವಂತೆ ಮಾಡಿದ್ದಾಳೆ.

ಅವಳ ಹೆಸರು ಕಂಗನಾ ರನೌತ್.

ಕಂಗನಾ ತ್ರಿಪುರ ಸುಂದರಿಯಲ್ಲ, ಯುವಕರ ನಿದ್ದೆಗೆಡಿಸುವಂತಹ ಮೈಮಾಟವನ್ನೂ ಅವಳು ಹೊಂದಿಲ್ಲ, ಚಿತ್ರರಂಗಕ್ಕೆ ಎಂಟ್ರಿ ಕೊಟ್ಟು ಒಂಭತ್ತು ವರ್ಷಗಳಾಗಿದ್ದರೂ ಆಕೆ ಇಲ್ಲಿಯತನಕ ಬಾಲಿವುಡ್‌ಅನ್ನು ಆಳುತ್ತಿರುವ ಖಾನ್ ತ್ರಿಮೂರ್ತಿಗಳ ನಡುವೆ ಒಬ್ಬನೊಂದಿಗೂ ಒಂದೇ ಒಂದು ಸಿನಿಮಾದಲ್ಲಿ ನಟಿಸಿಲ್ಲ, ಆದರೂ ಆಕೆ ಈಗ ಆ ಎಲ್ಲ ಖಾನ್‌ಗಳಿಗೆ ಸೆಡ್ಡು ಹೊಡೆಯುವಂತೆ ಒಂದು ಚಿತ್ರ ಬಾಕ್ಸ್‌ಆಫೀಸಿನಲ್ಲಿ ನೂರು ಕೋಟಿ ರೂಪಾಯಿಗಳನ್ನು ಸಂಗ್ರಹಿಸುವಂತೆ ಮಾಡಿದ್ದಾಳೆ.

ಆ ಸಿನಿಮಾದ ಹೆಸರು 'ತನು ವೆಡ್ಸ್ ಮನು ರಿಟರ್ನ್ಸ್'

ಬಾಲಿವುಡ್ ಇತಿಹಾಸದಲ್ಲೇ ಒಬ್ಬ ಮಹಿಳಾ ನಟಿ ಒಂದು ಸಿನಿಮಾ ಬಿಡುಗಡೆಗೊಂಡ ಎರಡು ವಾರಗಳಲ್ಲೇ ನೂರು ಕೋಟಿ ರೂಪಾಯಿಗಳನ್ನು ಗಳಿಸಿರುವುದಕ್ಕೆ ಕಾರಣವಾಗಿರುವುದು ಇದೇ ಮೊದಲ ಬಾರಿಗೆ!!

ಕಂಗನಾ ಅಪ್ರತಿಮ ಸುಂದರಿ ಅಲ್ಲದಿದ್ದರೂ ಚೆಂದ ಇರುವವಳು, ಸನ್ನಿ ಲಿಯೋನ್‌ಳ ದೇಹ ಸೌಂದರ್ಯ ಹೊಂದಿಲ್ಲದಿದ್ದರೂ ಅಚ್ಚುಕಟ್ಟಾದ ಮೈಕಟ್ಟನ್ನು ಹೊಂದಿರುವವಳು. ಅವೆಲ್ಲಕ್ಕಿಂತ ಮುಖ್ಯವಾಗಿ ಅಪ್ರತಿಮ ನಟನಾ ಪ್ರತಿಭೆಯನ್ನು ಹೊಂದಿರುವವಳು ಮತ್ತು ಹೊಸ ತರಹದ ಸಾಹಸಗಳಿಗೆ, ಪಾತ್ರಗಳಿಗೆ, ಪ್ರಯೋಗಗಳಿಗೆ ತನ್ನನ್ನು ತೆರೆದುಕೊಂಡಿರುವವಳು. ಆ ಅಂಶಗಳೇ ಇವತ್ತು ಅವಳು ಬಾಲಿವುಡ್ ಮಾತ್ರವಲ್ಲ ಭಾರತೀಯ ಚಿತ್ರರಂಗದಲ್ಲೇ ದಾಖಲೆ ಬರೆಯುವಂತಹ ನಟಿಯನ್ನಾಗಿಸಿವೆ.

ಕಂಗನಾಳ ತಂದೆ ಬ್ಯುಸಿನೆಸ್‌ಮ್ಯಾನ್, ತಾಯಿ ಶಾಲಾ ಅಧ್ಯಾಪಕಿ. ಆಕೆಯದ್ದು ಒಂದು ಮಧ್ಯಮ ವರ್ಗದ ಕುಟುಂಬ. ಎಲ್ಲಾ ಮಧ್ಯಮ ವರ್ಗದ ಪೋಷಕರ ಮತ್ತು ಮಕ್ಕಳ ಆಶೆಯಂತೆ ಕಂಗನಾ ಕೂಡ ಡಾಕ್ಟರ್ ಆಗಲು ಇಚ್ಛಿಸಿದ್ದಳು. ಆಕೆ ಓದುತ್ತಿದ್ದಾಗ ನಟನೆ, ಅದರಲ್ಲೂ ಬಾಲಿವುಡ್ ಬಗ್ಗೆ ಆಕೆ ಕನಸು ಮನಸ್ಸಿನಲ್ಲೂ ಯೋಚಿಸಿದವಳಲ್ಲ, ಆಕೆಯ ಊರಿನಲ್ಲಿ ಸಿನಿಮಾ ಮಂದಿರಗಳೇ ಇರಲಿಲ್ಲವಾದ್ದರಿಂದ ಹಿಂದಿ ಸಿನಿಮಾ ಜಗತ್ತಿನ ಬಗ್ಗೆಯೂ ಆಕೆಗೆ ಗೊತ್ತಿರಲಿಲ್ಲ, ಆಕೆ ವೀಕ್ಷಿಸಿದ ಪ್ರಥಮ ಸಿನಿಮಾ ಶಾರುಖ್ ಖಾನ್ ನಟಿಸಿದ್ದ 2002ರಲ್ಲಿ ಬಿಡುಗಡೆಗೊಂಡ 'ದೇವದಾಸ್'. ಆಗ ಕಂಗನಾ ಇನ್ನೂ ಒಂಭತ್ತನೆ ತರಗತಿಯಲ್ಲಿ ಓದುತ್ತಿದ್ದಳು.

ಆದರೆ ಆಕೆ ಚಿಕ್ಕವಳಾಗಿದ್ದಾಗಲೇ ಲಿಂಗ ತಾರತಮ್ಯದ ಬಗ್ಗೆ ಯೋಚಿಸಿದವಳು, ಪ್ರತಿಭಟಿಸಿದವಳು. ಅವಳ ಅಪ್ಪ ಆಕೆಯ ತಮ್ಮನಿಗೆ ಆಟದ ಗನ್‌ಗಳನ್ನು ಮತ್ತು ಕಂಗನಾಳಿಗೆ ಗೊಂಬೆಗಳನ್ನು ತಂದುಕೊಟ್ಟಾಗ 'ಯಾಕೆ ಹೀಗೆ?' ಎಂದು ಪ್ರಶ್ನಿಸಿದವಳು. ಜೊತೆಗೆ ಆಕೆಯ ಸಹೋದರ ವಂಶೋದ್ಧಾರಕನಾಗಬೇಕೆಂದೂ, ಕಂಗನಾ ಮತ್ತು ಆಕೆಯ ಸಹೋದರಿ ರಂಗೋಲಿಯನ್ನು ಯಾರಿಗಾದರೂ 'ದಾಟಿಸಿದರೆ ಸಾಕು' ಎಂದೂ ತನ್ನ ಪೋಷಕರು ಭಾವಿಸಿದ್ದನ್ನು ವಿಮರ್ಶಿಸಿದವಳು.



ಕಂಗನಾಳ ಬದುಕಿನ ಹಾದಿಯನ್ನು ಬದಲಾಯಿಸಿದ್ದು ಒಂದು ಘಟನೆ. ಆಗ ಆಕೆಗಿನ್ನೂ ವಯಸ್ಸು ಹದಿನೈದು. ಆದರೆ ಅಷ್ಟು ಹೊತ್ತಿಗಾಗಲೇ ತನ್ನ ವಿಚಾರಣಾ ಲಹರಿಯಲ್ಲಿ ಸ್ಪಷ್ಟತೆಯನ್ನು ಪಡೆದಿದ್ದಳು. ಒಂದು ದಿನ ಆಕೆ ತನ್ನ ಅಪ್ಪನ ಜೊತೆ ಭಾರತೀಯ ಸಮಾಜದಲ್ಲಿ ಲಿಂಗ ತಾರತಮ್ಯದ ಬಗ್ಗೆ ಚರ್ಚಿಸುತ್ತಿದ್ದಾಗ ಆಕೆಯ ಅಪ್ಪನಿಗೆ ಕೋಪ ಬಂತು. "ನೀನು ಹೀಗೆ ಎಲ್ಲ ಸಂಪ್ರದಾಯಗಳನ್ನು ಪ್ರಶ್ನಿಸಿದರೆ ನಿನ್ನ ಕಪಾಳಕ್ಕೆ ಹೊಡೆಯುತ್ತೇನೆ" ಎಂದು ಅವಳ ಅಪ್ಪ ಘರ್ಜಿಸಿದರು. ಅದಕ್ಕೆ ಪ್ರತ್ಯುತ್ತರವಾಗಿ ಕಂಗನಾ "ನೀನು ನನಗೆ ಹೊಡೆದರೆ ನಾನೂ ನಿನ್ನ ಕಪಾಳಕ್ಕೆ ಹೊಡೆಯುತ್ತೇನೆ" ಎಂದಳು. ಪ್ರಾಯಶಃ ಅವತ್ತೇ ಆ ತಂದೆಗೆ ಗೊತ್ತಾಗಿರಬೇಕೆ ತನ್ನ ಮಗಳು ಇತರರಂತಲ್ಲ ಎಂದು.

ಪಿಯುಸಿ ಮುಗಿಸಿದ ನಂತರ ಏನು ಮಾಡಬೇಕೆಂದು ನಿರ್ಧರಿಸಲಾಗದೆ ಕಂಗನಾ ಹೋದದ್ದು ದೆಹಲಿಗೆ. ಅಲ್ಲಿ ಅರವಿಂದ್ ಗೌರ್ ಎಂಬವರು ನಡೆಸುತ್ತಿದ್ದ 'ಅಸ್ಮಿತಾ' ಎಂಬ ರಂಗತಂಡವನ್ನು ಸೇರಿಕೊಂಡು ತನ್ನ ಜೀವನದಲ್ಲೇ ಮೊದಲ ಬಾರಿಗೆ ನಟನೆಯಲ್ಲಿ ತರಬೇತಿ ಪಡೆದಳು. ಆಗ ಜಾಹೀರಾತು ಸಂಸ್ಥೆಗಳ ಹಲವರೊಂದಿಗೆ ಸಂಪರ್ಕ ಏರ್ಪಟ್ಟದ್ದರಿಂದ ಕಂಗನಾ ಕೆಲ ಸಮಯ ಜಾಹೀರಾತುಗಳಲ್ಲಿ ರೂಪದರ್ಶಿಯಾಗಿ ಭಾಗವಹಿಸಿದಳು. ಆದರೆ ರೂಪದರ್ಶಿಯಾಗಿ ಯಾವ ಕಲೆಯನ್ನೂ ಪ್ರದರ್ಶಿಸಲಾಗುವುದಿಲ್ಲ ಎಂಬುದು ಅವಳಿಗೆ ಬಹಳ ಬೇಗನೆ ಅರ್ಥವಾಯಿತು. ಆಗ ಆಕೆ ನಿರ್ಧರಿಸಿದ್ದೇ ಬಾಲಿವುಡ್ ಅತ್ತ ಪಯಣಿಸುವುದು.

ಇದಕ್ಕೆ ಅವಳ ಕುಟುಂಬದವರಿಂದ ತೀವ್ರ ವಿರೋಧವಿತ್ತು, ಮುಂಬೈಗೆ ಹೋಗಿ ನಮ್ಮ ಮನೆತನದ ಹೆಸರನ್ನೇ ಕೆಡಿಸುತ್ತೀಯ ಎಂಬ ಆರೋಪವೂ ಇತ್ತು, ಕುಟುಂಬದಿಂದ ಯಾವ ಆರ್ಥಿಕ ನೆರವೂ ಇರುವುದಿಲ್ಲ 'ಎಂಬ ಧಮಕಿಯೂ ಇತ್ತು. ತನ್ನ ಜೀವನದಲ್ಲಿ ಯಾವ ಹಾದಿಯನ್ನು ತುಳಿಯಬೇಕು ಎಂಬುದರ ಬಗ್ಗೆ ನಂಬಿಕೆ ಹೊಂದಿದ್ದ ಕಂಗನಾ ಇದ್ಯಾವುದಕ್ಕೂ ಕೇರ್ ಮಾಡದೆ ಮುಂಬೈಗೆ ಹೋದಳು.

ಬಾಲಿವುಡ್ ಒಂದು ರೀತಿಯಲ್ಲಿ ಒಂದು ಕೂಟ ಇದ್ದಂತೆ, ಅಲ್ಲಿ ಅವಕಾಶಗಳು ಸಿಗಬೇಕೆಂದರೆ ಒಂದೋ ಅಲ್ಲಿನ ಪ್ರಖ್ಯಾತ ನಟ/ನಟಿ/ನಿರ್ದೇಶಕ/ ನಿರ್ಮಾಪಕ ಇತ್ಯಾದಿಗಳ ಕುಟುಂಬದಲ್ಲಿ ಜನಿಸಿರಬೇಕು. ಇಲ್ಲಾ ಚಿತ್ರರಂಗಕ್ಕೆ ಬರುವ ಮುನ್ನ ಜಾಹೀರಾತು ಅಥವಾ ಸೌಂದರ್ಯ ಸ್ಪರ್ಧೆಗಳಲ್ಲಿ ಖ್ಯಾತಿ ಗಳಿಸಿರಬೇಕು. ಕಂಗನಾಳಿಗೆ ಅವೆರಡೂ ಇರಲಿಲ್ಲ, ಸಹಜವಾಗಿಯೇ ಆರಂಭದ ದಿನಗಳಲ್ಲಿ ಕಂಗನಾ ತುಂಬಾ ಕಷ್ಟಪಡಬೇಕಾಯಿತು. ಆಕೆ ಕೈಯಲ್ಲಿ ಚಿಕ್ಕಾಸಾಗಲಿ, ತಲೆಯ ಮೇಲೊಂದು ಸೂರಾಗಲಿ, ಒಂದು ಹೊತ್ತಿನ ಊಟವಾಗಲಿ ಇಲ್ಲದೆ ಕಳೆದ ದಿನಗಳಿಗೆ ಲೆಕ್ಕವಿಲ್ಲ, ಇಷ್ಟರ ಮಧ್ಯೆಯೂ 2006ರಲ್ಲಿ 'ಗ್ಯಾಂಗ್ಸ್ಟರ್' ಎಂಬ ಚಿಕ್ಕ ಸಿನಿಮಾದಲ್ಲಿ ಪ್ರಥಮ ಅವಕಾಶವನ್ನು ಗಿಟ್ಟಿಸಿಕೊಂಡಳು. ಬಾರ್ ಒಂದರಲ್ಲಿ ಕೆಲಸ ಮಾಡುವ ಹುಡುಗಿಯ ಪಾತ್ರದಲ್ಲಿ ಆಕೆ ಎಷ್ಟು ಚಂದವಾಗಿ ನಟಿಸಿದಳೆಂದರೆ ಆಕೆಗೆ ಫಿಲಮ್ ಫೇರ್ ಪತ್ರಿಕೆ ಕೊಡುವ ಅತ್ಯುತ್ತಮ ಡೆಬ್ಯೂ ನಟಿ ಪ್ರಶಸ್ತಿ ಸಿಕ್ಕಿತು. ಅದರ ಹಿಂದೆಯೇ ಹಲವಾರು ಅವಕಾಶಗಳೂ ಹರಿದುಬಂದವು. ಆ ಎಲ್ಲ ಅವಕಾಶಗಳನ್ನು ಸದುಪಯೋಗಮಾಡಿಕೊಂಡ ಕಂಗನಾ ಒಂದಿಷ್ಟು ಮಟ್ಟಿಗೆ ಬಾಲಿವುಡ್‌ನಲ್ಲಿನ ನಿರ್ಮಾಪಕರ ಮತ್ತು ನಿರ್ದೇಶಕರ ಗಮನ ಸೆಳೆದಳು. ಆದರೆ ಆಕೆ ರಾಷ್ಟ್ರಮಟ್ಟದಲ್ಲಿ ಎಲ್ಲರೂ ಚಕಿತಗೊಳ್ಳುವಂತೆ ಮಾಡಿದ್ದು ಎರಡು ವರ್ಷಗಳ ನಂತರ. ಮಧುರ್ ಭಂಡರ್ಕರ್ ನಿರ್ದೇಶಿಸಿದ್ದ 'ಫ್ಯಾಶನ್' ಸಿನಿಮಾದಲ್ಲಿ ಪ್ರಿಯಾಂಕಾ ಚೋಪ್ರಾ ಹೀರೋಯಿನ್ ಆಗಿದ್ದರೆ ಕಂಗನಾಳದ್ದು ಪೋಷಕ ನಟಿಯ ಪಾತ್ರ. ಮಾಡೆಲಿಂಗ್ ಜಗತ್ತಿನಲ್ಲಿ ಮಾದಕ ವಸ್ತುಗಳಿಗೆ ದಾಸರಾದರೆ ಎಂತಹ ದುರಂತ ಅನುಭವಿಸಬೇಕಾಗುತ್ತಿದೆ ಎಂಬುದನ್ನು ಬಿಂಬಿಸುವ ಪಾತ್ರ ಕಂಗನಾಳದ್ದು. ಅದನ್ನು ಆಕೆ ಎಷ್ಟು ಚೆನ್ನಾಗಿ ಬಿಂಬಿಸಿದಳೆಂದರೆ ಆಕೆಗೆ ರಾಷ್ಟ್ರ ಮಟ್ಟದ ಅತ್ಯುತ್ತಮ ಪೋಷಕ ನಟಿ ಪ್ರಶಸ್ತಿ ಲಭಿಸಿತು.

ಕಂಗನಾ ತನ್ನ ಪ್ರತಿಭೆಯನ್ನು ಸಾಬೀತುಪಡಿಸಿದ್ದರೂ ಬಾಲಿವುಡ್ ಈ 'ಹೊರಗಿನವಳ'ನ್ನು ಸ್ವೀಕರಿಸಲು ಸಿದ್ಧವಿರಲಿಲ್ಲ, ಆಕೆಗೆ ಇಂಗ್ಲಿಷ್ ಚೆನ್ನಾಗಿ ಗೊತ್ತಿಲ್ಲ, ಅವಳ ಉಚ್ಚಾರಣೆ ಸರಿ ಇಲ್ಲ, ಆಧುನಿಕ ಫ್ಯಾಶನ್ ಗೊತ್ತಿಲ್ಲ ಎಂಬೆಲ್ಲ ಕಾರಣಗಳನ್ನು ಕೊಟ್ಟು ಆಕೆಯನ್ನು ದೂರವೇ ಇಟ್ಟಿತ್ತು.

ರಾಷ್ಟ್ರ ಪ್ರಶಸ್ತಿಯನ್ನು ಪಡೆದನಂತರ ಕಂಗನಾ ನಟಿಸಿದ ಹಲವಾರು ಸಿನಿಮಾಗಳು ವಿಮರ್ಶಕರ ಮೆಚ್ಚುಗೆ ಗಳಿಸಿದರೂ ಆಕೆಗೆ ಬಾಕ್ಸ್ ಆಫೀಸ್‌ನಲ್ಲಿ ಹಿಟ್ ಸಿನಿಮಾ ಸಿಕ್ಕಿರಲಿಲ್ಲ, ಅದು ಆಕೆಗೆ ಸಿಕ್ಕಿದ್ದು 2011ರಲ್ಲಿ 'ತನು ವೆಡ್ಸ್ ಮನು' ಎಂಬ ಸಿನಿಮಾ ಮೂಲಕ. ಉತ್ತರ ಪ್ರದೇಶದ ಕಾನ್ಪುರ್ ಎಂಬ ಚಿಕ್ಕ ಊರಿನ ಯುವತಿಯೊಬ್ಬಳು ತನಗೆ ಇಷ್ಟವಾದ ವರನನ್ನು ಮದುವೆಯಾಗುವ ಕತೆಯನ್ನು ಹೊಂದಿದ್ದ ಆ ಸಿನಿಮಾ ತನ್ನ ಕಥಾವಸ್ತು ಮತ್ತು ಕಂಗನಾಳ ನಟನೆಯಿಂದಾಗಿ ಹಿಟ್ ಸಿನಿಮಾ ಆಯಿತಲ್ಲದೆ, ಭಾರತದ ಚಿಕ್ಕಪುಟ್ಟ ನಗರಗಳಲ್ಲಿನ ಪ್ರೇಕ್ಷಕರು ತಮ್ಮನ್ನು ಬೆಳ್ಳಿ ತೆರೆಯ ಮೇಲೆ ಪ್ರತಿನಿಧಿಸುವ ನಟಿಯನ್ನು ಕಂಗನಾಳಲ್ಲಿ ಕಂಡುಕೊಂಡರು.

ಕಂಗನಾಳ ಪ್ರತಿಭೆಯನ್ನು ನಿಜವಾಗಲೂ ಪ್ರದರ್ಶಿಸಿದ್ದು ಹೋದ ವರ್ಷ ಬಿಡುಗಡೆಗೊಂಡ 'ಕ್ವೀನ್' ಸಿನಿಮಾ. ರಾಣಿ ಎಂಬ ಯುವತಿ ಹಸೆಮಣೆಯನ್ನು ಏರುವ ಮುನ್ನವೇ ಆಕೆಯ ಕೈಹಿಡಿಯಲಿರುವ ವಧು ಕೈಕೊಡುತ್ತಾನೆ. ಮದುವೆ ರದ್ದಾಗಿದ್ದರೂ ರಾಣಿ ಕನಸುಕಂಡಿದ್ದ ಹನಿಮೂನ್‌ಗೆಂದು ಪ್ಯಾರಿಸ್ ನಗರಕ್ಕೆ ಏಕಾಂಗಿಯಾಗಿ ಹೊರಡುತ್ತಾಳೆ. ಅದು ಒಂದು ರೀತಿಯಲ್ಲಿ ಕಂಗನಾಳ ವೃತ್ತಿ ಬದುಕಿನ ಪಯಣವೂ ಆಗಿದೆ. ಭಾಂಬ್ಲದಂತಹ ಚಿಕ್ಕ ಊರಿನಿಂದ ಮುಂಬೈಗೆ ಕಂಗನಾ ಬಂದು ತನ್ನನ್ನು ಕಂಡುಕೊಂಡಿದ್ದಂತೆ, ರಾಣಿ ಕೂಡ ಪ್ಯಾರಿಸ್ ನಗರದಲ್ಲಿ ತನ್ನೊಳಗಿರುವ ಶಕ್ತಿಯನ್ನು ಕಂಡುಕೊಳ್ಳುತ್ತಾಳೆ. ಆಕೆ ಆ ಚಿತ್ರದಲ್ಲಿ ಅದೆಷ್ಟು ಅತ್ಯದ್ಭುತವಾಗಿ ನಟಿಸಿದ್ದಳೆಂದರೆ ಆಕೆಗೆ ರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ನಟಿ ಪ್ರಶಸ್ತಿ ಲಭಿಸಿತು.

ಈ ವರ್ಷದ ಮೊದಲ ಐದು ತಿಂಗಳಲ್ಲಿ 'ಸೂಪರ್ ಹಿಟ್' ಎನಿಸಿಕೊಂಡಿರುವ ಬಾಲಿವುಡ್ ಸಿನಿಮಾಗಳು ಎರಡು ಮಾತ್ರವೆ. ಮೊದಲನೆಯದು ನಮ್ಮ ಬೆಂಗಳೂರಿನ ಬೆಡಗಿ ದೀಪಿಕಾ ಪಡುಕೋಣೆ ನಟಿಸಿರುವ 'ಪೀಕು' ಸಿನಿಮಾ. ಆದರೆ ಅದರ ಯಶಸ್ಸಿಗೆ ದೀಪಿಕಾಗಿಂತಲೂ ಮುಖ್ಯಕಾರಣವಾಗಿರುವುದು ವೃದ್ಧನ ಪಾತ್ರವನ್ನು ನಿರ್ವಹಿಸಿರುವ ಅಮಿತಾಬ್ ಬಚ್ಚನ್. ಎರಡನೆಯದು ಕಂಗನಾ ನಟಿಸಿರುವ ಮತ್ತು ಇವತ್ತು ಭಾರತದಾದ್ಯಂತ ಹುಚ್ಚೆಬ್ಬಿಸಿರುವ 'ತನು ವೆಡ್ಸ್ ಮನು ರಿಟರ್ನ್ಸ್' ಸಿನಿಮಾ. ಆದರೆ ಈ ಚಿತ್ರದ ಯಶಸ್ಸಿಗೆ ಕಾರಣ ಕಂಗನಾ ಮಾತ್ರವೇ ಹೊರತು ಬೇರೆ ಯಾರೂ ಅಲ್ಲ. ದೀಪಿಕಾಳ 'ಪೀಕು' ಚಿತ್ರದಷ್ಟು 'ತನು/ಮನು' ಅರ್ಥಗರ್ಭಿತವಾಗಿಲ್ಲದಿದ್ದರೂ ಈ ಚಿತ್ರದಲ್ಲಿ ಕಂಗನಾಳಿಗೆ ಸಿಕ್ಕಿದ ದ್ವಿಪಾತ್ರಗಳನ್ನು ಅದೆಷ್ಟು ಚೆನ್ನಾಗಿ ಬೇರ್ಪಡಿಸಿದ್ದಾಳೆಂದರೆ ನಿಜವಾಗಲೂ ಇವರಿಬ್ಬರೂ ಒಬ್ಬಳೆಯಾ ಎಂದು ಜನ ಹುಬ್ಬೇರಿಸುವಂತೆ ಮಾಡಿದ್ದಾಳೆ.

ಸಾಮಾನ್ಯವಾಗಿ ನಮ್ಮ ಸಿನಿಮಾಗಳಲ್ಲಿ ಒಬ್ಬ ನಟ ದ್ವಿಪಾತ್ರವನ್ನು ಮಾಡುವಾಗ ಎರಡೂ ಪಾತ್ರಗಳಲ್ಲಿನ ವ್ಯತ್ಯಾಸವನ್ನು ತೋರಲು ಮೀಸೆ, ಕೂದಲು ಇತ್ಯಾದಿ ತರಹದ ಸುಲಭದ ಮೇಕಪ್ ಸವಲತ್ತಿಗೆ ಶರಣಾಗುತ್ತಾರೆ. ಅಂದರೆ ಪಾತ್ರಗಳನ್ನು ಅಭಿವ್ಯಕ್ತಿಪಡಿಸುವ ವ್ಯಕ್ತಿತ್ವ, ಮನೋಭಾವ ಮತ್ತು ಹಾವಭಾವದಂತಹ ಮೂಲಭೂತ ಅಂಶಗಳತ್ತ ನಟರು ಗಮನವನ್ನೇ ಕೊಡುವುದಿಲ್ಲ, ಅಂತಹ ಒಂದು ಸೂಕ್ಷ್ಮ ವ್ಯತ್ಯಾಸವನ್ನು ಕನ್ನಡ ಸಿನಿಮಾ ಪ್ರೇಕ್ಷಕರಿಗೆ ಮೊದಲು ತೆರೆದಿಟ್ಟದ್ದು ಪ್ರತಿಭಾವಂತ ನಟ ಪ್ರಕಾಶ್ ರೈ ಎಂದರೆ ತಪ್ಪಾಗಲಾರದು. 'ನಾಗಮಂಡಲ' ಸಿನಿಮಾದಲ್ಲಿ ರೈನದ್ದು ದ್ವಿಪಾತ್ರ. ಆತ ನಿಭಾಯಿಸಿದ ಎರಡೂ ಪಾತ್ರಗಳು ಮೇಲುನೋಟಕ್ಕೆ ಒಂದೇ ತರಹ ಕಾಣಿಸಿದರೂ ವರ್ತನೆಯಲ್ಲಿ, ಅಭಿವ್ಯಕ್ತಿಯಲ್ಲಿ ಮತ್ತು ನಟನೆಯಲ್ಲಿ ಯಾವ ಪಾತ್ರ ತೆರೆಯ ಮೇಲಿದೆ ಎಂಬುದು ಜನರಿಗೆ ಅರ್ಥವಾಗುವಂತೆ ತೋರಿಸಿದ್ದು ಆತನಲ್ಲಿರುವ ಪ್ರತಿಭೆ. ಅಷ್ಟರ ಮಟ್ಟಿಗಲ್ಲದಿದ್ದರೂ 'ತನು/ಮನು' ಚಿತ್ರದಲ್ಲಿ ಕಂಗನಾ ತನ್ನ ಕೆಲಸವನ್ನು ಸಾಕಷ್ಟು ಮಟ್ಟಿಗೆ ನಿಭಾಯಿಸಿದ್ದಾಳೆ. ಅದನ್ನು ಜನ ಮತ್ತು ವಿಮರ್ಶಕರು ಗುರುತಿಸಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ಬಾಲಿವುಡ್‌ನೊಂದಿಗೆ ಯಾವ ಕಳ್ಳುಬಳ್ಳಿ ಸಂಬಂಧ ಇಲ್ಲದಿದ್ದರೂ, ಖ್ಯಾತಿ ಹೊಂದಿರುವ ಗಾಡ್ ಫಾದರ್‌ನ ಆಶ್ರಯ ಇಲ್ಲದಿದ್ದರೂ ತನ್ನ ಪ್ರತಿಭೆಯಿಂದಲೇ ಇವತ್ತು ಖಾನ್ ತ್ರಿಮೂರ್ತಿಗಳಿಗೆ ಸರಿಸಾಟಿಯಾಗಿ ನಿಂತಿರುವ ಕಂಗನಾ ಯಶಸ್ವೀ ನಟಿ ಮಾತ್ರವಲ್ಲ ನಮ್ಮ ಪುರುಷಪ್ರಧಾನ ಸಮಾಜದಲ್ಲಿ ಪ್ರತಿಭೆ ಹೊಂದಿರುವ ಮಹಿಳೆಯರಿಗೆ ಸ್ಥಾನಮಾನ ಸಿಗುತ್ತದೆ ಎಂಬುದಕ್ಕೂ ಸಂಕೇತವಾಗಿದ್ದಾರೆ.


ಗುಡ್ ಶೋ ಕಂಗನಾ!

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Friday

ಅಳಿಸುವುದಕ್ಕಿಂತ ನಗಿಸುವುದು ಕಷ್ಟ: ಸೃಜನ

ಸಂದರ್ಶನ





ಈಗ ಕಲರ್ಸ್ ಟಿವಿ ವಾಹಿನಿಯಲ್ಲಿ ಸೃಜನ್ ಲೋಕೇಶ್ ನಡೆಸಿಕೊಡುತ್ತಿರುವ 'ಮಜಾ ಟಾಕೀಸ್' ಹೆಚ್ಚು ಟಿಆರ್‌ಪಿಗಳನ್ನು ಗಳಿಸಿರುವ ಕಾರ್ಯಕ್ರಮಗಳಲ್ಲಿ ಒಂದಾಗಿದೆ. ಇದರ ಯಶಸ್ಸು ಮತ್ತು ಈ ಹಿಂದೆ ಸೃಜನ್ ತನ್ನ ಜೀವನದಲ್ಲಿ ಕಂಡಿರುವ ಸೋಲುಗಳ ಹಿನ್ನೆಲೆಯಲ್ಲಿ ಅವರನ್ನು ಮಾತನಾಡಿಸಿದ್ದು ಇಲ್ಲಿದೆ.

ಪತ್ರಿಕೆ: 'ಮಜಾ ಟಾಕೀಸ್' ಕಾರ್ಯಕ್ರಮ ಕರ್ನಾಟಕದ ಜನರನ್ನು ಮೆಚ್ಚಿಸಿದೆ. ಇದು ಇಷ್ಟು ಯಶಸ್ವೀ ಆಗುತ್ತದೆ ಎಂಬ ವಿಶ್ವಾಸ ನಿಮಗೆ ಇತ್ತಾ?

ಸೃಜನ್: ಇದು ಹಿಟ್ ಆಗುತ್ತದೆ ಎಂಬ ವಿಶ್ವಾಸ ನನಗಿತ್ತು. ಆದರೆ ನನ್ನ ನಿರೀಕ್ಷೆಗಿಂತಲೂ ಇದು ಯಶಸ್ವಿ ಆಗಿರುವುದು ಸಹಜವಾಗಿಯೇ ಸಂತೋಷ ತಂದುಕೊಟ್ಟಿದೆ.

ಪತ್ರಿಕೆ: ಎಲ್ಲರಿಗೂ ಗೊತ್ತಿರುವಂತೆ ನಿಮ್ಮ ಈ ಕಾರ್ಯಕ್ರಮ ಹಿಂದಿ ಚಾನೆಲ್ ಒಂದರಲ್ಲಿ ಪ್ರಸಾರವಾಗುವ 'ಕಾಮಿಡಿ ನೈಟ್ಸ್ ವಿತ್ ಕಪಿಲ್' ಎಂಬ ಕಾರ್ಯಕ್ರಮದ ಕನ್ನಡ ಅವತರಣಿಕೆ. ನೀವು ಕಪಿಲ್ ಅವರನ್ನು ಕಾಪಿ ಮಾಡುತ್ತಿದ್ದೀರಾ?

ಸೃಜನ್: ಈ ಹಿಂದೆ ಯಾರೋ ಒಬ್ಬರು ನನ್ನನ್ನು 'ನೀವು ಕನ್ನಡದ ಕಪಿಲ್ ಅಲ್ಲವಾ?' ಎಂದು ಪ್ರಶ್ನಿಸಿದ್ದರು. ಆಗ ನಾನು 'ಯಾಕೆ? ಆತ ಯಾಕೆ ಕನ್ನಡದ ಸೃಜನ್ ಆಗಿರಬಾರದು?' ಎಂದು ಮರು ಪ್ರಶ್ನಿಸಿದ್ದೆ! ತಮಾಷೆ ಪಕ್ಕಕ್ಕಿರಲಿ, ಕಪಿಲ್ ನಡೆಸಿಕೊಡುವ ಕಾರ್ಯಕ್ರಮಕ್ಕೂ ನಾನು ನಡೆಸುವ ಕಾರ್ಯಕ್ರಮಕ್ಕೂ ಕೆಲವು ಸಾಮ್ಯತೆಗಳಿದ್ದರೂ ಹಲವಾರು ವ್ಯತ್ಯಾಸಗಳಿವೆ. ಅಲ್ಲಿನ ಕಾರ್ಯಕ್ರಮದಲ್ಲಿರುವಂತೆ ನಮ್ಮಲ್ಲೂ ಹೆಂಡತಿಯ ಪಾತ್ರ ಮತ್ತು ಅರ್ಪಣ ಅವರು ನಿಭಾಯಿಸುವ ಪಾತ್ರಗಳಿವೆ. ಆದರೆ ನಮ್ಮಲ್ಲಿ ಪವನ್ ಮತ್ತು ದಯಾನಂದ್ ತರಹದ ಹೊಸ ಪಾತ್ರಗಳಿವೆ ಮತ್ತು ಆ ಪಾತ್ರಗಳಿಗೆ ವಿಭಿನ್ನ ತರಹದ ರೂಪರೇಷೆಗಳನ್ನು ನೀಡಿದ್ದೇವೆ.

ಪತ್ರಿಕೆ: ನಿಮ್ಮ ಈ ಕಾರ್ಯಕ್ರಮಕ್ಕೆ ಚಿತ್ರ ನಿರ್ದೇಶಕ ಇಂದ್ರಜಿತ್ ಲಂಕೇಶ್ ಅವರನ್ನು ಆಯ್ಕೆ ಮಾಡಿಕೊಂಡಿದ್ದು ಯಾಕೆ?

ಸೃಜನ್: ಇಂದ್ರಜಿತ್ ಅವರ ಪಾತ್ರ ನಮ್ಮ ಕಾರ್ಯಕ್ರಮದಲ್ಲಿ ಮೊದಲ ಪ್ರೇಕ್ಷಕನ ಪಾತ್ರ. ಕಪಿಲ್ ನಡೆಸಿಕೊಡುವ 'ಕಾಮಿಡಿ ನೈಟ್ಸ್'ನಲ್ಲಿ ಸಿದ್ದು ಅವರು ಶಾಯರಿಗಳನ್ನು ಹೇಳುತ್ತಾರೆ. ಆದರೆ ಆ ಫಾರ್ಮ್ಯಾಟ್ ಕನ್ನಡದಲ್ಲಿ ವರ್ಕ್ ಔಟ್ ಆಗುವುದಿಲ್ಲ ಅನ್ನಿಸಿತು. ಯಾಕೆಂದರೆ ಶಾಯರಿಗಳನ್ನು ಹೇಳುವ ಖ್ಯಾತನಾಮರು ನಮ್ಮಲ್ಲಿ ಇಲ್ಲ. ಆರಂಭದಲ್ಲಿ ಈ ಪಾತ್ರಕ್ಕೆ ಯಾರು ಸೂಕ್ತ ಎಂಬುದರ ಬಗ್ಗೆ ಗಾಢವಾದ ಚರ್ಚೆಗಳು ನಮ್ಮ ತಂಡದಲ್ಲಿ ನಡೆದವು. ಆಗ ಹಲವಾರು ಜನರ ಹೆಸರುಗಳು ಪ್ರಸ್ತಾಪವಾದರೂ ನನಗೆ ಸಮಾಧಾನವಾಗಲಿಲ್ಲ, ಆಗ ಒಬ್ಬರು ಇಂದ್ರಜಿತ್ ಹೆಸರನ್ನು ಪ್ರಸ್ತಾಪಿಸಿದರು. ಯಾಕೆಂದರೆ ಇಂದ್ರಜಿತ್ ಹಸನ್ಮುಖಿ. ಅವರ ನಗುವಂತೂ ದೊಡ್ಡದು. ಅವರೇ ಈ ಪಾತ್ರಕ್ಕೆ ಸರಿ ಎಂದು ನಿರ್ಧರಿಸಿದೆ.

ಪತ್ರಿಕೆ: ನೀವು ಮನರಂಜನಾ ಕ್ಷೇತ್ರಕ್ಕೆ ಬಂದದ್ದು ಹೀರೋ ಆಗಿ. ಅಲ್ಲಿ ನಿಮಗೆ ಯಶಸ್ಸು ಸಿಗಲಿಲ್ಲ, ಆಮೇಲೆ ನೀವು ಎಂಟ್ರಿ ಕೊಟ್ಟಿದ್ದು ಕಿರುತೆರೆಗೆ. ಆದರೀಗ ಯಶಸ್ಸು ಕಂಡಿರುವುದು ಕಾಮಿಡಿ ಕಾರ್ಯಕ್ರಮದ ನಿರೂಪಕರಾಗಿ. ಈ ಪಯಣದ ಬಗ್ಗೆ ಹೇಗನಿಸುತ್ತದೆ?

ಸೃಜನ್: ಹೌದು ನಾನು ಚಿತ್ರರಂಗವನ್ನು ಪ್ರವೇಶಿಸಿದ್ದು ಹೀರೋ ಆಗಿ. ಆದರೆ ನಾನು ನನ್ನ ಜೀವನದಲ್ಲಿ ಬರೀ ಯಶಸ್ಸಿಗಾಗಿ ದುಡಿದವನಲ್ಲ, ಯಾಕೆಂದರೆ ಬದುಕು ಎಂಬುದು ಕ್ರಿಕೆಟ್ ಆಟವಿದ್ದಂತೆ. ಹಲವೊಮ್ಮೆ ನಾವು ಟೆಸ್ಟ್ ಮ್ಯಾಚಿನಲ್ಲಿ ಆಡಬಹುದು ಅಥವಾ ಟಿ-20 ಆಟದಲ್ಲೂ ಆಡಬಹುದು. ಯಾವುದರಲ್ಲಿ ನಾವು ಗೆಲ್ಲುತ್ತೇವೆ ಎಂಬುದು ಮುಖ್ಯ. ಆದ್ದರಿಂದ ಆರಂಭದಲ್ಲಿ ನಾನು ಯಶಸ್ಸಿಗಿಂತ ಮುಖ್ಯವಾಗಿಸಿಕೊಂಡಿದ್ದು ಪ್ರಾಮಾಣಿಕವಾಗಿ ಕೆಲಸ ಮಾಡುವ ದಾರಿಯನ್ನು. ಅದು ಅನಿವಾರ್ಯವಾಗಿ ನನ್ನ ಹೊಟ್ಟೆಪಾಡಿನ ವಿಷಯವೂ ಆಗಿತ್ತು.

ಪತ್ರಿಕೆ: ಹಲವಾರು ಏಳುಬೀಳುಗಳ ನಂತರ ಕಾಮಿಡಿಯನ್ ಆಗಿ ಗೆದ್ದಿದ್ದೀರಿ. ಅದರ ಬಗ್ಗೆ ಹೇಗನಿಸುತ್ತದೆ?

ಸೃಜನ್: ಗೆಲುವು ಎಂಬುದು ಕೇವಲ ಒಂದು ಸಿನಿಮಾ ನೂರು ದಿನಗಳ ಪ್ರದರ್ಶನ ಕಾಣುವುದರಲ್ಲಿ ಸಿಗುವುದಿಲ್ಲ, ಬದಲಾಗಿ ನಾವು ಎಷ್ಟು ಜನರನ್ನು ತಲುಪುತ್ತೇವೆ ಎಂಬುದನ್ನು ಆಧರಿಸಿದೆ. ಈಗ ನಾನು ಬಹಳಷ್ಟು ... ತಲುಪುತ್ತಿದ್ದೇನೆ ಎಂಬುದರ ಬಗ್ಗೆ ನನಗೆ ನೆಮ್ಮದಿ ... ಸಂತೋಷ ಎರಡೂ ಇದೆ.

ಪತ್ರಿಕೆ: ನಿಮ್ಮ ಕಾರ್ಯಕ್ರಮದಲ್ಲಿರುವ ... ಅದೆಷ್ಟು ಪೂರ್ವ ನಿರ್ಧರಿತ? ಈ ಹಾಸ್ಯಭರಿತ ಸಾಲ... ಬರೆಯಲು ನಿಮ್ಮ ತಂಡದಲ್ಲಿ ಅದೆಷ್ಟು ಜನರಿದ...

ಸೃಜನ್: ಕಾಮಿಡಿ ಎಂಬುದು ಸುಲಭದ ಸಂಗ... ನಮ್ಮ ಕಾರ್ಯಕ್ರಮದ ರೂಪರೇಷೆಗಳನ್ನು ನಾನು ... ನಿರ್ಧರಿಸುತ್ತೇನೆ. ನನ್ನ ಜೊತೆ ಹಾಸ್ಯ ಸಾಲು... ಬರೆಯಲು ಇಬ್ಬರಿದ್ದಾರೆ. ಆದರೆ ಹೆಚ್ಚಿನ ... ವ್ಯಕ್ತವಾಗುವುದು ಪೂರ್ವಯೋಜಿತವಾಗಿಯಲ್ಲ ಬ... ಶೂಟಿಂಗ್ ಸಂದರ್ಭದಲ್ಲಿ. ಅದಕ್ಕೆಲ್ಲ ನಾನೇ ಕಾ...

ಪತ್ರಿಕೆ: ಅಂದರೆ ನೀವು ಮೂಲಭೂತವಾಗಿ... ಪ್ರವೃತ್ತಿಯವರೇ?

ಸೃಜನ್: ಹೌದು, ನಾನು ನನ್ನ ಮಿತ್ರರ... ಇರುವಾಗ ಕನಿಷ್ಠ ನೂರು ಚಟಾಕಿಗಳನ್ನು ಹಾರಿಸುತ್ತಿ... ಹಾಸ್ಯ ಎಂಬುದು ಸುಲಭದ ಸಂಗತಿಯಲ್ಲ. ... ಜನರನ್ನು ಸುಲಭವಾಗಿ ಕಣ್ಣೀರು ಹಾಕ... ಮಾಡಬಹುದು. ಅದಕ್ಕೆ ಒಂದಿಷ್ಟು ಮೆಲೋಡ್ರಾಮ... ಡೈಲಾಗ್‌ಗಳು, ಸನ್ನಿವೇಶ ಮತ್ತು ಹಿನ್ನೆಲೆ ಸಂಗೀತ... ಸಾಕು. ಆದರೆ ಕಾಮಿಡಿ ಅಷ್ಟು ಸುಲಭವಲ್ಲ. ... ಕಾಲದಲ್ಲಿ ನಮಗೆ ತಂತ್ರಜ್ಞಾನ ಇತ್ಯಾದಿಗಳ ನೆರವ... ಇವೆ. ಹಲವೊಮ್ಮೆ ನಟ ನರಸಿಂಹರಾಜು ತರಹ... ಆಧುನಿಕ ಸವಲತ್ತುಗಳಿಲ್ಲದೆಯೂ ಎಂತಹ ... ಹೊಮ್ಮಿಸುತ್ತಿದ್ದರು ಎಂದು ನೆನಪಿಸಿಕೊಂಡಾಗ ... ಎಷ್ಟು ಪ್ರತಿಭಾವಂತರಾಗಿದ್ದರು ಎಂಬುದು ಅರಿವಾ...

ಪತ್ರಿಕೆ: ನಿಮ್ಮ ತಂದೆ ಲೋಕೇಶ್ ಅವರು ... ಚಿತ್ರರಂಗ ಕಂಡಿರುವ ಅದ್ಭುತ ನಟರಲ್ಲಿ ಒಬ್ಬರಾ... ನಿಮ್ಮ ತಾಯಿ ಕೂಡ ಪ್ರಖ್ಯಾತ ಕಲಾವಿದೆ. ಅವರಿ... ನೀವು 'ಸೀರಿಯಸ್' ಪಾತ್ರಗಳನ್ನು ಮಾಡದೆ ಕಾಮಿಡಿ... ಆಗಿರುವುದರ ಬಗ್ಗೆ ಹೇಗನಿಸುತ್ತದೆ?

ಸೃಜನ್: ನನ್ನ ಅಪ್ಪ ಕೆಲವು ಹಾಸ್ಯಭರಿತ ಪಾತ್ರ... ನಟಿಸಿದ್ದರು. ನನ್ನ ಅಮ್ಮನದ್ದು ಹಾಸ್ಯಭರಿತ ವ್ಯಕ್ತಿತ್ವ. ... ತಮ್ಮ ಸುತ್ತಲಿನ ಜನರನ್ನು ನಗೆಯಲ್ಲಿ ಮುಳು... ಪ್ರವೃತ್ತಿಯನ್ನು ಹೊಂದಿದ್ದಾರೆ. ಹಾಸ್ಯ ನಮ್ಮ ಕುಟು... ಹೊಸದಲ್ಲ.

ಪತ್ರಿಕೆ: ನಿಮ್ಮ ಮುಂದಿನ ಯೋಜನೆಗಳು ಯಾ...

ಸೃಜನ್: 'ಮಜಾ ಟಾಕೀಸ್' ಕಾರ್ಯಕ್ರಮ... ತಮಿಳು ಮತ್ತು ತೆಲುಗಿನಲ್ಲೂ ಮಾಡಿ ಎಂಬ ಆಹ್ವಾ... ಬಂದಿವೆ. ಆದರೆ ಆ ಭಾಷೆಗಳ ಮೇಲೆ ನನಗೆ ಹಿಡಿ... ಹಾಸ್ಯಕ್ಕೆ ಆ ಭಾಷೆಯ ಸೂಕ್ಷ್ಮತೆಗಳು ಅತ್ಯಗತ್ಯ. ಸದ... ಕಾರ್ಯಕ್ರಮವನ್ನು ನಡೆಸಿಕೊಡಬೇಕೆಂದು ನ್ಯೂಜಿಲ... ಮತ್ತು ಅಮೆರಿಕಾದಲ್ಲಿನ ಪ್ರೇಕ್ಷಕರಿಂದ ಆಮಂತ್ರ... ಬಂದಿವೆ. ಅವುಗಳ ಬಗ್ಗೆ ಯೋಚಿಸುತ್ತಿದ್ದೇನೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com